ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ)

ಕರ್ನಾಟಕ ರಾಜ್ಯ ಸಮಿತಿಯ ವಾರಪತ್ರಿಕೆ

ಸಂಪುಟ 22 ಸಂಚಿಕೆ 11 ಮಾರ್ಚ್ 8-14, 1999 ರೂ. 2.00

ಬಜೆಟ್ ದೇಶದ ಗೋಳನ್ನು ಪರಿಹರಿಸುವುದಿಲ್ಲ, ಉಲ್ಬಣಗೊಳಿಸುತ್ತದೆ

ಸೀತಾರಾಂ ಯೆಚೂರಿ

ಈ ವರ್ಷದ ಕೇಂದ್ರ ಬಜೆಟಿನ ಅತ್ಯಂತ ಆತಂಕಕಾರಿ ಸಂಗತಿ ಯಾವುದು ?ಹಣಕಾಸು ಕೊರತೆಯ ತಪ್ಪು ಚಿತ್ರಣ ಕೊಡುವ 'ಕೈಚಳಕ'ವೇ ಅಥವಾ ಅರ್ಥಿಕದ ನಿಜವಾದ ಆರೋಗ್ಯ ಸ್ಥಿತಿಯನ್ನು ಅಡಗಿಸಿಡುವ ಪ್ರಯತ್ನವೇ? ಮಾತಿನ ಮಂಟಪದ ನಡುವೆ ವಿವಿಧ ಬಾಬ್ತುಗಳಿಗೆ ಅತ್ಯಲ್ಪ ಸಂಪನ್ಮೂಲಗಳ ನೀಡಿಕೆಯೇ ಅಥವಾ ಹಿಂದೆಂದೂ ಕಾಣದಷ್ಟು ಸಂಖ್ಯೆಯಲ್ಲಿ ಸಮಿತಿಗಳ ನೇಮಕವೇ? ಇವೆಲ್ಲದಕ್ಕೂ ಮಿಗಿಲಾಗಿ ಕೈಗಾರಿಕಾ ಬೆಳವಣಿಗೆಯ ನಿಧಾನಗತಿಗೆ ಕಾರಣವೇನು ಎಂಬುದರ ತಪ್ಪು ಅಂದಾಜೇ ಈ ಬಜೆಟಿನ ಅತ್ಯಂತ ಆತಂಕಕಾರಿ ಅಂಶ ಎಂದು ಸಿಪಿಐ(ಎಂ) ಪೊಲಿಟ್‌ಬ್ಯೂರೊ ಸದಸ್ಯರಾದ ಸೀತಾರಾಂ ಯೆಚೂರಿಯವರು ಹೇಳಿದ್ದಾರೆ.ಈ ತಪ್ಪು ರೋಗ ನಿದಾನದಿಂದಾಗಿ ಕೈಗೊಂಡಿರುವ ಬಜೆಟ್ ಕ್ರಮಗಳು ಆರ್ಥಿಕವನ್ನು 'ಕಿಕ್ ಸ್ಟಾರ್ಟ್' ಮಾಡುವ ಬದಲು ಹಿಂಜರಿತವನ್ನು ಇನ್ನಷ್ಟು ಹೆಚ್ಚಿಸಬಹುದು ಎಂಬ ಶಂಕೆಯನ್ನು ಅವರು ವ್ಯಕ್ತಪಡಿಸಿದ್ದಾರೆ.

ಕೈಗಾರಿಕಾ ಸ್ಥಗಿತತೆ ಮೂಲತ: ಆಗಿರುವುದು 'ಬಂಡವಾಳದ ಮಿತಿ'ಯಿಂದಾಗಿ ಎಂದು ಬಗೆದಿರುವ ಬಜೆಟ್ ಬಂಡವಾಳ ಮಾರುಕಟ್ಟೆಗೇ ಅಂದರೆ ಶೇರು ಬಾಝಾರಿಗೇ ಹೆಚ್ಚಿನ ಒತ್ತು ನೀಡಿದೆ.ಇದೇ ಈ ಬಜೆಟಿನ ಸಮಸ್ಯೆ ಎಂದಿದ್ದಾರೆ ಯೆಚೂರಿಯವರು.

ಈಗಿನ ಕೈಗಾರಿಕಾ ಹಿಂಜರಿತಕ್ಕೆ ಮುಖ್ಯ ಕಾರಣ ಬೇಡಿಕೆ ಇಳಿಮುಖವಾಗಿರುವುದು. ಏರುತ್ತಿರುವ ಹಣದುಬ್ಬರ, ಇಳಿಯುತ್ತಿರುವ ಉದ್ಯೋಗಾವಕಾಶಗಳಿಂದಾಗಿ ಕೈಗಾರಿಕಾ ಉತ್ಪಾದನೆಗಳಿಗೆ ಬೇಡಿಕೆ ಇಳಿಮುಖವಾಗಿದೆ. ಏಕೆಂದರೆ ಈ ಸರಕುಗಳ ಅಗತ್ಯವಿರುವ ಬಹುಪಾಲು ಜನಗಳ ಬಳಿ ಸಂಪನ್ಮೂಲವಿಲ್ಲ ಅಂದರೆ ಹಣವಿಲ್ಲ, ಹಣವಿದ್ದವರಿಗೆ ಈ ಸರಕುಗಳು ಬೇಕಿಲ್ಲ. ಈ ಸಮಸ್ಯೆಯನ್ನು ಎದುರಿಸುವ ಬದಲು ಬಜೆಟ್ ಒಂದು ಕಡೆ ಶೇರು ಮಾರುಕಟ್ಟೆ ಬೆಳವಣಿಗೆಗೆ ಪ್ರೋತ್ಸಾಹ ನೀಡಲು ವಿಶೇಷ ಗಮನ ನೀಡಿದರೆ ಇನ್ನೊಂದೆಡೆ ಆಂತರಿಕ ಬೇಡಿಕೆಗಳನ್ನು ಇನ್ನಷ್ಟು ಸಂಕುಚಿತಗೊಳಿಸುವ, ಉದ್ಯೋಗಾವಕಾಶಗಳನ್ನೂ ಕುಗ್ಗಿಸುವ ಕ್ರಮಗಳನ್ನೇ ಕೈಗೊಂಡಿದೆ.

ಬಜೆಟ್ ನಲ್ಲಿ ಆದಾಯ ಸಂಗ್ರಹಣೆಗೆ ಹಾಕಿರುವ ಪರೋಕ್ಷ ತೆರಿಗೆಗಳು ಹಣದುಬ್ಬರದ ಮೂಲಕ ಬಳಕೆದಾರರ ತಲೆಗೇ ಬರುತ್ತವೆ. ಅತ್ತ ಖರ್ಚಿನಲ್ಲಿ ಕಡಿತ ಬಂದಿರುವುದೂ ಮುಖ್ಯವಾಗಿ ಬಂಡವಾಳ ಖರ್ಚಿನ ಕಡಿತದಿಂಲೇ. ಕಳೆದ ವರ್ಷದ ಅನುಭವದಿಂದ ಹೇಳುವುದಾದರೆ ಇದು ವಾಸ್ತವವಾಗಿ ಇನ್ನಷ್ಟು ಕಮ್ಮಿಯಾಗುತ್ತದೆ. ಸರಕಾರದಿಂದ ಬಂಡವಾಳ ಹೂಡಿಕೆಯಲ್ಲಿ ಕಡಿತವೆಂದರೆ ಉದ್ಯೋಗಾವಕಾಶ ನಿರ್ಮಾಣದಲ್ಲೂ ಕಡಿತ, ಅಂದರೆ ನಿರುದ್ಯೋಗದ ಹೆಚ್ಚಳ ಎಂದೇ ಅರ್ಥ.

ಬಜೆಟ್ ಮೊದಲೇ ಪಡಿತರ ಬೆಲೆಯೇರಿಕೆ, ರೈಲ್ವೇ ದರ ಏರಿಕೆ, ಈಗ ಡೀಸೆಲ್ ಬೆಲೆ ಏರಿಕೆ ಹಾಗೂ ನಿರುದ್ಯೋಗ ಹೆಚ್ಚಳದ ಕ್ರಮಗಳು ಇವೆಲ್ಲಾ ಆಂತರಿಕ ಬೇಡಿಕೆಗಳನ್ನು ಕುಗ್ಗಿಸುವ ಆಮೂಲಕ ಕೈಗಾರಿಕಾ ಹಿಂಜರಿತವನ್ನು ಉಲ್ಬಣಗೊಳಿಸುವ ಕ್ರಮಗಳು.

ವಸತಿ ವಲಯಕ್ಕೆ ಹೆಚ್ಚಿನ ಪ್ರೋತ್ಸಾಹ ಹಾಗೂ ವಿವಿಧ ಗ್ರಾಮೀಣ ಯೋಜನೆಗಳಿಗೆ ಹಣ ನೀಡುವ ಮೂಲಕ ಇವನ್ನೆಲ್ಲಾ ಸರಿಪಡಿಸಬಹುದೆಂಬ ಹಣಕಾಸು ಮಂತ್ರಿಗಳ ನಿರೀಕ್ಷೆಗೂ ಆಧಾರವಿಲ್ಲ. ದೊಡ್ಡ-ದೊಡ್ಡ ನಗರಗಳಲ್ಲಿ ರಿಯಲ್ ಎಸ್ಟೇಟ್ ಬೆಲೆಗಳು ಇಳಿದರೂ ಸಾವಿರಾರು ಫ್ಲಾಟುಗಳು ಖಾಲಿ ಬಿದ್ದಿರುವುದು ಇದಕ್ಕೆ ಉದಾಹರಣೆ . ಏಕೆಂದರೆ ಜನರ ಬಳಿ ಹೇಗೋ ದೈನಂದಿನ ಖರ್ಚುಗಳನ್ನು ತೂಗಿಸುವುದಕ್ಕಿಂತ ಹೆಚ್ಚಿನ ಸಂಪನ್ಮೂಲಗಳಿಲ್ಲ. ಇನ್ನು ದೇಶದ ಬಹುಪಾಲು ರಾಜ್ಯಗಳಲ್ಲಿ, ಮುಖ್ಯವಾಗಿ ಉತ್ತರ ಪ್ರದೇಶ, ಬಿಹಾರದಲ್ಲಿ ಪಂಚಾಯತು ವ್ಯವಸ್ಥೆಯೆಂಬುದೇ ಇಲ್ಲದಿರುವಾಗ ಗ್ರಾಮೀಣ ಬೆಳವಣಿಗೆಗೆ ಪಂಚಾಯತುಗಳನ್ನೇ ಸಾಧನವಾಗಿಸುವುದರ ಅರ್ಥ ಗ್ರಾಮೀಣ ಅಭಿವೃದ್ಧಿಗೆ ಏನೂ ಕೊಡಲಾಗುವುದಿಲ್ಲ ಎಂದೇ ಅರ್ಥ ತಾನೇ?

ಅದ್ದರಿಂದ, ಒಟ್ಟಿನಲ್ಲಿ, ಈ ಬಜೆಟ್ ಭಾರತದ ಪ್ರಚಲಿತ ಗೋಳುಗಳನ್ನು ಪರಿಹರಿಸುವುದಂತೂ ದೂರ, ಅವನ್ನು ಇನ್ನಷ್ಟು ಉಲ್ಬಣಗೊಳಿಸುತ್ತದೆ. ಒಟ್ಟು ಬೇಡಿಕೆಗಳನ್ನು ಹೆಚ್ಚಿಸಲು ಸರಕಾರದ ಬಂಡವಾಳ ಹೂಡಿಕೆಯನ್ನು ಹೆಚ್ಚಿಸದೆ, ಅದಕ್ಕೆ ಸಂಪನ್ಮೂಲ ಸಂಗ್ರಹಿಸಲು ಗ್ರಾಮೀಣ ಶ್ರೀಮಂತರೂ ಒಳಗೊಂಡಂತೆ ಸಂಪನ್ನ ವಿಭಾಗಗಳಿಂದ ತೆರಿಗೆ ವಸೂಲಿ ಮಾಡದಿದ್ದರೆ ಆರ್ಥಿಕ ಬೆಳವಣಿಗೆ ನಿಧಾನಗೊಳ್ಳುತ್ತಿರುವುದನ್ನು ತಡೆಯಲು ಸಾಧ್ಯವಿಲ್ಲ ಎಂದು ಸೀತಾರಾಂ ಯೆಚೂರಿಯವರು ಹೇಳಿದ್ದಾರೆ.

ಜ್ಯೋತಿ ಬಸುರವರ ಹೇಳಿಕೆಯನ್ನು ವಿಕೃತಗೊಳಿಸುವ ಪ್ರಯತ್ನ

ಕಲ್ಕತ್ತೆಯಲ್ಲಿ ಫೆಬ್ರವರಿ 28 ರಂದು ಕಮ್ಯುನಿಸ್ಟ್ ಪ್ರಣಾಳಿಕೆಯ 150ನೇ ವಾರ್ಷಿಕೋತ್ಸವದ ಸಂದರ್ಭದಲ್ಲಿ ಸಿಪಿಐ(ಎಂ) ಪೊಲಿಟ್‌ಬ್ಯೂರೋ ಸದಸ್ಯ ಹಾಗೂ ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಜ್ಯೋತಿಬಸುರವರು "ಕಾಂಗ್ರೆಸ್ ಮುಂದಿನ ಚುನಾವಣೆಗಳಲ್ಲಿ ಗೆದ್ದರೂ ನಮಗೆ ಸಂತೋಷವೇ" ಎಂದರು ಎಂದು ಪಿಟಿಐ ಸುದ್ದಿ ಸಂಸ್ಥೆ ವರದಿ ಮಾಡಿದೆ. 'ಕಾಂ. ಜ್ಯೋತಿಬಸುರವರು ಇಂತಹದ್ದೇನನ್ನೂ ಹೇಳಲಿಲ್ಲ' ಎಂದು ಆ ಸಭೆಯಲ್ಲಿ ಭಾಗವಹಿಸಿದ್ದ ಇನ್ನೊಬ್ಬ ಸಿಪಿಐ(ಎಂ) ಪೊಲಿಟ್‌ಬ್ಯೂರೋ ಸದಸ್ಯ ಪ್ರಕಾಶ್ ಕಾರಟ್ ಒಂದು ಹೇಳಿಕೆ ನೀಡಿ ಸ್ಪಷ್ಟಪಡಿಸಿದ್ದಾರೆ.

"ಜ್ಯೋತಿ ಬಸುರವರು ಆ ಸಭೆಯಲ್ಲಿ ಹೇಳಿದ್ದು ಪಕ್ಷದ ನಿಲುವಿಗೆ ಅನುಗುಣವಾಗಿಯೇ ಇತ್ತು. ಸಂಕ್ಷಿಪ್ತವಾಗಿ ಅವರು ಹೇಳಿದ್ದಿಷ್ಟು.- ನಾವು ಕೇಂದ್ರದಲ್ಲಿನ ಬರ್ಬರ ಹಾಗೂ ಅನಾಗರೀಕ ಬಿಜೆಪಿ ಸರ್ಕಾರದ ಅಂತ್ಯ ಬಯಸುತ್ತೇವೆ. ಇದಕ್ಕಾಗಿ ನಾವು ಕಾಂಗ್ರೆಸ್‌ಗೆ ಅದು ಕೇಂದ್ರದಲ್ಲಿ ಸರಕಾರ ರಚಿಸಬಲ್ಲುದಾದರೆ ವಿಷಯಾಧಾರಿತ ಬೆಂಬಲ ನೀಡುತ್ತೇವೆ. ಕಾಂಗ್ರೆಸ್ ತಾನು ಅನುಸರಿಸುತ್ತಿರುವ ಆರ್ಥಿಕ ನೀತಿಗಳನ್ನು ವಿಮರ್ಶಿಸಬೇಕೆಂದು ಬಯಸುತ್ತೇವೆ. ಆದರೆ ಅದು ಹಾಗೆ ಮಾಡಿಲ್ಲ. ಆದರೂ ಕೇಂದ್ರದಲ್ಲಿ ನಾವು ಬಿಜೆಪಿಗಿಂತ ಒಂದು ಕಾಂಗ್ರೆಸ್ ಸರ್ಕಾರವೇ ವಾಸಿ ಎಂದು ಬಗೆಯುತ್ತೇವೆ". ಇದು ಪ್ರಸಕ್ತ ಸಂಸತ್ತನ್ನು ಗಮನದಲ್ಲಿಟ್ಟುಕೊಂಡು ಹೇಳಿದ ಮಾತೆಂಬುದು ಸ್ಪಷ್ಟ ಎಂದಿರುವ ಪ್ರಕಾಶ್ ಕಾರಟ್‌ರವರು "ಇದಲ್ಲದೆ ಜ್ಯೋತಿ ಬಸುರವರು ಮೂರನೇ ಪರ್ಯಾಯದ ಮಹತ್ವವನ್ನು ಒತ್ತಿ ಹೇಳಿದರು. ಎಡಪಕ್ಷಗಳು ಈ ಜವಾಬ್ದಾರಿಯನ್ನು ಹೊತ್ತುಕೊಳ್ಳಬೇಕು ಎಂದರು. ಪಕ್ಷದ ನಿಲುವಿನ ಈ ವಿವರಣೆಯಲ್ಲಿ ಎಲ್ಲೂ ಕಾಂಗ್ರೆಸ್ ಮುಂದಿನ ಚುನಾವಣೆಗಳನ್ನು ಗೆಲ್ಲುವ ಪ್ರಸ್ತಾಪವಿಲ್ಲ" ಎಂದಿದ್ದಾರೆ.

ಈ ತಪ್ಪು ವರದಿಯ ಆಧಾರದ ಮೇಲೆ ಪತ್ರಿಕೆಗಳು ಸಂಪಾದಕೀಯಗಳನ್ನು ಬರೆಯುವ ಪ್ರಯತ್ನ ನಡೆಸಿವೆ. ಮಾರ್ಚ್ 4 ರ 'ಇಂಡಿಯನ್ ಎಕ್ಸ್‌ಪ್ರೆಸ್' ಜ್ಯೋತಿ ಬಸುವರವರ ಮೇಲೆ ಧಾಳಿಯಿಟ್ಟು ಒಂದು ಹೊಲಸು ಸಂಪಾದಕೀಯ ಬರೆದಿದೆ. "ಸಿಪಿಐ(ಎಂ) ಇಂತಹ ಅವನತ ಶೀಲ ಕಮ್ಯುನಿಸ್ಟ್ - ವಿರೋಧಿ ಸಂಪಾದಕೀಯ ಲೇಖಕರನ್ನು ಅವರಿಗೆ ಸಲ್ಲತಕ್ಕ ತಿರಸ್ಕಾರದಿಂದಲೇ ಕಾಣುತ್ತದೆ" ಎಂದು ಪ್ರಕಾಶ್ ಕಾರಟ್ ತಮ್ಮ ಹೇಳಿಕೆಯಲ್ಲಿ ತಿಳಿಸಿದ್ದಾರೆ.



ಷೇರು ಮಾರುಕಟ್ಟೆಗಾಗಿ ಬಂಡವಾಳಿಗರಿಗಾಗಿ ಬಜೆಟ್

ಪುಟ 4

ಕೇಂದ್ರದ ಬಜೆಟ್ ಜನ-ವಿರೋಧಿಯಷ್ಟೇ ಅಲ್ಲ ರಾಜ್ಯಗಳಿಗೂ ವಿರುದ್ಧವಾದದ್ದು

ಎನ್ನುತ್ತಾರೆ ಪಶ್ಚಿಮ ಬಂಗಾಳ ಹಣಕಾಸು ಮಂತ್ರಿ ಡಾ. ಅಶೀಮ್ ದಾಸ್‌ಗುಪ್ತಾ



'ಸ್ವದೇಶಿ' ಕೇವಲ ಭಜನೆಗೆ?

—— ಪುಟ5 ——



ದೇಶವನ್ನು ಕೋಮುವಾದಿಗಳಿಂದ ಉಳಿಸುವುದು. ಮಹಿಳಾ ಆಂದೋಲನದ ಈ ವರ್ಷದ ಅಜೆಂಡಾ

ಪುಟ 8

'ಕಾರ್ಮಿಕರ ಹೋರಾಟಗಳು ನಿಮ್ಮ ಮೇಲೆಯೇ ತಿರುಗಿ ಬೀಳಬಹುದು'

ಪಟೇಲ್ ಸರ್ಕಾರಕ್ಕೆ ಡಾ.ಪಂಧೆ ಎಚ್ಚರಿಕೆ

ಕರ್ನಾಟಕದಲ್ಲಿ ಜೆ.ಎಚ್. ಪಟೇಲರ ಆಡಳಿತದಲ್ಲಿ ದುಡಿಯುವ ವರ್ಗಗಳ ನ್ಯಾಯಯುತ ಹೋರಾಟಗಳಿಗೆ ಪರಿಹಾರ ದೊರಕಿಸಿ ಕೊಡದೆ ದಮನಕಾರೀ ರೀತಿಯಲ್ಲಿ ಅಡಗಿಸಲು ನೋಡುತ್ತಿರುವ ನೀತಿಯನ್ನು ಸಿ.ಐ.ಟಿ.ಯು ಗಂಭೀರವಾಗಿ ತೆಗೆದುಕೊಳ್ಳುತ್ತದೆ. ಬಿ.ಪಿ.ಎಲ್. ಕಾರ್ಮಿಕರ ಹೋರಾಟದ ವಿವಾದವನ್ನು ಕಾರ್ಮಿಕ ಸಚಿವರು ಹಾಗೂ ಉಪಮುಖ್ಯ ಮಂತ್ರಿಗಳಾಗಿದ್ದ ಮಾನ್ಯ ಶ್ರೀ ಸಿದ್ಧರಾಮಯ್ಯನವರು ಕೈಗಾರಿಕಾ ವಿವಾದ ಮಸೂದೆಯ 10ಬಿ ಪರಿಚ್ಛೇದದ ಅಡಿ ಜಾರಿ ಮಾಡಿದ್ದ ತಾತ್ಕಾಲಿಕ ಪರಿಹಾರ ಆದೇಶವನ್ನು ಮಾನ್ಯ ಮುಖ್ಯಮಂತ್ರಿಗಳು ಖುದ್ದಾಗಿ ಆದೇಶವನ್ನು ರದ್ದು ಪಡಿಸಿರುವುದು, ಉಪಮುಖ್ಯ ಮಂತ್ರಿಗಳ ಕಾರ್ಮಿಕ ಖಾತೆಯನ್ನು ವರ್ಗಾಯಿಸಿರುವುದು ಅಲ್ಲದೆ ಬಿಪಿಎಲ್‌ನ ಮುಷ್ಕರಕ್ಕೆ ನಿಷೇಧವನ್ನು ಹಾಕಿರುವುದು ಮತ್ತು ಆಡಳಿತ ವರ್ಗವನ್ನು ಮಾತ್ರ ಯಾವುದೇ ಷರತ್ತುಗಳಿಲ್ಲದೆ ಮುಕ್ತಗೊಳಿಸಿರುವುದು ಅವರ ಜೊತೆ ಕೈ ಜೋಡಿಸಿರುವುದು ವಿಷಾದನೀಯ ಹಾಗೂ ಖಂಡನೀಯವಾಗಿದೆ ಎಂದು ಸಿಐಟಿಯು ಅಖಿಲ ಭಾರತ ಪ್ರಧಾನ ಕಾರ್ಯದರ್ಶಿ ಡಾ. ಎಂ.ಕೆ.ಪಂಧೆ ಹೇಳಿದ್ದಾರೆ. ಇಷ್ಟೇ ಅಲ್ಲದೆ 600ಕ್ಕೂ ಹೆಚ್ಚು ಕಾರ್ಮಿಕರ ಮೇಲೆ ಸುಳ್ಳು ಆರೋಪಗಳನ್ನು ಹೊರಿಸಿ ಬಂದೀಖಾನೆಗಳಿಗೆ ಹಾಕಿರುವ ರಾಜ್ಯದ ಪೋಲೀಸ್ ಇಲಾಖೆಯವರ ದುಡಿಯುವ ವರ್ಗಕ್ಕೆ ವಿರುದ್ಧವಾದ ದಮನಕಾರೀ ಧೋರಣೆ ಯಾವುದೇ ಕಾಂಗ್ರೆಸ್ಸೇತರ, ಬಿಜೆಪಿಯಲ್ಲದ ಸರ್ಕಾರಕ್ಕೆ ತಕ್ಕುದ್ದಲ್ಲ ಎಂದೂ ಅವರು ಹೇಳಿದರು. ಅವರು ಬೆಂಗಳೂರಿನಲ್ಲಿ ಮಾರ್ಚ್ 5 ರಂದು ಪತ್ರಿಕಾ ಸಮ್ಮೇಳನವೊಂದನ್ನು ಉದ್ದೇಶಿಸಿ ಮಾತನಾಡುತ್ತಿದ್ದರು.

ವಳ್ಳಿಯಪ್ಪ ಜವಳಿ ಗಿರಣಿಯ ಕೈಗಾರಿಕಾ ವಿವಾದಕ್ಕೆ ನ್ಯಾಯಯುತ ಪರಿಹಾರ ಒದಗಿಸದೆ ಬಿ.ಐ.ಎಫ್.ಆರ್. ಗೆ ಒಪ್ಪಿಸದೆ ಸರ್ಕಾರವು ಏಕಪಕ್ಷೀಯವಾಗಿ ಮುಚ್ಚುವುದಕ್ಕೆ ಆದೇಶ ನೀಡಿರುವುದೂ ಸಹ ದುಡಿಯುವ ಜನಗಳಿಗೆ ವಿರುದ್ಧವಾಗಿದೆ. ಸರ್ಕಾರದ ಈ ತಪ್ಪು ಕ್ರಮಗಳನ್ನು ಖಂಡಿಸು ವುದಲ್ಲದೆ ಇವನ್ನು ಸರಿಪಡಿಸಿಕೊಂಡು ಆಡಳಿತ ವರ್ಗವನ್ನು ಮತ್ತು ದುಡಿಯುವ ವರ್ಗವನ್ನು ಒಟ್ಟಾಗಿ ಸೇರಿಸಿ ಸಂಧಾನಗಳ ಮೂಲಕ ನ್ಯಾಯಯುತ ಒಪ್ಪಂದಗಳನ್ನು ಮಾಡಿಕೊಳ್ಳಲು ಸಹಕರಿಸಬೇಕೆಂದು ಆಗ್ರಹ ಪಡಿಸಿದ ಅವರು ಸರ್ಕಾರ ಈ ವಿವಾದಗಳನ್ನು ಸಂಧಾನಗಳ ಮೂಲಕ ನ್ಯಾಯಯುತ ಒಪ್ಪಂದಗಳನ್ನು ಮಾಡಿಕೊಳ್ಳಲು ಅನುವು ಮಾಡಿಕೊಡಲು ವಿಫಲವಾದರೆ ಈ ಹೋರಾಟಗಳು ಅವರ ಮೇಲೆಯೇ ತಿರುಗಿ ಬೀಳುತ್ತವೆ ಎಂದೂ ಅವರು ಎಚ್ಚರಿಸಿದರು.

ಪತ್ರಿಕಾ ಸಮ್ಮೇಳನದಲ್ಲಿ ಡಾ. ಪಂಧೆಯವರೊಡನೆ ರಾಜ್ಯ ಸಿಐಟಿಯು ಅಧ್ಯಕ್ಷ ಎಸ್.ಸೂರ್ಯನಾರಾಯಣ ರಾವ್ ಹಾಗೂರಾಜ್ಯ ಪ್ರಧಾನ ಕಾರ್ಯದರ್ಶಿ ವಿ.ಜೆ.ಕೆ.ನಾಯರ್ ಅವರು ಇದ್ದರು.

ಕೋಮುವಾದದ ವಿರುದ್ಧ ಸಹಿ ಸಂಗ್ರಹ ಆಂದೋಲನ ಕರ್ನಾಟಕ ರಾಜ್ಯದಲ್ಲಿ ಆರಂಭ

ಫೆಬ್ರವರಿ 20 ರಂದು ನವದೆಹಲಿಯಲ್ಲಿ ನಡೆದ 'ಕೋಮುವಾದದ ವಿರುದ್ಧ ಜನತಾ ಸಮಾವೇಶ' ದ ಕರೆಯಂತೆ ದೇಶಾದ್ಯಂತ ಧರ್ಮನಿರಪೇಕ್ಷತೆ, ಕೋಮುಸೌಹಾರ್ದ ಹಾಗೂ ರಾಷ್ಟ್ರೀಯ ಐಕ್ಯತೆಯ ರಕ್ಷಣೆ ಪ್ರತಿಜ್ಞೆಗೆ ಒಂದು ಕೋಟಿ ಸಹಿ ಸಂಗ್ರಹಿಸುವ ಆಂದೋಲನ ಮಾರ್ಚ್ 6 ರಂದು ಈ ಸಂಚಿಕೆ ಮುದ್ರಣಕ್ಕೆ ಹೋಗುವ ವೇಳೆಗೆ ಆರಂಭವಾಗಿದೆ.

ಜನತಾದಳ, ಸಿಪಿಐ(ಎಂ) ಹಾಗೂ ಸಿಪಿಐನ ಮುಖಂಡರು ಮಾರ್ಚ್ 4 ರಂದು ನಡೆಸಿದ ಜಂಟಿ ಪತ್ರಿಕಾ ಸಮ್ಮೇಳನದಲ್ಲಿ ಇದರ ವಿವರಣೆ ನೀಡಿದರು. ಬೆಂಗಳೂರಿನಲ್ಲಿ ಮಹಾತ್ಮಗಾಂಧಿಯವರ ಪ್ರತಿಮೆಯೆದುರು ಮಾರ್ಚ್ 6 ರ ಸಂಜೆ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಎಸ್.ಸೂರ್ಯನಾರಾಯಣ ರಾವ್ ಪ್ರತಿಜ್ಞೆ ಬೋಧಿಸಿದರು. ಜನತಾದಳದ ಮಾಜಿ ಸಂಸದ ಸಿ.ನಾರಾಯಣ ಸ್ವಾಮಿ, ಸಚಿವರಾದ ಕೃಷ್ಣಾರೆಡ್ಡಿ, ಕೃಷ್ಣಪ್ಪ, ಜಿಲ್ಲಾ ಜನತಾದಳದ ಅಧ್ಯಕ್ಷ ಪಿ.ಎಸ್.ಪ್ರಕಾಶ್, ಸಿಪಿಐ ರಾಜ್ಯ ಕಾರ್ಯದರ್ಶಿ ಎಂ.ಸಿ. ವೆಂಕಟ ರಾಮು, ಸಾಹಿತಿ ಚಂಪಾ, ಸಿಪಿಐ(ಎಂ)ನ ವಿಜೆಕೆ.ನಾಯರ್, ಎಸ್.ವೈ. ಗುರುಶಾಂತ್ ಹಾಗೂ ಇತರ ಕ್ಷೇತ್ರಗಳ ಪ್ರಮುಖರು ಪ್ರತಿಜ್ಞೆ ಸ್ವೀಕರಿಸುವ ಮೂಲಕ ಈ ಆಂದೋಲನ ಆರಂಭವಾಯಿತು.

ಶ್ರಮಿಕ ಜನಸಮೂಹಗಳನ್ನು ಬಲಿಗೊಟ್ಟು ಆರ್ಥಿಕ ಬಿಕ್ಕಟ್ಟನ್ನು ಪರಿಹರಿಸುವ ಆಟವನ್ನು ಸೋಲಿಸಬೇಕು

ಕಾರ್ಮಿಕ ವರ್ಗಕ್ಕೆ ಸಿಐಟಿಯು ಕರೆ

1999-2000 ದ ಕೇಂದ್ರ ಬಜೆಟ್ ಪ್ರಸ್ತಾಪಗಳು ಮಹಾವಂಚನೆಯಿಂದ ಕೂಡಿದ್ದು ಕಾರ್ಮಿಕ ವರ್ಗಕ್ಕೆ ಮತ್ತು ಭಾರತದ ಬಡಜನರಿಗೆ ಯಾವುದೇ ಪರಿಹಾರ ಒದಗಿಸಿಲ್ಲ ಎಂದು ಸಿಐಟಿಯು ಖಂಡಿಸಿದೆ. ಹಲವು ಕಾಗದದ ಮೇಲಿನ ಯೋಜನೆಗಳಿಗೆ ನೀಡುವುದಾಗಿ ಹೇಳಿರುವ ಹಣವನ್ನು ಅಧಿಕಾರಶಾಹಿಗಳು ಹಾಗೂ ಈ ಯೋಜನೆಗಳನ್ನು ನಿರ್ವಹಿಸುವ ಜನಗಳಲ್ಲಿನ ಭ್ರಷ್ಟ ಜನಗಳು ಶಾಮೀಲಾಗಿ ತಮ್ಮ ಜೇಬಿಗಿಳಿಸುತ್ತಾರೆ ಎಂದು ಅದು ಟೀಕಿಸಿದೆ.

ಆದರೆ ಬಹುರಾಷ್ಟ್ರೀಯ ಕಂಪನಿಗಳಿಗೆ ಅವರ ಬಂಡವಾಳ ಹೂಡಿಕೆ ಪ್ರಸ್ತಾವಗಳಿಗೆ ತಂತಾನೆ ಮಂಜೂರಾತಿ ನೀಡುವ ಮೂಲಕ, ಭಾರತದ ಮತ್ತು ವಿದೇಶದ ದೊಡ್ಡ ಬಂಡವಾಳಶಾಹಿ ಗುಂಪುಗಳಿಗೆ ಕಂಪನಿಗಳನ್ನು ವಿಲೀನಗೊಳಿಸಿಕೊಳ್ಳಲು, ವಹಿಸಿಕೊಳ್ಳಲು ಅವಕಾಶ ನೀಡುವ ಮೂಲಕ ಹಾಗೂ ಅನಿವಾಸಿ ಭಾರತೀಯರಿಗೆ ಹಾಗೂ ಸಟ್ಟಾಕೋರರಿಗೆ ಈ ಬಜೆಟ್ ಗಮನಾರ್ಹ ರಿಯಾಯ್ತಿ ನೀಡಿದೆ.

ಆದಾಯ ತೆರಿಗೆ ವಿನಾಯ್ತಿ ಮಿತಿಯನ್ನು ಏರಿಸದೇ ಇರುವುದು ಕಾರ್ಮಿಕ ವರ್ಗದ ದೊಡ್ಡ ವಿಭಾಗವನ್ನು ತಟ್ಟಿದೆ. ಅದರೆ ಕುಶಲ ಕಾರ್ಮಿಕರೂ ಇನ್ನು ತೆರಿಗೆ ಜಾಲದೊಳಗೆ ಬರುತ್ತಾರೆ.

ಕೃಷಿ ವಲಯದ ಶಬ್ದಾಡಂಬರದ ಯೋಜನೆಗಳು ಪ್ರಯೋಜನ ಒದಗಿಸುವುದು ಯಾವುದೇ ತೆರಿಗೆ ನೀಡದ ಗ್ರಾಮೀಣ ಶ್ರೀಮಂತರಿಗೆ ಮಾತ್ರ. ಅತ್ತ ಈ ಬಜೆಟ್ ಪ್ರಸ್ತಾಪಗಳಿಂದಾಗಿ ಗ್ರಾಮೀಣ ಬಡಜನರ ಪರಿಸ್ಥಿತಿ ಇನ್ನಷ್ಟು ಹದಗೆಡುತ್ತದೆ.

ಸ್ವಯಂ ನಿವೃತ್ತಿ ಯೋಜನೆ (VRS) ಗೆ ನೀಡಿರುವ ಹಣ ಸಾರ್ವಜನಿಕ ವಲಯದಲ್ಲಿ ಮಾನವ ಶಕ್ತಿಯನ್ನು ಇನ್ನಷ್ಟು ಕಡಿತಗೊಳಿಸ ಲಿಕ್ಕಾಗಿಯೇ. ರೋಗಗ್ರಸ್ತ ಘಟಕಗಳ ನೌಕರರಿಗೆ ಸಂಬಳ ಕೊಡಲು ಸ್ವಲ್ಪ ಹಣ ನೀಡಿದ್ದರೂ ಆ ಘಟಕಗಳ ಪುನರುಜ್ಜೀವನಕ್ಕೆ ಏನೂ ಹಣ ಒದಗಿಸಿಲ್ಲ. ಇದರಿಂದ ಈ ಉದ್ದಿಮೆಗಳಲ್ಲಿ ರೋಗಗ್ರಸ್ತತೆ ಇನ್ನಷ್ಟು ಉಲ್ಬಣಗೊಳ್ಳಲಿದೆ.

ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ ಹಿಂದಿರುಗಿಸದ ಸಾಲ(ಕಾರ್ಯನಿರ್ವಹಿಸದ ಆಸ್ತಿ-NPA) 50000 ಕೋಟಿ ರೂ.ಗಳಿದ್ದರೂ ಕೇಂದ್ರ ಸರ್ಕಾರ ದೊಡ್ಡ ಬಂಡವಾಳಿಗರಿಂದ ಇದನ್ನು ವಸೂಲಿ ಮಾಡಲು ನಿರಾಕರಿಸುತ್ತಿದೆ -ಇದು ಬ್ಯಾಂಕಿಂಗ್ ಉದ್ದಿಮೆಯ ನಿರ್ವಹಣೆಯ ಮೇಲೆ ಪ್ರತಿಕೂಲ ಪ್ರಭಾವ ಬೀರುತ್ತದೆ.

ಡೀಸೆಲ್ ಮೇಲೆ ಹೆಚ್ಚಿನ ಸುಂಕ ಸಾರ್ವಜನಿಕ ಸಾರಿಗೆ ವ್ಯವಸ್ಥೆಯನ್ನು ದುಬಾರಿಗೊಳಿಸಿ ಜನ ಸಾಮಾನ್ಯರನ್ನು ತೀವ್ರವಾಗಿ ತಟ್ಟಲಿದೆ.

ಕಂಪನಿ ವಲಯದಿಂದ ಸಾಕಷ್ಟು ತೆರಿಗೆ ಆದಾಯವನ್ನು ವಸೂಲಿ ಮಾಡಲಾಗದ ಸರಕಾರ ಬಜೆಟ್ ಖೋತಾವನ್ನು ಕಡಿತ ಮಾಡುವ ಹೆಸರಲ್ಲಿ ಸಾರ್ವಜನಿಕ ವಲಯದ ಘಟಕಗಳ ಶೇರುಗಳನ್ನು ಅತೀ ಅಗ್ಗ ದರದಲ್ಲಿ ಮಾರಿರುವ ಪ್ರಸ್ತಾಪ ಗುತ್ತೇದಾರಿ ಕಂಪನಿ ಗಳು ಮತ್ತು ವಿದೇಶಿ ಕಂಪನಿಗಳಷ್ಟೇ ಪ್ರಯೋಜನ ಒದಗಿಸುತ್ತದೆ. ಇದು ದೇಶೀ ಸಾರ್ವಜನಿಕ ವಲಯದ ಮಹತ್ವವನ್ನು ಇಳಿಸುತ್ತದೆ.

ಬಜೆಟ್ ಹಣದುಬ್ಬರವನ್ನು ಇನ್ನಷ್ಟು ಹೆಚ್ಚಿಸಿ ಜೀವನಾವಶ್ಯಕ ವಸ್ತುಗಳ ಬೆಲೆಗಳನ್ನು ಇನ್ನಷ್ಟು ಹೆಚ್ಚಿಸಲಿದೆ. ರೈಲು ಸಾಗಾಣಿಕೆ ದರ ಏರಿಕೆ, ಅಂಚೆ ದರ ಏರಿಕೆಯ ಮೂಲಕ ಜನಸಾಮಾನ್ಯರ ಪರಿಸ್ಥಿತಿ ಇನ್ನಷ್ಟು ಶೋಚನೀಯವಾಗುತ್ತದೆ ಎಂದು ಆತಂಕ ವ್ಯಕ್ತಪಡಿಸಿರುವ ಸಿಐಟಿಯು ಅಂಕೆ- ಸಂಖ್ಯೆಗಳ ಕಸರತ್ತಿನ ಮೂಲಕ ಬಜೆಟ್ ಕೊರತೆ ಕಮ್ಮಿಯಿದೆ ಎಂದು ತೋರಿಸ ಲಾಗಿದೆ. ಆದರೆ ನಿಜವಾದ ಕೊರತೆ ಬಹಳ ಹೆಚ್ಚಿರುತ್ತದೆ. ಏಕೆಂದರೆ ಆರ್ಥಿಕ ಬೆಳವಣಿಗೆಯ ನಿಧಾನಗತಿ ಈ ಬಜೆಟ್ ನಿಂದ ಇನ್ನಷ್ಟು ಉಲ್ಬಣಗೊಳ್ಳಲಿದೆ ಎಂದು ಎಚ್ಚರಿಸಿದೆ.

ಆರ್ಥಿಕದ ಬೆಳವಣಿಗೆಯ ನಿಧಾನಗತಿಯನ್ನು ತಡೆಯಲು ಬಜೆಟ್ ಯಾವುದೇ ಸಾರ್ಥಕ ಕ್ರಮ ಕೈಗೊಂಡಿಲ್ಲ. ಕಳೆದ ವರ್ಷದಂತೆ ಈ ವರ್ಷವೂ ಸರ್ವತೋಮುಖ ಬೆಳವಣಿಗೆಗೆ ಒತ್ತಾಸೆ ನೀಡಲು ಹಲವಾರು ಆಯೋಗಗಳು, ಸಂಸ್ಥೆಗಳು, ಏಜೆನ್ಸಿಗಳು ಹಾಗೂ ನಿಧಿಗಳನ್ನು ರಚಿಸುವುದಾಗಿ ಬಜೆಟ್ ಭಾಷಣದಲ್ಲಿ ಹಣಕಾಸು ಮಂತ್ರಿಗಳು ಘೋಷಿಸಿದ್ದಾರೆ. ಆದರೆ ಇಂತಹ ಘೋಷಣೆಗಳಿಂದ ಏನೂ ಆಗದು. ಇದು ಕಳೆದ ವರ್ಷದ ಅನುಭವ. ಏಕೆಂದರೆ ಈ ಬಜೆಟ್ ಕೂಡಾ ಆರ್ಥಿಕದ ನಿಧಾನಗತಿಯ ಮೂಲ ಕಾರಣಗಳನ್ನು ಪರಿಶೀಲಿಸಿ ಎದುರಿಸುವಲ್ಲಿ ವಿಫಲವಾಗಿದೆ. ಆದ್ದರಿಂದ ಹಣಕಾಸು ಮಂತ್ರಿಗಳು ನೇಮಿಸುತ್ತೇನೆಂದ ಹಲವಾರು ಆಯೋಗ ಗಳು, ರಾಷ್ಟ್ರೀಯ ಸಮಿತಿಗಳೆಲ್ಲಾ ಮುಗ್ಧರನ್ನು ವಂಚಿಸಲಿಕ್ಕಾಗಿ ಮಾತ್ರ ಎಂದಿರುವ ಸಿಐಟಿಯು ವಸತಿ ವಲಯದಲ್ಲಿ ನೀಡಿರುವ ರಿಯಾಯ್ತಿಗಳನ್ನು ಪ್ರಮುಖವಾಗಿ ಬಿಲ್ಡರ್ ಗಳ ಲಾಬಿ ತನ್ನ ಜೇಬಿಗೆ ಇಳಿಸಿಕೊಳ್ಳುತ್ತದೆ, ಏಕೆಂದರೆ ಬಿಜೆಪಿಯ ಚುನಾವಣಾ ಪ್ರಚಾರಕ್ಕೆ ಬಹಳಷ್ಟು ಹಣ ನೀಡಿದ್ದು ಈ ಬಿಲ್ಡರುಗಳೇ ಎಂದಿದೆ.

ಕಸ್ಟಮ್ಸ್ ಸುಂಕದಲ್ಲಿ 5% ಕಡಿತ ಬಹುರಾಷ್ಟ್ರೀಯ ಕಂಪನಿಗಳಿಗೆ ತಮ್ಮ ಉತ್ಪಾದನೆಗಳನ್ನು ಭಾರತಕ್ಕೆ ತಂದು ರಾಶಿ ಹಾಕಲು ನೆರವಾಗಿದೆಯಷ್ಟೆ. ಇದು ಬಜೆಟ್ ಪ್ರಸ್ತಾಪಗಳ ಹಿಂದೆ ಐಎಂಎಫ್- ವಿಶ್ವ ಬ್ಯಾಂಕ್‌ನ ಕೈವಾಡವಿರುವುದನ್ನು ಬಯಲಿಗೆಳೆದಿದೆ ಎಂದು ಟೀಕಿಸಿರುವ ಸಿಐಟಿಯು ಕಾರ್ಮಿಕ ಸಂಘಗಳು ಹಾಗೂ ಕಾರ್ಮಿಕ ವರ್ಗ ಈ ಸಿರಿವಂತ-ಪರ, ಬಡವರ ವಿರುದ್ಧವಾದ ಬಜೆಟ್ ಪ್ರಸ್ತಾಪಗಳ ವಿರುದ್ಧ ಪ್ರತಿಭಟನೆಗಳನ್ನು ಸಂಘಟಿಸಬೇಕು ಎಂದು ಕರೆನೀಡಿದೆ. ಈ ಮೂಲಕ ದೇಶದ ಕಾರ್ಮಿಕ ವರ್ಗ ಹಾಗೂ ಶ್ರಮಿಕ ಜನಸಮೂಹಗಳನ್ನು ಬಲಿಗೊಟ್ಟು ಆರ್ಥಿಕ ಬಿಕ್ಕಟ್ಟನ್ನು ಪರಿಹರಿಸುವ ಬಿಜೆಪಿ ನೇತೃತ್ವದ ಸರಕಾರದ ಆಟವನ್ನು ನೇರವಾಗಿ ಸೋಲಿಸಬೇಕು ಎಂದು ಅದು ಹೇಳಿದೆ.



ಬಿಜೆಪಿ ನೇತೃತ್ವದ ಸರಕಾರದ 'ಪ್ರಯಾಣಿಕರ ವರ್ಷ'ದ ರೈಲು ಬಜೆಟ್ ನೀಡಿರುವುದೇನು?

- ಎಲ್ಲಾ ಸರಕುಗಳ ಸಾಗಾಣಿಕೆ ದರದಲ್ಲಿ ಸಾರಾಸಗಟು 4% ಹೆಚ್ಚಳ.
- ಎರಡನೇ ದರ್ಜೆಯ ಸಾಮಾನ್ಯ ಪ್ರಯಾಣದರದಲ್ಲಿ ಏರಿಕೆಯಿಲ್ಲ.
  - ಸ್ಲೀಪರ್ ಪ್ರಯಾಣಕ್ಕೆ ಎರಡನೇ ದರ್ಜೆಯ ಸಾಮಾನ್ಯ ಪ್ರಯಾಣ ದರದ 1.55 ಪಟ್ಟು
  - ಹವಾನಿಯಂತ್ರಿತ 3 ಟಿಯರ್‌ಗೆ 4.5 ಪಟ್ಟು
  - ಮೊದಲ ತರಗತಿ 5.25 ಪಟ್ಟು
  - ಹವಾನಿಯಂತ್ರಿತ 2 ಟಿಯರ್‌ಗೆ 7.2 ಪಟ್ಟು
  - ಹವಾನಿಯಂತ್ರಿತ 1 ನೇ ತರಗತಿ 14.4 ಪಟ್ಟು
  - ಇದರಿಂದ ಎರಡನೇ ದರ್ಜೆ ಸ್ಲೀಪರ್ ಪ್ರಯಾಣದ ದರಗಳು 5 ರಿಂದ 12% ರಷ್ಟು ಹೆಚ್ಚಲಿವೆ.
- ಎಲ್ಲಾ ಪಾರ್ಸೆಲ್, ಲಗ್ಗೇಜ್ ದರಗಳಲ್ಲೂ 4% ಏರಿಕೆ.
- ಸಾಗಾಣಿಕೆ ದರ ಏರಿಕೆಯಿಂದ 700 ಕೋಟಿ ರೂ. ಹಾಗೂ ಪ್ರಯಾಣದರ ಏರಿಕೆಯಿಂದ 200 ಕೋಟಿ ರೂ. ಸಂಗ್ರಹ-ಒಟ್ಟು 900 ಕೋಟಿ. ರೂ.ಗಳ ಹೊಸ ಹೊರೆ.
- ವಾಸ್ತವವಾಗಿ ಈ ಹೊರೆ ಹೇರುವ ಅವಶ್ಯಕತೆಯಿರಲಿಲ್ಲ. ರೈಲು ಖಾತೆ ಸರಕಾರದ ಸಾಮಾನ್ಯ ರೆವಿನ್ಯೂ ಆದಾಯಕ್ಕೆ 1489 ಕೋಟಿರೂ.ಗಳ ಡಿವಿಡೆಂಡ್ ನೀಡಿತ್ತು. ಇದನ್ನು ರೈಲು ಇಲಾಖೆಯೇ ಇಟ್ಟುಕೊಳ್ಳಲು ಸರಕಾರ ಬಿಟ್ಟಿದ್ದರೆ, ಪ್ರಯಾಣಿಕರಿಗೆ ಸ್ವಲ್ಪ ರಿಯಾಯ್ತಿಗಳನ್ನು ನೀಡಿ ನಿಜವಾದ ಅರ್ಥದಲ್ಲಿ 'ಪ್ರಯಾಣಿಕರ ವರ್ಷ' ಆಚರಿಸಬಹುದಿತ್ತು.
- 1999-2000 ರ ವಾರ್ಷಿಕ ಯೋಜನೆಯ ಗಾತ್ರ 9700 ಕೋಟಿ ರೂ. ಕಳೆದ ವರ್ಷದ ಗಾತ್ರ 9500 ಕೋಟಿ ರೂ. ಇದ್ದದ್ದನ್ನು 8750 ಕೋಟಿ ರೂ.ಗಳಿಗೆ ಇಳಿಸಲಾಗಿತ್ತು.
- 14 ಹೊಸ ರೈಲುಗಳ ಆರಂಭ. ಇದರಲ್ಲಿ ಕರ್ನಾಟಕದ ಪಾಲಿಗೆ ಕೇವಲ ಎರಡು - ಬೆಂಗಳೂರಿನಿಂದ ಸಿಕಂದರಾಬಾದ್ ಮಾರ್ಗವಾಗಿ ಜಯಪುರಕ್ಕೆ ಹಾಗೂ ರಾಯಚೂರು-ಗುಲ್ಬರ್ಗ ಇಂಟರ್‌ಸಿಟಿ ರೈಲು, ಕರ್ನಾಟಕದ ಸರಕಾರ ಕೇಳಿದ್ದು 11 ಹೊಸ ರೈಲುಗಳನ್ನು; ಕೇಳಿದ 9 ಹೊಸ ರೈಲು ಮಾರ್ಗ ಯೋಜನೆಗಳಲ್ಲಿ 3 ಮಾತ್ರ; ಹೊಸ ಮಾರ್ಗ ಸಮೀಕ್ಷೆಯ ಬೇಡಿಕೆಯಲ್ಲಿ ಒಂದಕ್ಕೆ ಮಾತ್ರ ಪುರಸ್ಕಾರ; 5 ಜೋಡಿ ಮಾರ್ಗಗಳ ಬೇಡಿಕೆಗಳಲ್ಲಿ ಒಂದಕ್ಕೆ ಮಾತ್ರ ಕಿವಿಗೊಡಲಾಗಿದೆ.
- ಹೊಸ ಯೋಜನೆಗಳ ವಿತರಣೆಯಲ್ಲಿ ಬಿಜೆಪಿ ಮತ್ತು ಅದರ ಮಿತ್ರ ಪಕ್ಷಗಳ ಆಳ್ವಿಕೆಯ ರಾಜ್ಯಗಳಿಗೆ ಪಕ್ಷಪಾತದ ಆರೋಪ. ಹಿಂದುಳಿದ ಪ್ರದೇಶಗಳನ್ನು ರೈಲು ಜಾಲದಲ್ಲಿ ಒಳಗೊಳ್ಳುವ ಪ್ರಶ್ನೆಯನ್ನು ಕೈಗೆತ್ತಿಕೊಂಡಿಲ್ಲ.

ಸರಕಾರದ ಮಿತ್ರರ ದುಂದು ವೆಚ್ಚಕ್ಕೆ ಜನರೇಕೆ ಬೆಲೆ ತೆರಬೇಕು?

ಇದು ಅಖಿಲ ಭಾರತ ಕೃಷಿ ಕೂಲಿಕಾರರ ಸಂಘ ಭಾರತ ಸರಕಾರಕ್ಕೆ ಕೇಳಿರುವ ಪ್ರಶ್ನೆ. ಸರಕಾರ ತನ್ನ ಈ ದುಷ್ಟ ಪ್ರಯತ್ನದಿಂದ ಹಿಂದೆ ಸರಿಯಬೇಕು ಎಂದು ಅದು ಎಚ್ಚರಿಸಿದೆ. ತರಕಾರಿಗಳ ವಿಪರೀತ ಬೆಲೆಯೇರಿಕೆ, ಒಂದು ಪೈಸೆಯೂ ತೆರಿಗೆ ನೀಡದ ಪಂಜಾಬಿನ ಭೂಮಾಲಕರಿಗೆ ಪುಕ್ಕಟ್ಟೆ ವಿದ್ಯುತ್, ಬಹುರಾಷ್ಟ್ರೀಯ ಕಂಪನಿಗಳು, ಬಂಡವಾಳಿಗರಿಂದ ತೆರಿಗೆ ಸಂಗ್ರಹದಲ್ಲಿ ವಿಫಲತೆ, ಬ್ಯಾಂಕಿಂಗ್ ಮತ್ತು ವಿಮಾ ವಲಯವನ್ನು ತೆರೆಯುವಂತೆ ಬಲವಂತ ಮಾಡಿ, ರೂಪಾಯಿ ಬೆಲೆ ಇಳಿಯುವಂತೆ ಮಾಡಿರುವುದು ಭಾರತ ದೊಂದಿಗೆ ವ್ಯಾಪಾರವನ್ನು ಹೆಚ್ಚಿಸಲು ನಿರಾಕರಿಸುತ್ತಿರುವುದು ಇದಕ್ಕೆಲ್ಲಾ ಜನ ಸಾಮಾನ್ಯರು ಬೆಲೆ ತೆರಲು ಸಾಧ್ಯವಿಲ್ಲ ಎಂದು ಹೇಳಿದೆ.

ಕಚ್ಚಾ ತೈಲದ ಬೆಲೆಗಳು ಹಿಂದೆಂದೂ ಕಾಣದ ರೀತಿಯಲ್ಲಿ ಇಳಿಯುತ್ತಿರುವಾಗ ಡೀಸೆಲ್‌ನ ಬೆಲೆಯನ್ನು ಲೀಟರಿಗೆ 1 ರೂ. ನಂತೆ ಏರಿಸಿರುವುದು, ಅದರ ಜತೆಗೆ ಆಹಾರ ವಸ್ತುಗಳೂ ಸೇರಿದಂತೆ ಎಲ್ಲಾ ರೈಲು ಸಾಗಾಣಿಕೆಗಳ ದರವನ್ನು 4% ಹೆಚ್ಚಿಸಿರುವುದು ಜೀವನಾವಶ್ಯಕ ವಸ್ತುಗಳೂ ಸೇರಿದಂತೆ ಎಲ್ಲವುಗಳ ಬೆಲೆಗಳನ್ನು ವಿಪರೀತವಾಗಿ ಏರಿಸಲಿದೆ. ಇದನ್ನು ಈಗಾಗಲೇ 5 ಮಿಲಿಯ ಟನ್ ಆಹಾರ ಧಾನ್ಯ ಉತ್ಪಾದನೆ ಕೊರತೆ ಹಾಗೂ ಉತ್ತರ ಪ್ರದೇಶ ಪೂರ್ವ ಭಾಗದಲ್ಲಿ ಬರ ಪರಿಸ್ಥಿತಿ ಎದುರಿಸುತ್ತಿರುವ ಬಡವರು ಸಹಿಸಿಕೊಳ್ಳುವ ಸ್ಥಿತಿಯಲ್ಲಿಲ್ಲ. ಆಗಲೇ ಬಜೆಟ್ ಮೊದಲು ಪಡಿತರ ಬೆಲೆಯೇರಿಕೆ, ಅಡುಗೆ ಅನಿಲ ಬೆಲೆಯೇರಿಕೆ ಬಳಕೆದಾರರಿಂದ 3200 ಕೋಟಿ ರೂ.ಗಳನ್ನು ಸುರಿದರೆ. ಕೇವಲ ಒಂದು ಹೊತ್ತು ಕೂಳಿನಿಂದಲೇ ಜೀವನ ನಡೆಸಬೇಕಾಗಿದ್ದ ಜನರ ಬದುಕ ಮೇಲೆ ಇದೊಂದು ಕ್ರೂರ ಹಲ್ಲೆಯೇ ಸರಿ ಎಂದಿರುವ ಕೃಷಿ ಕೂಲಿಕಾರರ ಸಂಘ ಇದಕ್ಕೆ ದೃಢ ಪ್ರತಿರೋಧ ಬರುತ್ತದೆ ಎಂದಿದೆ.

ಅಬಕಾರಿ ಸುಂಕಗಳನ್ನು ತರ್ಕ ಸಂಗತಗೊಳಿಸಲಾಗಿದೆ ಎನ್ನುವುದಾಗಲೀ, ಮತ್ತಿತರ ಕ್ರಮಗಳಾಗಲೀ ಸರಕಾರದ ದುಂದು ವೆಚ್ಚವನ್ನು ಇಳಿಸಿಲ್ಲ. ಹಣಕಾಸು ಕೊರತೆ ಈಗಲೂ ಒಟ್ಟು ರಾಷ್ಟ್ರೀಯ ಉತ್ಪನ್ನದ 6% ರಷ್ಟಿದೆ. ಕೇಂದ್ರದಲ್ಲಿರುವ ಬಿಜೆಪಿ ಸರಕಾರ ದೇಶ ಇದುವರೆಗೆ ಸಹಿಸಬೇಕಾಗಿ ಬಂದ ಅತಿ ದುಬಾರಿ ಸರಕಾರ ಎಂದಿರುವ ಅಖಿಲಭಾರತ ಕೃಷಿಕೂಲಿಕಾರರ ಸಂಘ ಸರಕಾರ ಖರ್ಚು ಇಳಿಸಬೇಕಾದರೆ ಪ್ರಭುತ್ವಯಂತ್ರದ ಖರ್ಚನ್ನು ಕಮ್ಮಿ ಮಾಡಬೇಕೇ ಹೊರತು ಆಹಾರ ಉತ್ಪಾದನೆ, ಅಂಚೆ ಸೇವೆ, ರೈಲು ದರಗಳ ಏರಿಕೆಯನ್ನಲ್ಲ, ಅಥವಾ ಸಾರ್ವಜನಿಕ ವಲಯವನ್ನು ಮಾರಿ ತಿನ್ನುವ ಮೂಲಕವಲ್ಲ ಎಂದಿದೆ. ಲಾಹೋರ್ ಪ್ರಯಾಣದ ಬಗ್ಗೆ ಬಹಳಷ್ಟು ಹೇಳಿಕೊಂಡರೂ ಸರಕಾರ ರಕ್ಷಣಾ ವೆಚ್ಚವನ್ನು ಹೆಚ್ಚಿಸಿದೆ.

ಈಗಾಗಲೇ ವಿಮಾ ವಲಯವನ್ನು ವಿದೇಶಿ ಹೂಡಿಕೆದಾರರಿಗೆ ತೆರೆದಿರುವುದರಿಂದ ಶಾಲೆ, ನೀರಾವರಿ, ಗ್ರಾಮೀಣ ಅಭಿವೃದ್ಧಿಗೆ ದೊರೆಯುವ ಹಣದಲ್ಲಿ ಭಾರೀ ಅಂತರ ಬರುತ್ತದೆ. ಒಟ್ಟಿನಲ್ಲಿ ಪ್ರಸಕ್ತ ಬಜೆಟ್ ಈ ಸರಕಾರಕ್ಕೆ ಸಾಲ ಕೊಟ್ಟವರು ಮತ್ತು ಎಲ್ಲಾ ರೀತಿಯ ಲಾಭಕೋರರ ಬಿಟ್ಟು ಬೇರೆಲ್ಲರನ್ನು ನಾಶ ಮಾಡುವಂತದ್ದು ಎಂದಿರುವ ಅಖಿಲ ಭಾರತ ಕೃಷಿ ಕೂಲಿಕಾರರ ಸಂಘ ಈ ಪ್ರವೃತ್ತಿಯನ್ನು ಬದಲಿಸುವಂತೆ ಜನ ಒತ್ತಡ ತರಬೇಕು ಎಂದು ಕರೆ ನೀಡಿದೆ.

ಉದಾರೀಕರಣ ಮಾಡಿದ ಅನರ್ಥ ಆರ್ಥಿಕ ಸಮೀಕ್ಷೆ

ಕೇಂದ್ರ ಸರ್ಕಾರ ಸಂಸತ್ತಿನಲ್ಲಿ 1998-99 ರ ಆರ್ಥಿಕ ಸಮೀಕ್ಷೆಯನ್ನು ಮಂಡಿಸಿದೆ. ದೇಶದ ಆರ್ಥಿಕ ಪರಿಸ್ಥಿತಿ ಎಷ್ಟ್ಟು ಹದಗೆಟ್ಟು ಹೋಗಿದೆ ಎಂಬುದನ್ನು ಈ ಸಮೀಕ್ಷೆ ಬಹಳ ಸ್ಪಷ್ಟವಾಗಿ ಎತ್ತಿತೋರಿಸಿದೆ. ಆದರೆ ಬಿಜೆಪಿ ಸರ್ಕಾರ ಇದು ಎರಡನೇ ಸುತ್ತಿನ ಆರ್ಥಿಕ ಸುಧಾರಣೆಗಳ ಅಗತ್ಯವನ್ನು ಎತ್ತಿತೋರಿಸಿದೆ ಎಂದು ಹೇಳಿಕೊಂಡಿದೆ. ಎರಡು ಮೂರು ನಾಲ್ಕು, ಐದು ಹೀಗೆ ಎಷ್ಟು ಸುತ್ತು ಆರ್ಥಿಕ ಸುಧಾರಣೆಗಳನ್ನು ಮಾಡಿದರೂ ಬಂಡವಾಳಶಾಹಿ ವ್ಯವಸ್ಥೆ ಬಿಕ್ಕಟ್ಟಿನಿಂದ ಬಿಕ್ಕಟ್ಟಿಗೆ ಹೋಗುತ್ತದೆಯೇ ವಿನ: ಬಿಕ್ಕಟ್ಟಿನಿಂದ ಹೊರಗಲ್ಲ.

ಉದಾರೀಕರಣದ ಆರ್ಥಿಕ ನೀತಿಗಳಿಂದಾಗಿ ಆರ್ಥಿಕ ಇನ್ನೂ ಗಟ್ಟಿಯಾಗಬೇಕಾಗಿತ್ತು. ಆರ್ಥಿಕ ಗಟ್ಟಿಯಾದರೆ ಜಾಗತಿಕ ಪರಿಸ್ಥಿತಿಯಲ್ಲಿ ಸಣ್ಣ ಪುಟ್ಟ ಬದಲಾವಣೆಗಳು ನಮ್ಮ ಆರ್ಥಿಕದ ಮೇಲೆ ಪರಿಣಾಮ ಬೀರಬಾರದಲ್ಲವೇ? ಆದರೆ ಆದಕ್ಕೆ ಬದಲಾಗಿ ಪರಿಸ್ಥಿತಿ ಹದಗೆಡುತ್ತಿರುವುದು ಸಮೀಕ್ಷೆಯಿಂದಲೂ ಸ್ಪಷ್ಟವಾಗಿದೆ.

ಈ ಸಮೀಕ್ಷೆಯ ಮುಖ್ಯಾಂಶಗಳು ಕೆಳಗಿನಂತಿವೆ. ಆರ್ಥಿಕ ಬೆಳವಣಿಗೆ ದರ 1997-98 ರಲ್ಲಿ ಶೇ. 5.00 ರಷ್ಟು ಮತ್ತು 1996-97 ರಲ್ಲಿ ಶೇ. 7.8. ರಷ್ಟು ಇದ್ದದು ಈ ಸಾಲಿಗೆ ಶೇ. 5.8 ಕ್ಕಿಳಿದಿದೆ,

1998-99 ರಲ್ಲಿ ಆಹಾರಧಾನ್ಯ ಉತ್ಪಾದನೆ 195.3 ದಶಲಕ್ಷ ಟನ್ನುಗಳಷ್ಟಾಗಲಿದೆ. 1998ರ ಏಪ್ರಿಲ್ ಡಿಸೆಂಬರ್ ಅವಧಿಯಲ್ಲಿ ಔದ್ಯಮಿಕ ಬೆಳವಣಿಗೆದರ ಶೇ. 3.5ಕ್ಕೆ ಇಳಿದಿದೆ. 1997 ರ ಇಡೀ ಅವಧಿಯಲ್ಲಿ ಅದು ಶೇ.6.7 ರಷ್ಟು ಅಂತರ್ರಚನಾ ಸೌಲಭ್ಯಗಳಲ್ಲೂ ಈ ಅವಧಿಯಲ್ಲಿ ಇಳಿತವಾಗಿದೆ. ಒಟ್ಟು ಆಂತರಿಕ ಉಳಿತಾಯದ ಪ್ರಮಾಣ ಶೇ 24.4. ರಿಂದ ಶೇ. 23.1 ಕ್ಕೆ ಇಳಿದಿದೆ.

ವ್ಯಾಪಾರ ಬ್ಯಾಂಕಿಂಗ್ ಪರಿಸ್ಥಿತಿ ಕೈ ಮೀರಿ ಹೋಗಿಲ್ಲ. ಯಾಕೆಂದರೆ ಇಲ್ಲಿಯವರೆಗೆ ಆಮದಿನ ಪ್ರಮಾಣ ತೀವ್ರ ಹೆಚ್ಚಾಗಿಲ್ಲ.

ಜಾಗತಿಕ ಬೆಲೆಗಳು ಕುಸಿದಿರುವುದರಿಂದ ರಫ್ತು ಬೆಳವಣಿಗೆ ಕಡಿಮೆಯಾಗಿದೆ.

ವಿದೇಶೀ ನೇರ ಹೂಡಿಕೆ ಶೇ. 79.3 ರಷ್ಟು ಇಳಿದಿದೆ ಹಣದುಬ್ಬರದ ದರದಲ್ಲಿ ಪ್ರಾಥಮಿಕ ವಸ್ತುಗಳ ಬೆಲೆಗಳ ಪಾಲು ಶೇ. 60 ರಷ್ಟು ಖಾಸಗಿ ವಲಯದಲ್ಲಿ ಉದ್ಯೋಗಗಳ ಬೆಳವಣಿಗೆ ವೇಗ ಹೆಚ್ಚಿದೆ ಇತ್ಯಾದಿ. ಹೀಗೆ ಈ ಆರ್ಥಿಕ ಸಮೀಕ್ಷೆಯ ಅಂಶಗಳು ಮಾರುಕಟ್ಟೆ ಆರ್ಥಿಕ ಪದ್ಧತಿ ಎಂತಹ ಅನಾಹುತಗಳನ್ನು ತರಬಹುದೆಂಬುದಕ್ಕೆ ಸಾಕ್ಷಿ.

ರೈತ-ವಿರೋಧಿ ನಿಜ ಸ್ವರೂಪವನ್ನು ಮುಚ್ಚಿಡುವ ವಂಚಕ ಬಜೆಟ್

ಅಖಿಲ ಭಾರತ ಕಿಸಾನ್ ಸಭಾ ಟೀಕೆ

ಸಂಸತ್ತಿನಲ್ಲಿ ಮಂಡಿಸಿದ 1999-2000 ದ ಬಜೆಟ್‌ನ ಹೊರ ಸ್ವರೂಪ ವಂಚಕ ತನದಿಂದ ಕೂಡಿದ್ದು ವಾಸ್ತವವಾಗಿ ಅದು ಜನ-ವಿರೋಧಿ, ರೈತ-ವಿರೋಧಿ ಸ್ವರೂಪದ್ದು ಎಂದು ಅಖಿಲ ಭಾರತ ಕಿಸಾನ್ ಸಭಾ ಅಭಿಪ್ರಾಯ ಪಟ್ಟಿದೆ. ಗ್ರಾಮೀಣ ಅಭಿವೃದ್ಧಿ , ಆಹಾರ ಭದ್ರತೆ ಇತ್ಯಾದಿಗಳ ಬಗ್ಗೆ ಅದು ಮಾತನಾಡುತ್ತದೆ. ಆದರೆ ವಾಸ್ತವವಾಗಿ ಈ ವಿವಿಧ ಬಾಬ್ತುಗಳಿಗೆ ತೆಗೆದಿರಿಸಿದ ಹಣ ವಾಸ್ತವ ಮೌಲ್ಯದಲ್ಲಿ ನೋಡಿದರೆ ಇಳಿದಿದೆ. ಇದು ನೀರಾವರಿ, ವಿದ್ಯುತ್ ಮತ್ತಿತರ ಕೃಷಿ ವಲಯಕ್ಕೆ ಬೇಕಾದ ಮೂಲರಚನೆಗಳ ಮೇಲೆ ಭಾರೀ ದುಷ್ಪರಿಣಾಮ ಬೀರಲಿದೆ. ಅದಾಗಲೇ ಬಜೆಟ್ ಮೊದಲೇ ರಸಗೊಬ್ಬರ ಬೆಲೆಯೇರಿಕೆ, ನಂತರ ರೈಲು ಸಾಗಾಣಿಕೆ, ಡೀಸೆಲ್ ಮತ್ತು ಅಂಚೆದರಗಳ ಏರಿಕೆ ಇವೆಲ್ಲಾ ಗ್ರಾಮೀಣ ಜನಸಾಮಾನ್ಯರನ್ನೇ ಅತಿ ಹೆಚ್ಚಾಗಿ ತಟ್ಟಲಿದೆ. ವಿವಿಧ ಗ್ರಾಮೀಣ ಅಭಿವೃದ್ಧಿ ಯೋಜನೆಗಳಿಗೆ ಸಾಕಷ್ಟು ಹಣವನ್ನು ಕೊಡದೇ ಕೇವಲ ಹೆಸರುಗಳನ್ನು ಬದಲಿಸಿರುವುದು ವಂಚಕ ತನವಷ್ಟೆ. ಇದು ನಿಜ ಪರಿಸ್ಥಿತಿಯನ್ನೇನೂ ಬದಲಿಸುವುದಿಲ್ಲ. ಆರೋಗ್ಯ, ಶಿಕ್ಷಣ ಇತ್ಯಾದಿ ಸಾಮಾಜಿಕ ವಲಯಗಳನ್ನು ಸಂಪೂರ್ಣವಾಗಿ ನಿರ್ಲಕ್ಷಿಸಲಾಗಿದೆ ಎಂದಿರುವ ಕಿಸಾನ್ ಸಭಾ ಶ್ರೀಮಂತರಿಗೆ ರಿಯಾಯ್ತಿಗಳು ಹಾಗೂ ಬಹುರಾಷ್ಟ್ರೀಯ ಕಂಪನಿಗಳಿಗೆ ಹಾಗೂ ದೊಡ್ಡ ಬಂಡವಾಳಿಗರಿಗೆ ಗ್ರಾಮೀಣ ವಲಯದಲ್ಲಿ ಹಾರ್ದಿಕ ಆಹ್ವಾನ ನೀಡಿರುವುದು ನಮ್ಮ ಆಹಾರ ಭದ್ರತೆಗೆ ಅಪಾಯವೊಡ್ಡಲಿದೆ, ಸ್ವಯಂ ಪೂರ್ಣತೆಯನ್ನು ಕಳಚಿ ಹಾಕಲಿದೆ ಹಾಗೂ ಅಂತಿಮವಾಗಿ ಇಡೀ ದೇಶಕ್ಕೆ ಅಪಾರ ಸಂಕಟಗಳನ್ನು ತರಲಿದೆ ಎಂದಿದೆ.

ಜನಸಾಮಾನ್ಯರು, ವಿಶೇಷವಾಗಿ ರೈತಾಪಿ ಜನ ಈ ಬಜೆಟನ್ನು, ಬಿಜೆಪಿ ಸರಕಾರದ 'ಉದಾರ' ನೀತಿಗಳನ್ನು ಒಗ್ಗಟ್ಟಿನಿಂದ ವಿರೋಧಿಸಬೇಕು ಎಂದು ಅಖಿಲ ಭಾರತ ಕಿಸಾನ್ ಸಭಾ ಕರೆ ನೀಡಿದೆ.

ಗ್ರಾಮ ಪಂಚಾಯತ್ ನೌಕರರ ಯಶಸ್ವಿ ಹೋರಾಟ

ಕಳೆದ ಹನ್ನೆರಡು ವರ್ಷಗಳ ನಿರಂತರ ಹೋರಾಟ, ಜೊತೆಗೆ ಫೆಬ್ರವರಿ 1 ರಿಂದ ಆರು ದಿವಸ ರಾಜ್ಯಾದ್ಯಂತ ಹಾಗೆಯೇ ಬೆಂಗಳೂರು ಕೆ.ಆರ್. ವೃತ್ತದಲ್ಲಿ ಸಂಘದ ಪದಾಧಿಕಾರಿಗಳಾದ ಮಾರುತಿ ಮಾನ್ಪಡೆ, ಸಿ.ಆರ್ ಭಟ್ ಮತ್ತು ಗಾಂಧಿನಗರ ನಾರಾಯಣ ಸ್ವಾಮಿಯವರ ಆಮರಣ ಉಪವಾಸದ ಪರಿಣಾಮವಾಗಿ ರಾಜ್ಯದ 5500ಕ್ಕೂ ಹೆಚ್ಚು ಪಂಚಾಯತಿಗಳಲ್ಲಿ ದುಡಿಯುತ್ತಿರುವ 32 ಸಾವಿರ ಗ್ರಾಮ ಪಂಚಾಯತಿ ನೌಕರರ ಗಂಭೀರ ಸಮಸ್ಯೆಗಳತ್ತ ಸರಕಾರದ ಗಮನ ಸೆಳೆಯುವಲ್ಲಿ ಹಾಗೂ ಅವರಿಗೆ ಮಧ್ಯಂತರ ಪರಿಹಾರ ಒದಗಿಸುವುದರಲ್ಲಿ ಯಶಸ್ವಿಯಾಗಿದೆ. ಹಲವಾರು ವರ್ಷಗಳಿಂದ ಗ್ರಾಮ ಪಂಚಾಯತಿಗಳಲ್ಲಿ ನಿರಂತರ ದುಡಿಯುತ್ತ ಬಂದಿರುವವರನ್ನು ನೌಕರರೆಂದು ಪರಿಗಣಿಸಲೂ ನಿರಾಕರಿಸುತ್ತಿದ್ದ ಜನತಾದಳ ಸರಕಾರದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಎಂ.ಪಿ. ಪ್ರಕಾಶ್ ಮತ್ತು ಗ್ರಾಮೀಣಾಭಿವೃದ್ಧಿ ಅಧಿಕಾರಿಗಳ ವಿಚಾರಧಾರೆಯಲ್ಲಿ ಬದಲಾವಣೆ ತರಲು ಪಂಚಾಯತಿಗಳಲ್ಲಿ ದುಡಿಯುತ್ತಿರುವವರು ಅಧಿಕಾರ ವಿಕೇಂದ್ರೀಕರಣ ವ್ಯವಸ್ಥೆಯ ಯಶಸ್ವಿ ಕಾರ್ಯಾಚರಣೆಯ ಒಂದು ಅಂಗವಾಗಿದೆಂಬುದನ್ನು ಒಪ್ಪಿಕೊಳ್ಳುವಂತೆ ಮಾಡಿ ಅವರನ್ನು ಪೂರ್ಣಕಾಲದ ನೌಕರರೆಂದು ಪರಿಗಣಿಸುವಂತೆ ಮಾಡಲು 14 ಸಾವಿರ ಗ್ರಾಮ ಪಂಚಾಯತ್ ನೌಕರರ ಫೆಬ್ರವರಿ ತಿಂಗಳ ಹೋರಾಟ ದಿಂದ ಸಾಧ್ಯವಾಗಿದೆ. ಗ್ರಾಮ ಪಂಚಾಯತ್ ನೌಕರರ ಸಂಘ ಶಕ್ತಿಯ ಅರಿವನ್ನು ಕಂಡ ಎಂ.ಪಿ. ಪ್ರಕಾಶ್ ಅವರು 12-2-99 ರಂದು ಜಂಟೀ ಸಭೆ ಕರೆದು ಬೇಡಿಕೆಗಳ ಕುರಿತು ದೀರ್ಘಚರ್ಚೆ ನಡೆಸಿದ ನಂತರ ಪಂಚಾಯತ್ ರಾಜ್ ಕಾರ್ಯದರ್ಶಿ ಮತ್ತು ಯೂನಿಯನ್ ಮುಖಂಡರು ಇನ್ನೂ ಹೆಚ್ಚು ಚರ್ಚೆಮಾಡಿ ಒಮ್ಮತ ಅಭಿಪ್ರಾಯಕ್ಕೆ ಬಂದದ್ದಾದರೆ ಅಂತಿಮ ನಿರ್ಣಯ ಕೈಗೊಳ್ಳಲು ಸಹಾಯವಾಗುತ್ತದೆಂದು ಸೂಚಿಸಿದ ಹಿನ್ನೆಲೆಯಲ್ಲಿ ಮೂರು ಸುತ್ತಿನ ಸುದೀರ್ಘ ಚರ್ಚೆ ನಡೆದ ನಂತರ ಒಮ್ಮತದ ಅಭಿಪ್ರಾಯಕ್ಕೆ ಬರಲು ಸಾಧ್ಯವಾಗಿದೆ. ಬಹುತೇಕ ಆ ಅಭಿಪ್ರಾಯಗಳನ್ನು ಮಂತ್ರಿಗಳು ಒಪ್ಪಿಕೊಂಡು ಕೆಲವು ಮಟ್ಟಿಗಾದರೂ ನೌಕರರ ಬೇಡಿಕೆಗಳಿಗೆ ಪರಿಹಾರ ಒದಗಿಸಬಹುದೆಂಬ ನಿರೀಕ್ಷೆ ಹೊಂದಿದ್ದೇವೆ. ನೌಕರರ ಕುರಿತು ಕಿಂಚಿತ್ತೂ ಕಾಳಜಿ ಇಲ್ಲದ ಸರಕಾರದಿಂದ ಪಂಚಾಯತಿ ನೌಕರರಿಗೆ ಸ್ವಲ್ಪವಾದರೂ ಮಧ್ಯಂತರ ಪರಿಹಾರ ಕೊಡಿಸಲೇ ಬೇಕೆಂಬ ಛಲದಿಂದ ಸಂಘದ ಮುಖಂಡರು ಬಿಲ್‌ಕಲೆಕ್ಟರರಿಗೆ ರೂ 1500, ವಾಟರ್ ಪಂಪ್ ಅಪರೇಟರಿಗೆ ರೂ 1200, ಅಟೆಂಡರ್ ಸ್ವೀಪರಿಗೆ ರೂ 900 ಮಾಸಿಕ ವೇತನ ಸಿಗಬೇಕೆಂಬ ಬೇಡಿಕೆಯಿಂದಾಗಿ ಮಾತುಕತೆ ವಿಫಲಗೊಳ್ಳುವಂಥ ಸಂದಿಗ್ಧ ಪರಿಸ್ಥಿತಿ ಉಂಟಾದಾಗ ಅದನ್ನು ರೂ 1,100 ರೂ 800 ರೂ700ಕ್ಕೆ ಇಳಿಸಿ ಒಮ್ಮತ ಸಾಧಿಸಲು ಸಾಧ್ಯವಾಗಿದೆ. ಈಗ ರಾಜ್ಯದಲ್ಲಿ ಕೆಲಸಗಾರರಿಗೆ ರೂ 200 ರಿಂದ ರೂ 2000 ದವರೆಗೆ ವೇತನ ಸಿಗುತ್ತಿದೆ. ರಾಜ್ಯದಲ್ಲಿ ಏಕ ರೂಪದ ವೇತನ ವ್ಯವಸ್ಥೆ ಬರಬೇಕೆಂಬ ಉದ್ದೇಶದಿಂದ 1993 ರಲ್ಲಿ ಜಿ. ವೈಘೋರ್ಪಡೆಯವರಿದ್ದಾಗ ನಿರ್ಧರಿಸಿದ ಗರಿಷ್ಟ ಮಿತಿಗೆ ಈಗ ರೂ 200 ಹೆಚ್ಚಿಸಿ, ಅದನ್ನು ಕನಿಷ್ಟ ವೇತನವನ್ನಾಗಿ ಪರಿಗಣಿಸಿದರೆ ರಾಜ್ಯದ 70% ಕ್ಕೂ ಹೆಚ್ಚಿನ ನೌಕರರಿಗೆ ತಿಂಗಳ ವೇತನ ರೂ 400-500 ರಷ್ಟು ಹೆಚ್ಚಾಗುತ್ತದೆಂದು ತಿಳಿದು ಒಂದು ಒಮ್ಮತ ಸಾಧಿಸುವ ಪ್ರಯತ್ನ ನಡೆಯಿತು. ಗ್ರಾಮ ಪಂಚಾಯತಿಗಳ ಆರ್ಥಿಕ ಪರಿಸ್ಥಿತಿ ಆರೋಗ್ಯಕರವಾಗಿದ್ದಲ್ಲಿ ಹೆಚ್ಚಿನ ವೇತನ ನೀಡಲು ಅವಕಾಶ ಕೊಡುವ ಸರಕಾರಿ ಆದೇಶ 1994 ರಲ್ಲೆ ಹೊರಡಿಸಿರುವುದರಿಂದ ಈಗ ನಿರ್ಧರಿಸಿದ ಕನಿಷ್ಟ ವೇತನಕ್ಕಿಂತ ಹೆಚ್ಚಿಗೆ ಪಡೆಯಲು ಅವಕಾಶವಿದೆ. ಹಾಗೆಯೇ ಹೆಚ್ಚಿಗೆ ಸರ್ವಿಸ್ ಆದವರಿಗೆ ಸೇವೆಗನುಸರಿಸಿ ವೈಟೇಜ್ ಪಡೆಯಬಹುದಾಗಿದೆ.

ಈಗಾಗಲೇ ಧಾರವಾಡ, ಬೆಳಗಾವಿ, ಬಿಜಾಪುರಗಳಲ್ಲಿ ಸೇವಾ ನಿಯಮಗಳು ಮತ್ತು ಗ್ರಾಚ್ಯೂಟಿ ಜಾರಿಯಲ್ಲಿದ್ದು ಅದನ್ನೇ ಎಲ್ಲಾ ಜಿಲ್ಲೆಗಳಲ್ಲಿ ಜ್ಯಾರಿಯಲ್ಲಿ ತರುವಂತೆ ಸರಕಾರಿ ಆಜ್ಞೆ ಹೊರಡಿಸುವುದು.

ಈ ಮುಖ್ಯ ಬೇಡಿಕೆಗಳ ಕುರಿತು ಆರ್ಥಿಕ ಖಾತೆಯ ಅಧಿಕಾರಿಗಳ ಜೊತೆಯಲ್ಲಿ ಚರ್ಚೆ ನಡೆದಿದ್ದು ಕೆಲವೇ ದಿವಸದೊಳಗೆ ಸರಕಾರಿ ಆಜ್ಞೆ ಹೊರಬೀಳಲಿದೆ. ಈ ಹೆಚ್ಚುವರಿ ವೇತನ 1-4-99 ರಿಂದ ಜಾರಿಯಲ್ಲಿ ಬರಲಿದೆ.

ಸರಕಾರದ ಜೊತೆಯಲ್ಲಿ ಚರ್ಚೆ ನಡೆದಾಗ ಪರಿಷತ್ ಬೇಡಿಕೆಗಳನ್ನು ಮಂಡಿಸಿರುವುದರಿಂದ ಅದರ ಕುರಿತು ಅಭಿಪ್ರಾಯ ಪಡೆಯಲು 3-3-99 ರಂದು ಬೆಂಗಳೂರಿನಲ್ಲಿ ಸೇರಿದ ಕಾರ್ಯಕಾರಿ ಸಮಿತಿ ಯೂನಿಯನ್ ಮುಖಂಡರ ಪ್ರಯತ್ನವನ್ನು ಪ್ರಶಂಸಿಸಿ ಕೆಲವು ತಿದ್ದುಪಡಿಗಳನ್ನು ಸೂಚಿಸಿ, ಸಂಘಟನೆಯನ್ನು ಬಲಗೊಳಿಸುವ ನಿರ್ಣಯ ಕೈಗೊಂಡಿತು. ಮಂತ್ರಿ ಎಂ.ಪಿ. ಪ್ರಕಾಶ್ ಅವರು ಕಮಿಟಿಯ ಎಲ್ಲ ಸದಸ್ಯರನ್ನು ಭೇಟಿಮಾಡಿ ಯೂನಿಯನ್ ಮುಖಂಡರು ಒಮ್ಮತ ಸಾಧಿಸಲು ಸಹಕರಿಸಿರುವುದನ್ನು ಪ್ರಶಂಸಿಸಿ ಸರಕಾರಿ ಆಜ್ಞೆಯನ್ನು ಆದಷ್ಟು ಬೇಗ ಹೊರಡಿಸುವ ಆಶ್ವಾಸನೆ ನೀಡಿದರು.

ಫೆಬ್ರವರಿ ತಿಂಗಳ ಹೋರಾಟದಿಂದ ದಿಗಿಲುಗೊಂಡ ಮಂತ್ರಿ ಮಹಾಶಯರು ಕೆಲಸಗಾರರ ಸಂಘಟನೆಯಲ್ಲಿ ಗೊಂದಲ ಉಂಟುಮಾಡುವ ಪ್ರಯತ್ನ ಕೂಡ ನಡೆಸಿದ್ದಾರೆ. ಎಲ್ಲೋ ನಿಷ್ಕ್ರಿಯರಾಗಿ ಬಿದ್ದಿರುವ ಯೂನಿಯನ್ ಮುಖಂಡರೆಂದು ಹೇಳಿಕೊಳ್ಳುವ ಕೆಲವರನ್ನು ಫೆಬ್ರವರಿ 12 ರ ಜಂಟೀ ಸಭೆಗೂ ಅನಂತರ ಕಾರ್ಯದರ್ಶಿ ಜೊತೆಯಲ್ಲಿ ನಡೆದ ಚರ್ಚೆಯಲ್ಲಿಯೂ ಪಾಲ್ಗೊಳ್ಳುವಂತೆ ಮಾಡಿ ತಾವೇ ಛೀಮಾರಿಯಾಗಿದ್ದಾರೆ. ಅವರ ಬೇಡಿಕೆಗಳು ಬೇರೆಯಾಗಿರುವುದರಿಂದ ಅವರ ಜೊತೆಯಲ್ಲಿ ಪ್ರತ್ಯೇಕ ಚರ್ಚೆ ನಡೆಸಬೇಕೆಂದು ನಾವು ಒತ್ತಾಯಮಾಡಿದಾಗ ನಮ್ಮ ಬೇಡಿಕೆಗಳಿಗೆ ಹೊಂದಿಕೊಂಡು ಹೋಗುತ್ತೇವೆಂದು ಹೇಳಿ ಚರ್ಚೆಯಲ್ಲಿ ಭಾಗವಹಿಸಿ 22-2-99 ರಂದು ತಮ್ಮನ್ನು ಸರಕಾರಿ ನೌಕರರೆಂದು ಪರಿಗಣಿಸುತ್ತೇವೆ ವೇತನ ಶ್ರೇಣಿಯನ್ನು ಜಾರಿಗೊಳಿಸಬೇಕೆಂದು ಹೇಳಿ ಮೈಸೂರು ಮತ್ತು ಒಂದೆರಡು ಕಡೆ ಧರಣಿ ನಡೆಸಿ ಮಂತ್ರಿ ಪ್ರಕಾಶ್ ಅವರನ್ನು ಪೇಚಿಗೆ ಸಿಲುಕಿಸಿದರು.

ಈ ಕಾರ್ಮಿಕ ವಿರೋಧಿ ಸರಕಾರದಿಂದ ಮೊದಲನೇ ಸಲ ಗ್ರಾಮ ಪಂಚಾಯತಿ ನೌಕರರು ಕನಿಷ್ಟ ವೇತನ ಹಾಗೆಯೇ ನಿವೃತ್ತಿ ಸೌಲಭ್ಯ ಪಡೆಯಲು ಸಾಧ್ಯವಾಗಿದೆ.

- ಎನ್.ಕೆ. ಉಪಾಧ್ಯಾಯ

ಸರ್ಕಾರದ ನಿರ್ಲಕ್ಷತೆ ವಿರುದ್ಧ ಅಂಗನವಾಡಿ ನೌಕರರ ಪ್ರತಿಭಟನೆ

ನೌಕರರಿಗೆ ಕನಿಷ್ಟ ವೇತನಕ್ಕಾಗಿ ಅಂಗನವಾಡಿ ಕೇಂದ್ರಗಳ ಖಾಸಗೀಕರಣದ ವಿರುದ್ಧ, ಬೇಸಿಗೆ ರಜೆ ಬೋನಸ್, ನಿವೃತ್ತಿ ಸೌಲಭ್ಯ ಇತ್ಯಾದಿ ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿ ಹಲವು ವರ್ಷಗಳಿಂದ ಅಂಗನವಾಡಿ ನೌಕರರು ಹೋರಾಟ ನಡೆಸುತ್ತಿದ್ದರು. ಅಧಿಕಾರರೂಢ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಸಮಸ್ಯೆಗಳ ಪರಿಹಾರಿಸುವ ಬದಲು ನಿಷ್ಕ್ರಿಯತೆಯಿಂದ ನೌಕರರನ್ನು ಕಾಡಿಸುತ್ತಿರುವುದರ ವಿರುದ್ಧ ರಾಜ್ಯ ಸಮಿತಿ ಕರೆಯ ಮೇರೆಗೆ ಫೆಬ್ರವರಿ 18 ರಂದು ರಾಜ್ಯ ವ್ಯಾಪಿ ಪ್ರತಿಭಟನೆ ನಡೆಸಿದ ವರದಿ.

ಉತ್ತರ ಕನ್ನಡ: ಪಿಕೆಟಿಂಗ್, ಬಂಧನ

ಸಾವಿರಕ್ಕೂ ಹೆಚ್ಚು ಅಂಗನವಾಡಿ ನೌಕರರು ಕಾರವಾರದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ನಡೆಸಿ ಜಿಲ್ಲಾಧಿಕಾರಿಗಳ ಕಛೇರಿ ಮುಂದೆ ಪಿಕೆಟಿಂಗ್ ನಡೆಸಿ ಸಾಮೂಹಿಕ ಬಂಧನ ಕ್ಕೊಳಗಾದರು.

ಈ ಸಂದರ್ಭದಲ್ಲಿ ಸಿಐಟಿಯು ಜಿಲ್ಲಾ ಪ್ರಧಾನ ಕಾರ್ಯದರ್ಶಿ ಟಿ.ಎಸ್. ನಾಯಕ್, ಸಂಘದ ಗೌರವಾಧ್ಯಕ್ಷ ಸುಭಾಷ್ ಕೊಪ್ಪಿಕರ್ ಅಧ್ಯಕ್ಷ ನಾಗರತ್ನ ಪಡಿಯಾರ್, ಕಾರ್ಯದರ್ಶಿ ರಜನಿ ಹಬ್ಬು ಖಜಾಂಚಿ ಸವಿತಾ ತನ್ಮಡಗಿ, ಲಲಿತಾ ಹೆಗಡೆ ಮೊದಲಾದವರು ಮಾತನಾಡಿದರು. ನಂತರ ಜಿಲ್ಲಾಧಿಕಾರಿಗಳಿಗೆ ತಮ್ಮ ಬೇಡಿಕೆಗಳುಳ್ಳ ಮನವಿ ಸಲ್ಲಿಸಿದರು.

ಮೆರವಣಿಗೆಯ ನೇತೃತ್ವವನ್ನು ಯಮುನಾ ಗಾಂವ್ಕರ್, ಗೀತಾ ನಾಯ್ಕ, ಶಂಕುತಲಾ, ಲಲಿತಾ ಶಡಗೇರಿ ಅಹಲ್ಯ ವಹಿಸಿದ್ದರು. ಸಂಜೆಗೆ ಬಂದಿತರನ್ನು ಬಿಡುಗಡೆ ಮಾಡಲಾಯಿತು.

ದಕ್ಷಿಣ ಕನ್ನಡ: ಜಿಲ್ಲೆಯ ವಿವಿಧ ಭಾಗಗಳಿಂದ ಬಂದ ಕಾರ್ಯಕರ್ತೆಯರು ಜಿಲ್ಲಾಧಿಕಾರಿಗಳ ಕಛೇರಿ ಎದುರು ಪಿಕೆಟಿಂಗ್ ನಡೆಸಿ, ಬಂಧನಕ್ಕೊಳಗಾದರು.

ಇದಕ್ಕೆ ಮುಂಚೆ ಮಾತನಾಡಿದ ಸಿಐಟಿಯು ಜಿಲ್ಲಾ ಕಾರ್ಯದರ್ಶಿ ಬಿ. ಮಾಧವ ರಾಜ್ಯಕೇಂದ್ರ ಸರ್ಕಾರಗಳ ಅಸಡ್ಡೆ ನೀತಿಯನ್ನು ಖಂಡಿಸಿದರು. ಬಂಧನಕ್ಕೊಳಗಾದವರಲ್ಲಿ ಬಿ. ಮಾಧವ ವಸಂತ ಆಚಾರಿ, ಯಾದವ ಶೆಟ್ಟಿ ಪದ್ಮಾವತಿ ಎಸ್. ಶೆಟ್ಟಿ ಬಿ. ಎಂ. ಭಟ್, ಸತ್ಯ ಹರಿದಾಸ್ ಶಿವಕುಮಾರ್ ಸೇರಿದಂತೆ 258 ಕಾರ್ಯಕರ್ತೆಯರು ಬಂಧನಕ್ಕೊಳಗಾದರು. ಬಂಧಿತರನ್ನು ಮಧ್ಯಾಹ್ನ ಬಿಡುಗಡೆ ಮಾಡಿದರು.

ಗುಲ್ಬರ್ಗಾ: ತಿಮ್ಮಾಪೂರ ವೃತ್ತದಿಂದ ಹೊರಟ ಸಾವಿರಾರು ಕಾರ್ಯಕರ್ತೆಯರು ಮೆರವಣಿಗೆ ನಡೆಸಿ ಸಹಾಯಕ ನಿರ್ದೇಶಕರಿಗೆ ಮನವಿ ಸಲ್ಲಿಸಿ ಜಿಲ್ಲಾಧಿಕಾರಿ ಕಛೇರಿಗೆ ಮುತ್ತಿಗೆ ಹಾಕಿದರು.

ಮನವಿ ಸ್ವೀಕರಿಸಿದ ಸಹಾಯಕ ನಿರ್ದೇಶಕರು ತಮ್ಮ ವ್ಯಾಪ್ತಿಯ ಬೇಡಿಕೆಗಳನ್ನು ಕೂಡಲೆ ಬಗೆಹರಿಸುವ ಭರವಸೆ ನೀಡಿದರು. ಪ್ರತಿಭಟನಾಕಾರರನ್ನು ಉದ್ದೇಶಿಸಿ ಗಂಗಾಮ್ಮಾ ಬಿರಾದಾರ, ಶಶಿಕಲಾ ಕಠಗಂಚಿ, ಬಸಮ್ಮಾ ಗುತ್ತೇದಾರ, ಲಕ್ಷ್ಮಿ ಚವಡಾಪೂರ, ಪುಷ್ಪಾ ಮೊದಲಾದವರು ಮಾತನಾಡಿ ಬೇಡಿಕೆ ಈಡೇರಿಸದ ಸರ್ಕಾರದ ನೀತಿಯನ್ನು ಖಂಡಿಸಿದರು.

ರಾಯಚೂರು: ಇನ್ನೂರಕ್ಕೂ ಹೆಚ್ಚು ಕಾರ್ಯಕರ್ತೆಯರು ಸೇರಿದಂತೆ ವಿವಿಧ ಸಾಮೂಹಿಕ ಸಂಘಟನೆಗಳ ಮುಖಂಡರು ನಗರದ ಉದ್ಯಾನದಿಂದ ಜಿಲ್ಲಾಧಿಕಾರಿ ಕಛೇರಿವರಗೆ ಮೆರವಣಿಗೆ ನಡೆಸಿದರು. ಪಿಕೆಟಿಂಗ್ ನಡೆಸಿದ ಕಾರ್ಯಕರ್ತೆಯರನ್ನು ಬಂಧಿಸಲಾಯಿತು. ಇದೇ ಸಂದರ್ಭದಲ್ಲಿ ಜಿಲ್ಲಾಧ್ಯಕ್ಷರಾದ ಮರಿಯಮ್ಮ ವೈ. ಈರಣ್ಣ, ಪಿ. ಗಿರಿಯಪ್ಪ, ಸಿ.ಚಿದಾನಂದ ದೊರೆ, ವಿದ್ಯಾವತಿ ಮೊದಲಾದವರು ಪಿಕೆಟಿಂಗ್ ನೇತೃತ್ವ ವಹಿಸಿದ್ದರು. ವಿವಿಧ ಸಂಘಟನೆಗಳ ಜೆ. ಸುರೇಶ್, ಖಾಜಾ ಹುಸೇನ್, ಕೆ.ವಿರೇಶ ರೆಡ್ಡಿ, ಕರಿಯಪ್ಪ ಅಚ್ಚರಾಳ್ಳಿ ಮತ್ತು ಬಿ. ಲಿಂಗಪ್ಪ ಮೊದಲಾದವರು ಮಾತನಾಡಿ ಕೂಡಲೇ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿದರು.

ರಾಯಚೂರು ಸಂಚಾಲಕ ಸಮಿತಿ: ಇತ್ತೀಚೆಗೆ ಸಭೆ ಸೇರಿದ್ದ ರಾಯಚೂರು ತಾಲೂಕು ಅಂಗನವಾಡಿ ನೌಕರರು ಒಂದು ಸಂಚಾಲಕ ಸಮಿತಿ ಆಯ್ಕೆ ಮಾಡಿದೆ.

ವೈ. ಈರಣ್ಣ ಸಂಚಾಲಕರಾಗಿದ್ದು ಇಂದಿರಾ. ಈರಮ್ಮ ಕೆ. ಮಂಜುಳ. ಅನುಸೂಯ, ಮಂಗಳ ಗೌರಿ ಸದಸ್ಯರಾಗಿದ್ದಾರೆ.

ಪುಟ 6 ನೋಡಿ

ಗ್ರಾಮೀಣ ಮಹಿಳೆಯರ ನೈಜ ಸಮಸ್ಯೆಗಳ ಕಡೆ ಬೆಳಕು ಚೆಲ್ಲಿದ ಬೆಂಗಳೂರು ಜಿಲ್ಲೆ ಗ್ರಾಮೀಣ ಮಹಿಳೆಯರ ಯಶಸ್ವಿ ಸಮಾವೇಶ





ಬೆಂಗಳೂರು ಜಿಲ್ಲೆಯ ಗ್ರಾಮಾಂತರ ಮಹಿಳೆಯರ ದೈನಂದಿನ ನಿತ್ಯ ಸಮಸ್ಯೆಗಳ ಕುರಿತು ಚರ್ಚಿಸುವ ಹಾಗೂ ಗ್ರಾಮೀಣ ಮಹಿಳೆಯರ ನಡುವೆ ಸಂಘಟನೆಯನ್ನು ಕೊಂಡೊಯ್ಯುವ ಸಲುವಾಗಿ ಮಾರ್ಚ್ 1 ರಂದು ಅಖಿಲಭಾರತ ಜನವಾದಿ ಮಹಿಳಾ ಸಂಘಟನೆಯ ಬೆಂಗಳೂರು ಜಿಲ್ಲಾ ಸಮಿತಿಯು ಗ್ರಾಮೀಣ ಮಹಿಳೆಯರ ಸಮಾವೇಶವೊಂದನ್ನು ಸಂಘಟಿಸಿತ್ತು. ನಗರದ ಹೊರವಲಯಗಳ ಹಾಗೂ ಹಳ್ಳಿಗಳ (30 ಪ್ರದೇಶಗಳಿಂದ) ಸುಮಾರು 350 ಮಹಿಳೆಯರು ಪ್ರಥಮ ಬಾರಿಗೆ ಸೇರಿ ತಮ್ಮ ಅನುಭವಗಳನ್ನು ಅಭಿಪ್ರಾಯಗಳನ್ನು ಹಂಚಿಕೊಂಡರು.


ಅತ್ತ ಹಳ್ಳಿಯೂ ಅಲ್ಲದ ಇತ್ತ ನಗರವೂ ಅಲ್ಲದ ಅರೆ ಸಂಸ್ಕೃತಿಯ ಪರಿಸರದಲ್ಲೂ ನಗರಕ್ಕಿರುವ ನಾಗರೀಕ ಸೌಲಭ್ಯಗಳೂ ಇಲ್ಲದೆ ಹಳ್ಳಿಗಳಿಗಿರುವ ಸ್ವಂತಿಕೆಯೂ ಇಲ್ಲದೆ ಬದುಕುತ್ತಿರುವ ನಗರದ ಹೊರವಲಯಗಳ ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ಸಮಾವೇಶದಲ್ಲಿ ಪಾಲ್ಗೊಂಡಿದ್ದರು.

ಭಾರತದ ಹಳ್ಳಿಗಾಡಿನ ಮಹಿಳೆಯರನ್ನು ತೀಕ್ಷ್ಣವಾಗಿ ಕಾಣುತ್ತಿರುವ ಸಮಸ್ಯೆಯೆಂದರೆ ಶೌಚಾಲಯದ್ದು. ಮಹಿಳೆಯರ ಮೇಲಿನ ಅತ್ಯಾಚಾರಗಳಲ್ಲೂ ಶೇ. 40 ರಷ್ಟು ಅತ್ಯಾಚಾರಗಳು ಮಹಿಳೆಯರು ಬಹಿರ್ದೆಶೆಗೆಂದು ರಾತ್ರಿಯ ಸಮಯದಲ್ಲೋ ಅಥವಾ ಬೆಳಗಾಗುವ ಮುಂಚೆಯೇ ಊರ ಹೊರಗಿನ ನಿರ್ಜನ ಪ್ರದೇಶಗಳಿಗೆ ಹೋಗುವಾಗ ನಡೆಯುತ್ತಿದೆ ಎಂದು ಸರ್ಕಾರದ ಅಂಕಿ ಅಂಶಗಳೇ ಹೇಳುತ್ತವೆ. ಇವು ಬೆಳಕಿಗೆ ಬಂದಂತ ಅಂಕಿ ಅಂಶಗಳು. ಬೆಳಕಿಗೆ ಬಾರದವು ಅದೆಷ್ಟೋ? 21 ನೇ ಶತಮಾನಕ್ಕೆ ಹೋಗುವ ಅವಸರದಲ್ಲಿರುವ ನಮ್ಮ ನಾಗರೀಕ ಸಮಾಜದಲ್ಲಿ ಇಂದಿಗೂ ಶೇ. 90 ಜನರಿಗೆ ಶೌಚಾಲಯಗಳಿಲ್ಲ. ಮಹಿಳೆಯರ ಪಾಡಂತೂ ಹೇಳತೀರದು. ಸಮಾವೇಶದಲ್ಲಿ ಪಾಲ್ಗೊಂಡಿದ್ದ ಎಲ್ಲಾ ಮಹಿಳೆಯರ ಪ್ರಥಮ ಬೇಡಿಕೆ ಇದೇ ಆಗಿತ್ತು. ಸ್ವತಃ ಅನುಭವಗಳ ಮೂಲಕ ಶೌಚಾಲಯದ ಅಗತ್ಯವನ್ನು ಒತ್ತಿ ಹೇಳಿದ ಪ್ರತಿನಿಧಿಗಳು ಇದಕ್ಕಾಗಿ ಹೋರಾಡಲು ಸಿದ್ಧರೆಂದರು. ಮಹಿಳೆಯರನ್ನು ತೀವ್ರವಾಗಿ ಭಾದಿಸುತ್ತಿರುವ ಮತ್ತೊಂದು ಸಮಸ್ಯೆಯೆಂದರೆ ಕುಡಿಯುವ ನೀರಿನ ಸಮಸ್ಯೆ.

ಬೆಂಗಳೂರು ಮಹಾನಗರದ ಹೊರವಲಯವಾದ ಭುವನೇಶ್ವರಿ ನಗರವೆಂಬ ಸ್ಲಂ ಪ್ರದೇಶದಲ್ಲಿ ಕುಡಿಯುವ ನೀರಿಗಾಗಿ ಒಂದೇ ಒಂದು ಕೊಳವೆ ಭಾವಿಯನ್ನು ನಂಬಿಕೊಂಡು ನೂರಾರು ಕುಟುಂಬಗಳು ದಾಹಪಡುತ್ತಿವೆ. ರಾತ್ರಿ 2 ಗಂಟೆಯ ತನಕ ಮಹಿಳೆಯರು ಕ್ಯೂನಲ್ಲಿ ನಿಂತು ನೀರು ತುಂಬಿಸಿಕೊಳ್ಳುವುದು ಮಾತ್ರವಲ್ಲ, ಇತರೆ ಬಳಕೆಗಾಗಿ ಪಕ್ಕದಲ್ಲಿಯೇ ಇರುವ ವಿವಿಧ ರೀತಿಯ ಕೊಳೆಗಳು ಬಂದು ಸೇರುವ ಆರೋಗ್ಯಮಾರಕ ಕೆರೆ ನೀರನ್ನು ಬಳಸುವ ಕಥೆ ಎಂಥಹವರ ಮನಸ್ಸನ್ನೂ ಕಲಕುವಂತದ್ದು. ಸಮಾವೇಶದಲ್ಲಿ ಪ್ರಸ್ತಾಪಗೊಂಡ ವಿಷಯಗಳು ನಾಗರೀಕ ಸೌಲಭ್ಯಗಳಿಗಾಗಿ ಎಲ್ಲರೂ ಒಟ್ಟಾಗಿ ಹೋರಾಟ ನಡೆಸ ಬೇಕೆಂಬ ಹುಮ್ಮಸ್ಸನ್ನು ತುಂಬಿದವು.

ನಮ್ಮ ದೇಶದ ಶೇ. 80 ಮಹಿಳೆಯರು ಒಂದಲ್ಲ ಒಂದು ರೀತಿಯ ರೋಗಗಳಿಂದ ನರಳುತ್ತಿರುವವರು. ಅದರಲ್ಲೂ ಮುಖ್ಯವಾಗಿ ಕಬ್ಬಿಣದ ಅಂಶದ ಕೊರತೆ ಕಾಡುತ್ತಿದೆ. ದಿನ ಪ್ರತಿ 5000 ಮಕ್ಕಳು ಅಪೌಷ್ಟಿಕತೆಯಿಂದ ಸಾಯುತ್ತಿದ್ದಾರೆ. ಹೀಗಿರುವಾಗ ಆಸ್ಪತ್ರೆ, ಔಷಧಿ, ವೈದ್ಯರ ಅವಶ್ಯಕತೆ ತುಂಬಾ ಅನಿವಾರ್ಯ. ಆದರೆ ಸಮಾವೇಶ ನಡೆದ ಪ್ರದೇಶವಾದ ಕುಂಬಳಗೋಡಿನ ಸುತ್ತ ಮುತ್ತ ಸುಮಾರು 20-30 ಕಿಲೋಮೀಟರ್ ವ್ಯಾಪ್ತಿ ಕಳೆದರೂ ಒಂದೇ ಒಂದು ಸರ್ಕಾರಿ ಆಸ್ಪತ್ರೆಗಳಿಲ್ಲ. ಸಾವಿರಾರು ಸಂಖ್ಯೆಯ ಪುರುಷರು ಮಹಿಳೆಯರು ಕೈಗಾರಿಕೆಗಳಲ್ಲಿ ದಿನವಿಡೀ ದುಡಿಯುತ್ತಾರೆ. ಬಹುತೇಕ ಮಹಿಳೆಯರ ಮತ್ತೊಂದು ಒತ್ತಾಯ ಅಂಗನವಾಡಿ ಕೇಂದ್ರಗಳ ಸ್ಥಾಪನೆಗಾಗಿ, ಆರೋಗ್ಯ ಸೌಲಭ್ಯಕ್ಕಾಗಿ ಹಾಗೆಯೇ ಸಾಕಷ್ಟು ಹಳ್ಳಿಗಳಿಗೆ ಬಸ್ಸಿನ ಸೌಲಭ್ಯದ ಕೊರತೆ, ಮರಳು ಗಾಡಿನ ಓಯಸಿಸ್ ನಂತೆ ಯಾವಾಗಲೋ ಒಮ್ಮೆ ಬಂದು ಹೋಗುವ ಬಸ್ಸು ಅದನ್ನೇ ನಂಬಿರುವ ನೂರಾರು ಶಾಲಾ-ಕಾಲೇಜಿನ ಮಕ್ಕಳು ದುಡಿಮೆ ಮಾಡುವ ಗಂಡಸರು

ಪುಟ 7 ನೋಡಿ





ಬಿಜೆಪಿಯ ಸರ್ಕಾರ 1999-2000 ಸಾಲಿಗೆ ಬಜೆಟ್ ಮಂಡಿಸಿದೆ.
ಈ ಬಜೆಟ್ ಯಾರಿಗಾಗಿ?
ಗ್ರಾಮೀಣ ಪ್ರದೇಶಗಳಿಗಾಗಿ? ರೈತರಿಗಾಗಿ? ಬಡವರಿಗಾಗಿ?
ಎಲ್ಲರಿಗಾಗಿ ಈ ಬಜೆಟ್ ಎಂದು ಬಿಜೆಪಿಯ ಕುಳಗಳೆಲ್ಲ ಹೇಳುತ್ತಿವೆ.
ಈ ಶತಮಾನದ ಕೊನೆಯ ಬಜೆಟ್ಟನ್ನು ಮಂಡಿಸಿರುವ ಗರ್ವ ಬೇರೆ.
ಈ ಬಜೆಟ್‌ನ 'ಜನಪರತೆ'ಯ ನಿಜ ಹೂರಣದ ಒಂದು ಪಕ್ಷಿನೋಟ

ಷೇರು ಮಾರುಕಟ್ಟೆಗಾಗಿ ಬಂಡವಾಳಿಗರಿಗಾಗಿ ಬಜೆಟ್

ಕೇಂದ್ರದ ಬಜೆಟ್ ಜನ-ವಿರೋಧಿಯಷ್ಟೇ ಅಲ್ಲ ರಾಜ್ಯಗಳಿಗೂ ವಿರುದ್ಧವಾದದ್ದು

ಎನ್ನುತ್ತಾರೆ ಪಶ್ಚಿಮ ಬಂಗಾಳ ಹಣಕಾಸು ಮಂತ್ರಿ ಡಾ. ಅಶೀಮ್ ದಾಸ್‌ಗುಪ್ತಾ

ಇಡೀ ದೇಶ ಒಂದು ಗಂಭೀರ ಆರ್ಥಿಕ ಬಿಕ್ಕಟ್ಟನ್ನು ಎದುರಿಸುತ್ತಿರುವಾಗ ಬಿಜೆಪಿ ನೇತೃತ್ವದ ಕೇಂದ್ರ ಸರಕಾರದ ಬಜೆಟ್ ಇದನ್ನು ಎದುರಿಸುವ ಬದಲು ಈ ಬಿಕ್ಕಟ್ಟಿಗೆ ಕಾರಣವಾದ (ಬೇರೆ ದೇಶಗಳಲ್ಲೂ) ಐಎಂಎಫ್ - ವಿಶ್ವಬ್ಯಾಂಕ್ ದಾರಿಯನ್ನೇ ಅನುಸರಿಸುವ ಪ್ರಯತ್ನ ಮಾಡಿದೆ.

ಉತ್ಪಾದನೆ ಮತ್ತು ಉದ್ಯೋಗಾವಕಾಶ ಹೆಚ್ಚಿಸುವ ಪ್ರಮುಖ ಪ್ರೋತ್ಸಾಹಕ ಶಕ್ತಿಗಳಲ್ಲಿ ಒಂದೆಂದರೆ ವಿದ್ಯುತ್, ನೀರಾವರಿ ಮುಂತಾದ ಮೂಲರಚನೆಯ ಸೌಲಭ್ಯಗಳಿಗೆ ಹೆಚ್ಚಿನ ಬಜೆಟ್ ಹಣ ನೀಡುವುದು. ದುರದೃಷ್ಟವಶಾತ್, ಕೇಂದ್ರ ಹಣಕಾಸು ಮಂತ್ರಿಗಳು ಬಾಯಿಯಲ್ಲಿ ಏನೇ ಹೇಳಿದರೂ ಬಜೆಟ್‌ನಲ್ಲಿ ಮಾಡಿರುವುದು ತದ್ವಿರುದ್ಧ. ಹೆಚ್ಚು ನೀಡುವ ಬದಲು ಕಡಿತ ಮಾಡಲಾಗಿದೆ. ವಿದ್ಯುತ್ ವಲಯಕ್ಕೆ 1998-99 ರ ಬಜೆಟ್‌ನಲ್ಲಿ ಕೊಟ್ಟದ್ದು 30082 ಕೋಟಿ ರೂ. 1999-2000 ರ ಬಜೆಟ್ಟಿನಲ್ಲಿ ಅದು 27381 ಕೋಟಿ. ರೂ. ಗಿಳಿದಿದೆ. ನೀರಾವರಿಗೆ ಕೊಟ್ಟ ಹಣ 374 ಕೋಟಿ ರೂ. ಗಳಿಂದ 348 ಕೋಟಿ ರೂ.ಗಿಳಿದಿದೆ. ಗ್ರಾಮೀಣ ಉದ್ಯೋಗಾವಕಾಶ ನಿರ್ಮಾಣಕ್ಕೆ ಇಟ್ಟ ಹಣ 8182 ಕೋಟಿ ರೂ.ಗಳಿಂದ 7843 ಕೋಟಿ ರೂ.ಗಿಳಿದಿದೆ. ಇಡೀ ಕೈಗಾರಿಕಾ ವಲಯಕ್ಕೆ ಕೊಡಮಾಡುವ ಹಣ 11551 ಕೋಟಿ ರೂ.ಗಳಿಂದ 8672 ಕೋಟಿ ರೂ. ಗಳಿಗೆ ಇಳಿದಿದೆ. ಪ್ರೊ. ಅಮಾರ್ತ್ಯ ಸೆನ್‌ರಿಗೆ ನೊಬೆಲ್ ಪ್ರಶಸ್ತಿ ದೊರೆತರೂ, ಇಲ್ಲಿ 'ಭಾರತ ರತ್ನ' ಕೊಟ್ಟರೂ ಅವರು ಪ್ರತಿಪಾದಿಸುವ ಶಿಕ್ಷಣ, ಆರೋಗ್ಯ ಮುಂತಾದ ಸಾಮಾಜಿಕ ವಲಯದ ಗುರಿಸಾಧನೆಯ ಮಾತು, ಶಿಕ್ಷಣದ ಸಾರ್ವತ್ರೀಕರಣದ ಮಾತು ಈ ಬಜೆಟ್‌ನಲ್ಲಿ ಇಲ್ಲ. ಅದೇ ರೀತಿ ಜೀವನಾವಶ್ಯಕ ವಸ್ತುಗಳ ಬೆಲೆಗಳನ್ನು ಹತೋಟಿಗೆ ತರುವ ರಾಜಕೀಯ ಇಚ್ಛಾಶಕ್ತಿ ಕೂಡಾ ಈ ಬಜೆಟ್‌ನಲ್ಲಿ ಕಾಣಸುವುದಿಲ್ಲ.

ಈ ರೀತಿ ಬಜೆಟ್‌ನ ಖರ್ಚಿನ ಬಾಬ್ತುಗಳಲ್ಲಿ ಜನಸಾಮಾನ್ಯರ ಸಮಸ್ಯೆಗಳನ್ನು ಪರಿಹರಿಸುವ ಯಾವ ದಿಕ್ಕೂ ಕಾಣುತ್ತಿಲ್ಲ. ಅತ್ತ ಆದಾಯದ ಬಾಬ್ತುಗಳಲ್ಲೂ ಬಜೆಟ್ಟಿಗೆ ಸಂಪನ್ಮೂಲ ಸಂಗ್ರಹದಲ್ಲೂ ಪ್ರಧಾನ ಹೊರೆ ಬಿದ್ದಿರುವುದು ಇದೇ ಜನಸಾಮಾನ್ಯರ ಮೇಲೆಯೇ. ಈ ಬಜೆಟ್ ಸಂಗ್ರಹಿಸ ಹೊರಟಿರುವ ಸುಮಾರು 10000 ಕೋಟಿ ರೂ.ಗಳಲ್ಲಿ 4591 ಕೋಟಿ ರೂ. ಡೀಸೆಲ್ ಸುಂಕ ಏರಿಕೆಯಿಂದಲೇ ಬರುತ್ತದೆ. ಬಜೆಟ್ ಮೊದಲೇ ಪಡಿತರ ಬೆಲೆಯೇರಿಕೆಯ ಮೂಲಕ ಸಾಮಾನ್ಯ ಜನಗಳಿಂದ 4000 ಕೋಟಿ ರೂ.ಗಳನ್ನು ಈ ಸರಕಾರ ಕಿತ್ತುಕೊಂಡಿತ್ತು. ದುರದೃಷ್ಟವಶಾತ್, ಪ್ರತಿವರ್ಷ 100000 ಕೋಟಿ ರೂ.ಗಳ ದರದಲ್ಲಿ 'ಕಪ್ಪುಹಣ' ತೆರಿಗೆ ತಪ್ಪಿಸಿ ಬೆಳೆಯುತ್ತಿದ್ದರೂ ಅದನ್ನು ಹೊರತೆಗೆಯುವ ಪ್ರಯತ್ನವನ್ನೇ ಈ ಬಜೆಟ್ ಮಾಡಿಲ್ಲ. ಈ 'ಕಪ್ಪುಹಣ'ದ ಕೇವಲ 10% ವನ್ನಾದರೂ ಹೊರತೆಗೆಯುವ ಕ್ರಮ ರೂಪಿಸಿದ್ದರೆ ಜನಗಳ ಮೇಲೆ ಈ ಹೆಚ್ಚಿನ ತೆರಿಗೆ ಭಾರಗಳನ್ನು ಹೊರಿಸುವ ಅಗತ್ಯವೇ ಇರಲಿಲ್ಲ. ಹಣಕಾಸು ಕೊರತೆಯನ್ನು ಇಳಿಸುವತ್ತಲೂ ಗಮನಾರ್ಹ ಹೆಜ್ಜೆ ಇಡ ಬಹುದಿತ್ತು.

ಸಣ್ಣ ಉಳಿತಾಯ ಸಂಬಂಧಿತ ಸಾಲಗಳನ್ನು ಕೇಂದ್ರ ಬಜೆಟ್‌ನ ವ್ಯಾಪ್ತಿಯಿಂದ ಹೊರತರಬೇಕೆಂದು ರಾಷ್ಟ್ರೀಯ ಅಭಿವೃದ್ಧಿ ಮಂಡಳಿಯಲ್ಲಿ ಪಶ್ಚಿಮ ಬಂಗಾಳ ಸೂಚಿಸಿತ್ತು. ಅದನ್ನು ಮಾಡಿ ಹಣಕಾಸು ಕೊರತೆ ಕಮ್ಮಿ ಮಾಡಿದ್ದೇನೆಂದು ಹಣಕಾಸು ಮಂತ್ರಿಗಳು ಬೆನ್ನು ತಟ್ಟಿಕೊಂಡಿದ್ದಾರೆ. ಆದರೆ ಅದೇ ರಾಷ್ಟ್ರೀಯ ಅಭಿವೃದ್ಧಿ ಮಂಡಳಿಯ ಸಭೆಯಲ್ಲಿ ಎಲ್ಲಾ ರಾಜ್ಯಗಳೂ ಸಣ್ಣ ಉಳಿತಾಯದ ಮೇಲಿನ ಬಡ್ಡಿದರಗಳನ್ನು ಕಡಿತ ಮಾಡಿರುವುದನ್ನು ಕೈಬಿಡಬೇಕು ಎಂದೂ ಒತ್ತಾಯಿಸಿದ್ದವು. ಬಜೆಟ್ ಈ ಬಗ್ಗೆ ಯಾವುದೇ ಪ್ರಸ್ತಾಪ ಇಟ್ಟಿಲ್ಲ. ಅಷ್ಟೇ ಅಲ್ಲ, ಪ್ರಸಕ್ತ ವರ್ಷದಲ್ಲಿ ಕೇಂದ್ರದ ತೆರಿಗೆಗಳಿಂದ ರಾಜ್ಯಗಳ ಪಾಲು ಇಳಿಮುಖವಾದಂತೆ ಮುಂದಿನ ವರ್ಷವೂ ಆಗಬಹುದೆಂಬ ಶಂಕೆ ಇದೆ. ಆದ್ದರಿಂದಲೇ ಈ ಬಜೆಟ್, ಜನ-ವಿರೋಧಿಯೂ ಹೌದು, ರಾಜ್ಯಗಳಿಗೂ ವಿರುದ್ಧವಾದದ್ದು ಹೌದು.

ನಮ್ಮ ದೇಶದ ಬಹುಪಾಲು ಜನಗಳ ಹಿತಾಸಕ್ತಿಗಳನ್ನು ಕಾಪಾಡಬೇಕಾದರೆ, ಸ್ಥಗಿತತೆ, ನಿರುದ್ಯೋಗ, ಹಣದುಬ್ಬರ, ಸಾಮಾಜಿಕ ವಲಯಗಳಲ್ಲಿ ಕೊರತೆಗಳ ಸಮಸ್ಯೆಗಳನ್ನು ಪರಿಹರಿಸಬೇಕಾದರೆ ರಾಷ್ಟ್ರೀಯ ಮಟ್ಟದಲ್ಲಿ ಈ ಆರ್ಥಿಕ ನೀತಿಗೆ ಪರ್ಯಾಯವಾದ ಒಂದು ಹೊಸ ನೀತಿ ದೇಶಕ್ಕೆ ಬಹಳವಾಗಿ ಅಗತ್ಯವಿದೆ. ಇಂತಹ ಒಂದು ಪರ್ಯಾಯ ನಿಲುವಿನ ರೂಪುರೇಷೆಯನ್ನು ಕಳೆದ ಕೆಲವು ವರ್ಷಗಳಿಂದ ಪಶ್ಚಿಮ ಬಂಗಾಳದಿಂದ ನಾವು ಕೇಂದ್ರದ ಮುಂದಿಡುತ್ತಾ ಬಂದಿದ್ದೇವೆ.

ಬಜೆಟ್ಟಿಗೆ ಮೊದಲೇ ಆಹಾರ ಧಾನ್ಯಗಳ ಬೆಲೆ ಏರಿಕೆ, ರೈಲ್ವೆ ಪ್ರಯಾಣ ದರ, ರೈಲ್ವೆ ಸಾಗಾಣಿಕೆ ದರಗಳನ್ನು ಹೆಚ್ಚಿಸಿದ ಬಿಜೆಪಿ ಬಜೆಟ್ಟಿನಲ್ಲಿ ಬರೀ ಡೀಸೆಲ್ ದರವನ್ನು ಹೆಚ್ಚಿಸಿದ್ದೇನೆಂದು ಹೇಳಿಕೊಂಡಿದೆ. ಅದೇನೂ ದೊಡ್ಡದಲ್ಲ ಎನ್ನುವಂತಹ ಧೋರಣೆಯಲ್ಲಿ. ಜನಸಾಮಾನ್ಯರ ಮೇಲೆ ಬರೀ ಹೊರೆಗಳನ್ನೇ ಹೇರಿರುವ ಈ ಬಜೆಟ್ ಬರುವ ದಿನಗಳಲ್ಲಿ ಜನ ಸಾಮಾನ್ಯರ ಜೀವನ ಮಟ್ಟ ತೀವ್ರವಾಗಿ ಕುಸಿದು ಬರೀ ಬಂಡವಾಳಿಗರು ಮಾತ್ರ ಅನುಕೂಲಕರವಾಗಿರುವಂತೆ ಮಾಡಹೊರಟಿದೆ. ರಾಜ್ಯ ಸರ್ಕಾರಗಳನ್ನು ನಗಣ್ಯ ಮಾಡಿರುವ ಈ ಸಾರಿಯ ಬಜೆಟ್ಟು ಬರೀ ಗ್ರಾಮ ಪಂಚಾಯತಿಗಳು, ಸ್ವಸಹಾಯ ಗುಂಪುಗಳು ಸರ್ಕಾರೇತರ ಸಂಘಟನೆಗಳು ಇತ್ಯಾದಿಗಳೇ ವಿವಿಧ ಯೋಜನೆಗಳನ್ನು ಅನುಷ್ಠಾನಗೊಳಿಸುವ ಮಾತುಗಳನ್ನು ಆಡಿದೆ. ಇಷ್ಟೇ ಅಲ್ಲದೆ ರಾಜ್ಯ ಸರ್ಕಾರಗಳ ಸಂಪನ್ಮೂಲಗಳನ್ನೇ ಕಡಿಮೆ ಮಾಡಿ ಅವುಗಳ ಅಸ್ತಿತ್ವವೇ ದುರ್ಬಲವಾಗುವಂತೆ ಮಾಡಿದೆ.

ಆದಾಯ ತೆರಿಗೆ ಮೇಲೆ ಸರ್ಚಾರ್ಜ್

ಆದಾಯಕರದ ಒಂದು ಭಾಗ ರಾಜ್ಯ ಸರ್ಕಾರಗಳಿಗೆ ಹೋಗುತ್ತದೆ. ಬಿಜೆಪಿಯ ಸರ್ಕಾರ ಎಂತಹ ಪ್ರಜಾಪ್ರಭುತ್ವ ವಿರೋಧಿಯೆಂದರೆ ರಾಜ್ಯ ಸರ್ಕಾರಗಳಿಗೆ ಆದಾಯಕರದ ಒಂದು ಭಾಗ ಹೋಗಬಾರದೆಂದು ಆದಾಯಕರ ಹೆಚ್ಚಿಸುವ ಬದಲಿಗೆ ಅದರ ಮೇಲೆ ಸರ್ಚಾರ್ಜ್ ಹೇರಿದೆ. ಸರ್ಚಾರ್ಜ್ ಮೂಲಕ ಬಂದ ಕಂದಾಯದ ಹಣದಲ್ಲಿ ರಾಜ್ಯ ಸರ್ಕಾರಗಳಿಗೆ ಪಾಲು ಬಾರದು. ಇಂತಹ ಪಿತೂರಿಯೂ ಈ ಬಜೆಟ್‌ನಲ್ಲಿ ಸೇರಿರುವುದು ಬಹುಮುಖ್ಯವಾಗಿ ಗಮನಿಸಬೇಕಾದ ಅಂಶ.

ಶೇರು ಮಾರುಕಟ್ಟೆ ಗಗನಮುಖಿ

ಬಜೆಟ್ ಮಂಡನೆಯಾದ ಮೇಲೆ ಶೇರು ಮಾರುಕಟ್ಟೆಯ ವ್ಯವಹಾರಗಳು ಚುರುಕಾಗಿ ಸೂಚ್ಯಂಕಗಳ ತೀವ್ರವಾಗಿ ಅಂದರೆ 165 ಅಂಶಗಳಷ್ಟು ಏರಿಕೆ. ಶೇರು ಮಾರುಕಟ್ಟೆಯ ಪ್ರಮುಖರೆಲ್ಲ ಈ ಬಜೆಟ್ಟನ್ನು ಸ್ವಾಗತಿಸಿದ್ದರೆ ಶೇರು ಮಾರುಕಟ್ಟೆ ಏರುಮುಖವಾಗಿರುವುದಕ್ಕೆ ಮುಖ್ಯ ಕಾರಣ ಶೇರುಗಳ ಮೇಲಿನ ಡಿವಿಡೆಂಡ್‌ಗಳಿಗೆ ಆದಾಯಕರ ವಿನಾಯಿತಿಯನ್ನು ಘೋಷಿಸಿರುವುದೇ ಕಾರಣವಂತೆ.

ಬಡವರ ನೆರವಿನ ಯೋಜನೆಗಳಿಗೆ ಕಲ್ಲು

ವಿತ್ತೀಯ ಕೊರತೆಯನ್ನು ಕಡಿಮೆ ಮಾಡುವ ನೆಪದಲ್ಲಿ ಸರ್ಕಾರ ಬಡವರಿಗೆ ನೆರವಾಗುವ ಹಲವು ಯೋಜನೆಗಳಿಗೆ ಕಲ್ಲು ಹಾಕಿದೆ. ಸಹಾಯಧನದ ಪ್ರಮಾಣವನ್ನು ಕಡಿಮೆ ಮಾಡುವುದೇ ಇದಕ್ಕಿರುವ ದಾರಿ ಎಂದು ಅದು ಸಹಾಯ ಧನದಲ್ಲಿ ಕಡಿತ ಮಾಡಿದೆ. 1990-91 ರ ಸಾಲಿನಲ್ಲಿ ಒಟ್ಟು ಸಹಾಯಧನದ ಪ್ರಮಾಣ 12158 ಕೋಟಿಗಳಾಗಿದ್ದರೆ 1999-2000 ಸಾಲಿಗೆ ಇದು 23838 ಕೋಟಿ ರೂಪಾಯಿಗಳಷ್ಟಾಗುತ್ತದೆ. ಪ್ರಮಾಣ ಬಹಳ ಹೆಚ್ಚಿದೆಯಲ್ಲವೆ ಎಂದು ಯಾರಾದರೂ ಕೇಳಬಹುದು. ಹೆಚ್ಚಿರುವುದು ನಿಜ. ಆದರೆ ಒಟ್ಟುತ್ಪಾದನೆಗೆ ಹೋಲಿಸಿದರೆ ಈ ಸಹಾಯಧನದ ಪ್ರಮಾಣ ಎಷ್ಟು ಎಂದು ನೋಡಿದರೆ ಇಲ್ಲಿನ ಮೋಸ ಗೊತ್ತಾಗುತ್ತದೆ. 1990-91 ರ ಸಾಲಿನಲ್ಲಿ ಅದು ಒಟ್ಟುತ್ಪಾದನೆಯ ಶೇ. 2.09 ರಷ್ಟಿದ್ದದ್ದು 1999-2000 ರ ಸಾಲಿನಲ್ಲಿ ಶೇ. 1.19 ಕ್ಕೆ ಇಳಿದಿರುತ್ತದೆ.

ಒಂಬತ್ತನೇ ಪಂಚವಾರ್ಷಿಕ ಯೋಜನೆಗೆ ಮಣ್ಣು

ಒಂಬತ್ತನೇ ಯೋಜನೆಯನ್ನು ರೂಪಿಸಿದ್ದು ಬಿಜೆಪಿ ಸರ್ಕಾರ ನೇಮಿಸಿದ ಯೋಜನಾ ಆಯೋಗವೇ. ಯೋಜನೆಗೆ (1997-2002) 374000 ಕೋಟಿ ರೂಪಾಯಿಗಳ ಕೇಂದ್ರ ಬಜೆಟ್ ಬೆಂಬಲ ನೀಡಬೇಕಾಗಿತ್ತು. ರಾಷ್ಟ್ರೀಯ ಅಭಿವೃದ್ಧಿ ಮಂಡಳಿಯ ಅನುಮೋದನೆ ಒಂದು ವಾರದ ಹಿಂದೆಯಷ್ಟೇ ದೊರೆತಿತ್ತು. ಗುರಿಗಳನ್ನು ಮುಟ್ಟಲು ಕೇಂದ್ರ ಸರ್ಕಾರ ಈ ವರ್ಷದಲ್ಲಿ 92000 ಕೋಟಿ ರೂಪಾಯಿಗಳನ್ನು ತೆಗೆದಿರಿಸಬೇಕಾಗಿತ್ತು. ಯಾಕೆಂದರೆ 1997-98 ರಲ್ಲಿ ಬರೀ 59077 ಕೋಟಿ ರೂಪಾಯಿಗಳ ಬಜೆಟ್ ಬೆಂಬಲ ನೀಡಲಾಗಿತ್ತು. ಹಾಗೂ 1998-99 ರಲ್ಲಿ ಬರೀ 68371 ಕೋಟಿ ರೂಪಾಯಿಗಳನ್ನು ನೀಡಲಾಗಿತ್ತು. ಈ ಹಳೆಯ ಕೊರತೆಗಳನ್ನು ಸರಿದೂಗಿಸಲು ಸರ್ಕಾರ ಈ ಸಾರಿ 92000 ಕೋಟಿ ರೂಪಾಯಿಗಳನ್ನು ಬಜೆಟ್ಟಿನಲ್ಲಿ ತೆಗೆದಿರಿಸಬೇಕಾಗಿತ್ತು. ಬದಲಿಗೆ ಅದು ಬರೀ 77000 ಕೋಟಿ ರೂಪಾಯಿಗಳನ್ನು ತೆಗೆದಿರಿಸಿದೆ.

ತನ್ನದೇ ವಾಗ್ದಾನವನ್ನು ಕೇಂದ್ರ ಸರ್ಕಾರ ಮುರಿದಿದೆ. ದೇಶದ ಅಭಿವೃದ್ಧಿಯತ್ತ ಎಂತಹ ಧೋರಣೆಯನ್ನು ಬಿಜೆಪಿ ಸರ್ಕಾರ ಹೊಂದಿದೆ ಎಂಬುದು ಇದರಿಂದ ಸ್ಪಷ್ಟವಾಗುತ್ತದೆ.

ಶೇರು ಮಾರಾಟವೆಂಬ ದೇಶ ಲೂಟಿ

ಉದಾರೀಕರಣದ ಆರ್ಥಿಕ ನೀತಿಗಳು ಸಾರ್ವಜನಿಕ ವಲಯದ ಉದ್ದಿಮೆಗಳ ಶೇರು ಮಾರಾಟ ಮಾಡುವ ಹುನ್ನಾರಗಳನ್ನು ಒಳಗಿನಿಂದಲೇ ಹಮ್ಮಿಕೊಂಡು ಬಂದಿವೆ. ಸಾರ್ವಜನಿಕ ವಲಯದ ಉದ್ದಿಮೆಗಳು ಲಾಭ ಮಾಡುತ್ತಿಲ್ಲ, ಅವು ದೇಶಕ್ಕೆ ಹೊರೆ, ಆದ್ದರಿಂದ ಅವುಗಳನ್ನು ಖಾಸಗೀಕರಿಸಬೇಕೆಂಬುದೇ ಉದಾರೀಕರಣವಾದಿಗಳ ವಾದ. ಈ ಬಜೆಟ್ಟಿನಲ್ಲಿ ಮತ್ತು ಹಿಂದೆ ಕೂಡಾ ಈ ಸಾರ್ವಜನಿಕ ಉದ್ದಿಮೆಗಳ ಶೇರು ಮಾರಾಟ ಮಾಡುವ ಹೆಸರಿನಲ್ಲಿ ಖಾಸಗೀಕರಿಸುವ ಕೆಲಸವನ್ನು ಕೇಂದ್ರ ಸರ್ಕಾರ ಮಾಡಿದೆ.

ಈ ಸಾರಿಯ ಬಿಜೆಪಿ ಸರ್ಕಾರದ ಬಜೆಟ್ ಈ ಬಗೆಗಿನ ಗುರಿಯನ್ನು ದ್ವಿಗುಣಗೊಳಿಸಿದೆ. ಈ ಶೇರು ಮಾರಾಟದ ಮೂಲಕ ಅದು 10,000 ಕೋಟಿ ರೂಪಾಯಿ ಗಳನ್ನು ಸಂಗ್ರಹಿಸುವ ಉದ್ದೇಶ ಹೊಂದಿದೆ. ಎಲ್ಲಾ ವಿತ್ತೀಯ ಕೊರತೆ ನೀಗಿಸುವ ಹೆಸರಿನಲ್ಲಿ ಹಿಂದೆಯೂ ಇಂತಹ ಗುರಿಗಳನ್ನು ಸರ್ಕಾರಗಳು ಹಾಕಿಕೊಂಡಿದ್ದವು.

ಈ ಶೇರು ಮಾರಾಟದಲ್ಲಿ ಸಿಕ್ಕಾಪಟ್ಟೆ ಅಪಾರಾ-ತಪಾರಾಗಳು ನಡೆದು ಬಂಡವಾಳಿಗರು ಮೂರು ಕಾಸಿಗೆ ಕೊಡ್ಡ ದೊಡ್ಡ ಕಾಮಧೇನುಗಳನ್ನು ಕೊಳ್ಳೆ ಹೊಡೆವ ಪ್ರಯತ್ನಗಳನ್ನು ಮಾಡಿ ಯಶಸ್ವಿಯಾಗಿದ್ದರು. ಸಂಘಟಿತ ವಲಯದ ದುಡಿವ ಜನ ಪ್ರತಿರೋಧ ಒಡ್ಡಿ ಈ ಮಾರಾಟಕ್ಕೆ ತಡೆಯೊಡ್ಡಿದ್ದರು.

ದುಡಿವ ಜನರ ಪ್ರತಿಭಟನೆಯನ್ನಂತೂ ಖಂಡಿತವಾಗಿ ಸರ್ಕಾರ ಎದುರಿಸಬೇಕಾಗುತ್ತದೆ.

ವಿತ್ತೀಯ ಕೊರತೆಯ ಕತೆ

ವಿತ್ತೀಯ ಕೊರತೆ ಶೇ.5.8 ಕ್ಕೆ ಇಳಿದಿದೆ ಎಂದು ಸರ್ಕಾರ ಸರ್ಕಸ್ಸು ಮಾಡಿ ತೋರಿಸಿದೆ. ನಿಜದಲ್ಲಿ ಇದು ಶೇ. 6.5 ರಷ್ಟಿದೆ. ಈ ವರ್ಷ ಸಾರ್ವಜನಿಕ ವಲಯದ ಘಟಕಗಳನ್ನು ಶೇರು ಕೊಳ್ಳಿಗೆ ಮತ್ತು ಪರಸ್ಪರ ಶೇರು ಕೊಳ್ಳಿಕೆಯಂತಹ ತಂತ್ರಜ್ಞಾನಗಳಿಂದ 8500 ಕೋಟಿ ರೂ. ಬಂಡವಾಳ ಖರ್ಚಿಗೆಂದು ಇಟ್ಟಿದ್ದ ಹಣದಲ್ಲಿ 16705 ಕೋಟಿ ರೂ.ಗಳನ್ನು ಖರ್ಚು ಮಾಡಲಿಲ್ಲ; ಅಂತರ್ರಾಷ್ಟ್ರೀಯ ತೈಲ ಬೆಲೆಗಳಲ್ಲಿ ಭಾರೀ ಇಳಿತದಿಂದ ತೈಲನಿಧಿಯಲ್ಲಿ 20000 ಕೋಟಿ ರೂ. ಹೆಚ್ಚುವರಿ ಸೇರಿದ್ದನ್ನು ಪೆಟ್ರೋಲಿಯಂ ಉತ್ಪನ್ನಗಳ ಬೆಲೆ ಇಳಿಸಿ ಜನರಿಗೆ ವರ್ಗಾಯಿಸದೇ ಸರಕಾರವೇ ಇಟ್ಟುಕೊಂಡಿತು. ಹೀಗಿದ್ದರೂ ಈ ಕೊರತೆ 6.5% ಯಾಯ್ತಿತು. ರೆವಿನ್ಯೂ ಕೊರತೆ 12000 ಕೋಟಿ ರೂ.ಗಳಷ್ಟು ಹೆಚ್ಚಿತು. ಸಣ್ಣ ಉಳಿತಾಯದ ಶೇ. 75 ರಷ್ಟನ್ನು ರಾಜ್ಯಗಳಿಗೆ ವರ್ಗಾಯಿಸಿ ಬಂಡವಾಳ ಸ್ವೀಕೃತಿ ಮತ್ತು ಬಂಡವಾಳ ಖರ್ಚು ಎರಡನ್ನು ಕಡಿಮೆಮಾಡಿ ಇದನ್ನು ಸಾಧಿಸಲಾಗಿದೆ. ಕಂದಾಯ ಕೊರತೆ ತೀರ ಹೆಚ್ಚಿನ ಮಟ್ಟದಲ್ಲಿ ಅಂದರೆ ಶೇ. 3 ರಷ್ಟು ಉಳಿಯಲಿದೆ. ಹೀಗೆ ಈ ಬಜೆಟ್ಟಿನಲ್ಲಿ ವಿತ್ತೀಯ ಸರಿಪಡಿಸುವಿಕೆಯ ಬದಲು ವಿತ್ತೀಯ ಪರಿಸ್ಥಿತಿಯನ್ನು ಹದಗೆಡಿಸಲಾಗಿದೆ. ಅಷ್ಟೆ .

ಕೃಷಿಗೆ ಆದ್ಯತೆಯೆಂಬ ಸುಳ್ಳು

ಕೃಷಿಗೆ ಆದ್ಯತೆ ನೀಡಿದ್ದೇವೆಂದು ಬಿಜೆಪಿಯ ಸರಕಾರ ಹೇಳಿಕೊಳ್ಳುತ್ತಿದೆ. ಕೃಷಿಯ ಮಂದಗತಿಯ ಬೆಳವಣಿಗೆ ತಲಾ ಆಹಾರಧಾನ್ಯದ ಲಭ್ಯತೆಯ ಕಡಿತ ಇವು ಕೃಷಿಗೆ ಯಾವುದೇ ಸಕಾರಾತ್ಮಕ ಪ್ರೋತ್ಸಾಹ ಇಲ್ಲದಿರುವಾಗಲೇ ಆಗಿರತಕ್ಕಂತಹ ಬೆಳವಣಿಗೆಗಳು. ಭೂ ಸುಧಾರಣೆ, ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ಪ್ರೋತ್ಸಾಹ/ ಬೆಂಬಲ ನೀಡುವ ಯೋಜನೆಗಳು ಮಾತ್ರ ನಮ್ಮ ದೇಶದ ಕೃಷಿ ವಲಯವನ್ನು ಬೆಳೆಸುವ ನೀತಿಗಳಾಗುತ್ತವೆ. ಆದರೆ ಈ ಬಜೆಟ್ಟಿನಲ್ಲಿ ಅಂತಹ ಯಾವುದೇ ಯೋಜನೆಗಳಿಲ್ಲ. 1998-99 ರಲ್ಲಿ ಬಜೆಟ್‌ನಲ್ಲಿ 3864 ಕೋಟಿ ರೂ.ಗಳಲ್ಲಿ ಕೃಷಿಗೆ ಕೊಡಲಾಗಿತ್ತು. ಈ ಬಜೆಟ್ಟಿನಲ್ಲಿ ಅದು 3736 ಕೋಟಿ ರೂ.ಗಿಳಿದಿದೆ. ನೀರಾವರಿಗೆ 26 ಕೋಟಿ ರೂ.ಕಡಿತವಾಗಿದೆ. ಗ್ರಾಮೀಣ ಅಭಿವೃದ್ಧಿಗೆ 339 ಕೋಟಿ ರೂ.ಗಳ ಕಡಿತ.

ಬದಲಿಗೆ ಯೂರಿಯಾದ ಬೆಲೆಯನ್ನು ಬಜೆಟ್ಟಿಗೆ ಮುಂಚೆಯೇ ತೀವ್ರವಾಗಿ ಏರಿಸಲಾಗಿದೆ. ಉದಾರೀಕರಣದ ಆರ್ಥಿಕ ನೀತಿಯಿಂದಾಗಿ ಬೆಳೆಗಳನ್ನು ಬೆಳೆವ ರೀತಿಯಲ್ಲೇ ಏರುಪೇರುಗಳಾಗಿವೆ. ವಾಣಿಜ್ಯ ಬೆಲೆಗಳಿಗೆ ಹೆಚ್ಚಿನ ಒತ್ತು ಸಿಕ್ಕಿ ಆಹಾರ ಧಾನ್ಯಗಳನ್ನು ಬೆಳೆಯದ ಸ್ಥಿತಿ ಉಂಟಾಗುತ್ತಿದೆ. ದೇಶದ ಆಹಾರ ಸುಭದ್ರತೆಯನ್ನೇ ಪೂರ್ತಿಯಾಗಿ ಹಾಳುಗೆಡಹುವ ದಿಸೆಯಲ್ಲಿ ಇದು ಕೆಲಸ ಮಾಡುತ್ತಿದೆ.

ಬೆಲೆಗಳನ್ನು ಏರಿಸುವ ಬಜೆಟ್

ಈ ಬಜೆಟ್ ಹೆಚ್ಚಿನ ಪರೋಕ್ಷ ತೆರಿಗೆಗಳ ಮೂಲಕವೇ ಸಂಪನ್ಮೂಲಗಳನ್ನು ಕ್ರೋಢೀಕರಿಸಿ ಕೊಳ್ಳಲಿದೆ. ಒಟ್ಟು 9334 ಕೋಟಿ ರೂಪಾಯಿಗಳಷ್ಟು ಹೊಸ ತೆರಿಗೆಗಳನ್ನು ಹೇರಲಾಗಿದೆ. ಈ ತೆರಿಗೆಯಲ್ಲಿ ಜನಸಾಮಾನ್ಯರ ಹೊರೆಯಾಗುವ ತೆರಿಗೆಗಳೇ (ಪರೋಕ್ಷವಾಗಿ) ಹೆಚ್ಚು. ಈ ಪರೋಕ್ಷ ತೆರಿಗೆಗಳು ಬೆಲೆಗಳನ್ನು ಹೆಚ್ಚಿಸಿ ಜನಸಾಮಾನ್ಯರು ಈ ಬೆಲೆ ತೆರುವಂತೆ ಮಾಡುತ್ತವೆ.

ಒಂದು ಕಡೆ ಸಹಾಯ ಧನಗಳ ಕಡಿತ, ಇನ್ನೊಂದು ಕಡೆ ಬೆಲೆಗಳ ಏರಿಕೆ - ಹೀಗೆ ಎರಡು ರೀತಿಯಲ್ಲಿ ಜನ ಸಾಮಾನ್ಯರನ್ನು, ದುಡಿವ ಜನರನ್ನು ಹಿಂಡುವ ಬಜೆಟ್ ಇದು.

ಇದಕ್ಕೆ ಬದಲಾಗಿ ಬಂಡವಾಳಿಗರಿಗೆ ಒಂದು ಕಡೆ ತೆರಿಗೆ ಏರಿಸಿದಂತೆ ಮಾಡಿ ಇನ್ನೊಂದು ಕಡೆ ವಿನಾಯತಿ ನೀಡಲಾಗುತ್ತಿದೆ. ತೆರಿಗೆ ಏರಿಕೆಯ ಬಿಸಿ

1999-2000 ದ ಬಜೆಟ್‌ನ

ಆದಾಯ ಎಲ್ಲಿಂದ?

ಸಾಲ	25%
ಅಬಕಾರಿ ಸುಂಕ	20%
ಕಸ್ಟಮ್ಸ್ ಸುಂಕ	15%
ತೆರಿಗೇತರ ಆದಯ	15%
ಕಂಪನಿ ತೆರಿಗೆ	9%
ಆದಾಯ ತೆರಿಗೆ	8%
ಸಾಲೇತರ ಬಂಡವಾಳ ಸ್ವೀಕೃತಿ	6%
ಇತರ ತೆರಿಗೆಗಳು	2%

ಖರ್ಚು ಎಲ್ಲಿಗೆ ?

ಸಾಲದ ಬಡ್ಡಿ ಪಾವತಿ	27%
ಯೋಜನೆ ಮತ್ತು ಯೋಜನೇತರ ರಕ್ಷಣೆ	26%
ರಕ್ಷಮೆ	14%
ರಾಜ್ಯಗಳ ಪಾಲು	14%
ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಿಗೆ ನೆರವ	10%
ಸಬ್ಸಿಡಿಗಳು	7%
ಯೋಜನೇತರ ನೆರವು	2%

ವಲಯುವಾರು ಕೇಂದ್ರೀಯ ಯೋಜನಾ ಬಾಬ್ತು

	1998-99 ರ ಬಜೆಟ್ ಅಂದಾಜು	1998-99 ರ ಪರಿಷತ ಅಂದಾಜು	1999-2000 ಬಜೆಟ್ ಅಂದಾಜು
ಕೃಷಿ ಮತ್ತು ಸಂಬಂಧಿತ ಚಟುವಟಿಕೆಗಳು	3864	2777	3736
ಗ್ರಾಮೀಣಾಭಿವೃದ್ಧಿ	8182	7736	7843
ನೀರಾವರಿ ಮತ್ತು ಪ್ರವಾಹ ಹತೋಟಿ	374	345	348
ವಿದ್ಯುತ್	30082	23979	27381
ಕೈಗಾರಿಕೆ ಮತ್ತುಗಣಿ	11551	7955	8672
ಸಾರಿಗೆ	16186	14397	16850
ಸಂಪರ್ಕ	14878	13467	16811
ವಿಜ್ಞಾನ ತಂತ್ರಜ್ಞಾನ	2766	2389	2988
ಸಾಮಾನ್ಯ ಆರ್ಥಿಕ ಸೇವೆಗಳು	1011	941	1246
ಸಾಮಾಜಿಕ ಸೇವೆಗಳು	283	256	281
ಒಟ್ಟು	105187	88482	103521

ಅವರಿಗೆ ತಾಕದಂತೆ ನೋಡಿಕೊಳ್ಳಲಾಗುತ್ತಿದೆ.

ಔದ್ಯಮಿಕ ಬೆಳವಣಿಗೆಗೆ ಕುರುಡಾಗಿರುವ ಬಜೆಟ್

ಬೇಡಿಕೆಯೇ ಇಲ್ಲದೆ ಭಾರತದ ಔದ್ಯಮಿಕ ಬೆಳವಣಿಗೆ ತೀವ್ರವಾಗಿ ಕುಸಿದು ಹೋಗಿದೆ. ಹೀಗಿರುವಾಗ ಬೇಡಿಕೆಗಳು ಏರುವಂತಹ ಕ್ರಮಗಳನ್ನು ಕೈಗೊಳ್ಳುವ ಮೂಲಕ ಆರ್ಥಿಕಕ್ಕೆ ಚಾಲನೆ ನೀಡ ಬೇಕಾಗಿತ್ತು. ಆದರೆ ಬಜೆಟ್ಟಿನಲ್ಲಿ ಅಂತಹ ಕ್ರಮಗಳ ಕೊರತೆ ಎದ್ದು ಕಾಣುತ್ತದೆ. ಹಣಕಾಸು ಮಾರುಕಟ್ಟೆಗೆ ನೀಡಿರುವ ಪ್ರೋತ್ಸಾಹ ಔದ್ಯಮಿಕ ಬೆಳವಣಿಗೆಯ ಕಡೆಗಿಲ್ಲ.

ಉತ್ಪಾದನೆ, ಉದ್ಯೋಗ ಗಾತ್ರ, ಇವೆಲ್ಲವುಗಳ ದೃಷ್ಟಿಯಿಂದ ಉಕ್ಕು ಕಲಿದ್ದಲು ಮತ್ತು ಸಿಮೆಂಟ್ ಉದ್ದಿಮೆಗಳು ಬಹು ಮುಖ್ಯ ಉದ್ದಿಮೆಗಳು. ಸದ್ಯದಲ್ಲಿ ಈ ಎಲ್ಲ ಉದ್ದಿಮೆಗಳು ತೀವ್ರ ಸಂಕಷ್ಟದಲ್ಲಿವೆ. ಈ ಉದ್ದಿಮೆಗಳನ್ನು ಪುನರುಜ್ಜೀವನ ಗೊಳಿಸುವ ಯಾವುದೇ ಕ್ರಮಗಳು ಬಜೆಟ್ಟಿನಲ್ಲಿಲ್ಲ.

ಹಾಗೆಯೇ ವಿದ್ಯುತ್ ಉತ್ಪಾದನೆ ಇನ್ನೊಂದು ಬಹುಮುಖ್ಯ ಉದ್ದಿಮೆ. ವಿದ್ಯುತ್ ಉತ್ಪಾದನೆಗೂ ಸಿಗಬೇಕಾದ ಪ್ರಾಮುಖ್ಯತೆ ಸಿಕ್ಕಿಲ್ಲ. ವಿದ್ಯುತ್ ವಲಯ ಬಜೆಟ್ ನಿಂದ ಹಲವು ರಿಯಾಯಿತಿ/ಪ್ರೋತ್ಸಾಹದ ಕ್ರಮಗಳನ್ನು ನಿರೀಕ್ಷಿಸಿತ್ತು. ಆ ಮೂಲಕ ಉತ್ಪಾದನಾ ಸಾಮರ್ಥ್ಯ ಹೆಚ್ಚಾಗುವ ನಿರೀಕ್ಷೆಯನ್ನು ಈ ವಲಯ ಮಾಡಿತ್ತು.

ಆಮದು ಸುಂಕವನ್ನು ಹೆಚ್ಚಿಸಿರುವುದರಿಂದ ವಿದ್ಯುತ್ ಯೋಜನೆಗಳ ವೆಚ್ಚ ಹೆಚ್ಚಾಗಿ ರಾಜ್ಯ ವಿದ್ಯುತ್ ಮಂಡಳಿಗಳು ಇನ್ನೂ ಹೆಚ್ಚಿನ ತೊಂದರೆಯನ್ನು ಅನುಭವಿಸಲಿವೆ.

ಸಾರ್ವಜನಿಕ ವಲಯಕ್ಕೆ ಹೊಡೆತ

ಸಾರ್ವಜನಿಕ ವಲಯದ ಉದ್ದಿಮೆಗಳಿಗೆ ಎರಡು ತರಹದ ಹೊಡೆತಗಳನ್ನು ಬಜೆಟ್ ನೀಡ ಹೊರಟಿದೆ. ಮೊದಲನೇಯದಾಗಿ ಹಾನಿ ಮಾಡುತ್ತಿರುವ ಉದ್ದಿಮೆಗಳಿಗೆ ಬಜೆಟ್ ನೆರವು ನೀಡಬೇಕಾಗಿತ್ತು. ಇಂತಹ ಯಾವುದೇ ನೆರವಿನ ಉದ್ದೇಶವನ್ನು ಬಜೆಟ್ ತೋರಿಲ್ಲ. ಅಂದರೆ ಈ ಉದ್ದಿಮೆಗಳು ತಾವಾಗಿಯೇ ಸಾಯಲು ಬಿಡುವ ಆತುರ ಸರ್ಕಾರಕ್ಕೆ. ಒಂದು ಹಂತದ ನಂತರ ಖಾಸಗೀಯವರಿಗೆ ಹರಿದು ಅನುಕೂಲ ಮಾಡಿಕೊಡುವ ಆಳದ ಹುನ್ನಾರ ಇದರೊಳಗಿರುತ್ತದೆ.

ಲಾಭ ಮಾಡುತ್ತಿರುವ ಉದ್ದಿಮೆಗಳಿಗೆ ಇನ್ನೊಂದು ತರಹದ ಹೊಡೆತ. ಅದು ಶೇರು ಮಾರಾಟದ್ದು. ಶೇರು ಮಾರಾಟದಿಂದ 10,000 ಕೋಟಿ ರೂಪಾಯಿಗಳನ್ನು ಸಂಗ್ರಹಿಸುವ ಉದ್ದೇಶವನ್ನು ಬಜೆಟ್ ಹೊಂದಿದೆ. ಕಳೆದ ಸಾಲಿನಲ್ಲಿ ಅಂದರೆ 1998-99 ರಲ್ಲಿ 5000 ಕೋಟಿ ರೂಪಾಯಿ ಗಳ ಸಂಗ್ರಹಣೆಯ ಗುರಿ ಇಟ್ಟುಕೊಂಡ ಸರ್ಕಾರ ಪರಸ್ಪರ ಸಾರ್ವಜನಿಕ ವಲಯದ ಉದ್ದಿಮೆಗಳಲ್ಲೇ ಈ ಶೇರು ಮಾರಾಟವಾಗು ವಂತೆ ಮಾಡಿ 8500 ಕೋಟಿ ರೂಪಾಯಿ ಗಳನ್ನು ಸಂಗ್ರಹಿಸಿದೆ. ಆದಕ್ಕೆ ಈ ಹೆಚ್ಚಿನ ಗುರಿ.

ಈ ಉದ್ದಿಮೆಗಳಲ್ಲಿ ದುಡಿವ ಕೆಲಸಗಾರರ ಉದ್ಯೋಗಗಳಿಗೆ ಹೊಡೆತ ಬೀಳಲಿದೆ. ಹಾಗೆಯೇ ಈ ಉದ್ದಿಮೆಗಳ ಅತ್ಯುತ್ತಮ ಸೊತ್ತುಗಳನ್ನು ಖಾಸಗೀಯವರು ಕೊಳ್ಳೆಹೊಡೆಯಲಿದ್ದಾರೆ.

ಶೇರು ಮಾರುಕಟ್ಟೆಗೆ ಪ್ರೋತ್ಸಾಹ

ಶೇರು ಮಾರುಕಟ್ಟೆಗೆ ಪ್ರೋತ್ಸಾಹ ನೀಡುವ ಹಲವು ಕ್ರಮಗಳನ್ನು ಬಜೆಟ್ ಒಳಗೊಂಡಿದೆ. ಡಿವಿಡೆಂಡ್ ಮೂಲಕ ಬರುವ ಆದಾಯಕ್ಕೆ ಕರವಿನಾಯತಿ ನೀಡಲಾಗಿದೆ. ಇದರಿಂದ ಮ್ಯೂಚ್ಯುಯಲ್ ಫಂಡ್‌ಗಳಿಗೆ ಹೆಚ್ಚಿನ ಲಾಭವಾಗಲಿದೆ.

ಕಂಪನಿಗಳ ವಿಲೀನ ಮತ್ತು ವರ್ಗೀಕರಣಕ್ಕೆ ತೆರಿಗೆ ವಿನಾಯತಿ ನೀಡಲಾಗಿದೆ. ಇದರಿಂದ ವಿಲೀನ ಮತ್ತು ವಶೀಕರಣಕ್ಕೆ ಹೆಚ್ಚಿನ ವೇಗ ಬರುತ್ತದೆ. ಅದರಲ್ಲೂ ಲಾಭದಲ್ಲಿರುವ ಕಂಪನಿಗಳು ಹಾನಿ ಮಾಡುತ್ತಿರುವ ಕಂಪನಿಗಳನ್ನು ವಕ್ಕರಿಸಿಕೊಂಡು/ವಿಲೀನ ಗೊಳಿಸಿಕೊಂಡು ತೆರಿಗೆ ತೆರುವ ಗೋಜಿನಿಂದ ತಪ್ಪಿಸಿಕೊಳ್ಳುತ್ತವೆ.

ಇಂತಹ ಕ್ರಮಗಳು ಬರೀ ಹಣಕಾಸಿನ ಚಟುವಟಿಕೆಗಳನ್ನು ಹೆಚ್ಚಿಸುತ್ತವೆಯೇ ಹೊರತು ನಿಜವಾದ ಉತ್ಪಾದನೆ ಉದ್ಯೋಗಗಳನ್ನು ಹೆಚ್ಚಿಸುವುದಿಲ್ಲವಾದ್ದರಿಂದ ದೇಶದ ಆರ್ಥಿಕಕ್ಕೆ ನಿಜವಾದ ಲಾಭವಾಗುವುದಿಲ್ಲ.

ಸಾರ್ವಜನಿಕ ವಲಯದ ಒಟ್ಟು ಯೋಜನಾ ವೆಚ್ಚವನ್ನು ಕಳೆದ ವರ್ಷಕ್ಕಿಂತ 3000 ಕೋಟಿ ರೂ.ಗಳಷ್ಟು ಇಳಿಸಲಾಗಿದೆ. 20 ಲಕ್ಷ ಕಾರ್ಮಿಕರಿಂದ ಸಾರ್ವಜನಿಕ ವಲಯದಲ್ಲಿ 800 ಕೋಟಿ ರೂ.ಗಳನ್ನು ವಿ.ಆರ್.ಎಸ್.ಗೆ ತೆಗೆದಿಟ್ಟಿರುವ ಸರಕಾರ ರೋಗಗ್ರಸ್ತ ಘಟಕಗಳ ಪುನರುಜ್ಜೀವನಕ್ಕೆ ಇದರ ಮೂರನೇ ಒಂದರಷ್ಟೂ ಕೊಟ್ಟಿಲ್ಲ.

ವಿದೇಶೀ ಹೂಡಿಕೆ

ವಿದೇಶೀ ನೇರ ಹೂಡಿಕೆ ಮತ್ತು ಅನಿವಾಸಿ ಭಾರತೀಯರ ಹೂಡಿಕೆ ಗಳಿಗೆ ಪ್ರೋತ್ಸಹ ನೀಡಲಾಗಿದೆ. ಶೇ. 75 ರಷ್ಟು ಅನುಮೋದನೆ ಹಾಗೂ ಅನಿವಾಸಿ ಭಾರತೀಯರು ಹೂಡಿಕೆ ಮಾಡುವ ಪ್ರಸ್ತಾಪಗಳಿಗೆ ಶೇ. 10 ರ ಪಾಲುದಾರಿಕೆಗೂ ತಕ್ಷಣ ಅನುಮೋದನೆಯ ಯೋಜನೆಯನ್ನು ಬಜೆಟ್ ಘೋಷಿಸಿದೆ.

ಈ ಯೋಜನೆಗಳ ಮೂಲಕ ಭಾರತೀಯರ ಆಸ್ತಿಗಳು ವಿದೇಶಿಯರ ಮತ್ತು ಅನಿವಾಸಿ ಬಾರತೀಯರ ಕೈಗೆ ಸೇರುವ ಪ್ರಕ್ರಿಯೆ ತೀವ್ರ ಗೊಳ್ಳುತ್ತದೆ.

ಬಿಜೆಪಿ ಹೇಳಿಕೊಳ್ಳುವ ಸ್ವದೇಶೀ ಇದೇ ಇರಬಹುದೇನೋ?

ಅಂಕಿ-ಅಂಶಗಳ ಸರ್ಕಸ್ಸಿನಲ್ಲಿ ಮಾತ್ರ ಇಳಿದ ಹಣಕಾಸು ಕೊರತೆ

ಈ ವರ್ಷದ ಹಣಕಾಸು ಕೊರತೆ 4% ಎಂದು ಹಣಕಾಸು ಮಂತ್ರಿಗಳು ಬಜೆಟ್ ಭಾಷಣದಲ್ಲಿ ಹೇಳಿದಾಗ ಬಂಡವಾಳಶಾಹಿ ವಕ್ತಾರರು 'ವಾಹ್! ವಾಹ್!' ಎಂದರು, ಬಿಜೆಪಿ ಮಂದಿ ಬೆನ್ನು ತಟ್ಟಿಕೊಂಡರು. ಏಕೆಂದರೆ ಕಳೆದ ವರ್ಷ ಇದು 6.5% ಇತ್ತು. ಇದು ಕೇವಲ ಅಂಕೆ-ಅಂಶಗಳ ಕಸರತ್ತು, ವಾಸ್ತವವಾಗಿ ಸರ್ಕಾರದ ಅಂದಾಜಿನ ಪ್ರಕಾರವೂ ಇದು 5.8% ವಾಗುತ್ತದೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯೂರೋ ಸದಸ್ಯ ಸೀತಾರಾಂ ಯೆಚೂರಿಯವರು ತೋರಿಸಿಕೊಟ್ಟರು. ಎರಡು ದಿನಗಳ ನಂತರ ಆರ್ಥಿಕ ವಿಷಯಗಳ ದಿನಪತ್ರಿಕೆ 'ಇಕನಾಮಿಕ್ಸ್ ಟೈಮ್ಸ್' ಕೂಡಾ ಇದನ್ನೇ ಹೇಳಿತು - "ಅಂಕಿ-ಅಂಶಗಳ ಹೊಗೆ ಕೊರತೆಯನ್ನು ಇಳಿಸಲು ಸಿನ್ಹಾರಿಗೆ ನೆರವಾಯಿತು" ಎಂದು ಒಪ್ಪಿಕೊಂಡಿತು.

ಈ ಕಸರತ್ತು ಹೇಗೆ ನಡೆದಿದೆ? ಹಣಕಾಸು ಕೊರತೆಯನ್ನು ಒಟ್ಟು ರಾಷ್ಟ್ರೀಯ ಉತ್ಪನ್ನದ ಎಷ್ಟು ಶೇಕಡಾ ಎಂಬ ಪ್ರಮಾಣದಲ್ಲಿ ಅಳೆಯಲಾಗುತ್ತದೆ. ಹಣಕಾಸು ಕೊರತೆಯ ಅಂಕಿಯನ್ನು ಒಟ್ಟು ರಾಷ್ಟ್ರೀಯ ಉತ್ಪನ್ನದ ಅಂಕಿಯಿಂದ ಭಾಗಿಸಿದಾಗ ಇದು ದೊರೆಯುತ್ತದೆ.

ಇತ್ತೀಚೆಗೆ ಕೇಂದ್ರ ಅಂಕಿ-ಅಂಶಗಳ ಸಂಸ್ಥೆ (CSO) ರಾಷ್ಟ್ರೀಯ ಉತ್ಪನ್ನ(GDP) ಯನ್ನು ಲೆಕ್ಕ ಹಾಕುವ ವಿಧಾನವನ್ನು ಬದಲಿಸಿತು. ಇದರ ಪರಿಣಾಮವಾಗಿ ಈ ಅಂಕೆ ಬಹಳ ಹೆಚ್ಚಿತು (ಹಿಂದಿನ ವರ್ಷಕ್ಕೆ ಹೋಲಿಸಿದರೆ ನಿಜವಾದ ಉತ್ಪನ್ನ ಹೆಚ್ಚದಿದ್ದರೂ).

ಇನ್ನೊಂದು ಕಡೆ ಇದುವರೆಗೆ ಮಾಡುತ್ತಿದ್ದಂತೆ ಸಣ್ಣ ಉಳಿತಾಯದ 75% ವನ್ನು ಅಂದರೆ 25000 ಕೋಟಿ ರೂ.ಗಳನ್ನು ಸಾರ್ವಜನಿಕ ಖಾತೆಗೆ ಹಾಕಿ ಇಲ್ಲಿ ಲೆಕ್ಕಕ್ಕೆ ತೆಗೆದುಕೊಳ್ಳದೇ ಹಣಕಾಸು ಕೊರತೆಯನ್ನು ಲೆಕ್ಕ ಹಾಕಲಾಯಿತು. ಇದಕ್ಕೆ ಸರಕಾರ ಕೊಡುವ ಕಾರಣ 75% ರಾಜ್ಯಗಳಿಗೆ ವರ್ಗಾಯಿಸಲಾಗುತ್ತದೆ ಎಂದು. ಅದೇನೇ ಇರಲಿ. ಖರ್ಚಿನ ಲೆಕ್ಕ ಕಮ್ಮಿಯಾಯಿತು, ಇದರಿಂದ ಕೊರತೆಯ ಲೆಕ್ಕ ಹೆಚ್ಚಾಯಿತು. ಪರಿಣಾಮವಾಗಿ ಹಣಕಾಸು ಕೊರತೆಯ ಶೇಕಡ ಇಳಿಯಿತು. ವಾಸ್ತವವಾಗಿ ಇಳಿಯದಿದ್ದರೂ ಜನಗಳನ್ನು ವಂಚಿಸಲು ಎಂತೆಂತಾ ಕಸರತ್ತು! ತಮಾಷೆಯೆಂದರೆ ಇದರಲ್ಲೂ ಹಣಕಾಸು ಮಂತ್ರಿಗಳ 'ಸ್ವದೇಶಿ' ಏನೂ ಇಲ್ಲ. ಇದು 'ಯುರೋಪಿಯನ್ ಯೂನಿಯನ್' ಅನುಭವದಿಂದ ಎತ್ತಿಕೊಂಡದ್ದು ಎನ್ನುತ್ತಾರೆ ಸೀತಾರಾಂ ಯೆಚೂರಿಯವರು. ಈ 'ಯುರೋಪಿಯನ್ ಸಂಘ' ಕ್ಕೆ ಸದಸ್ಯರಾಗ ಬಯಸುವ ದೇಶ ತನ್ನ ಹಣಕಾಸು ಕೊರತೆಯನ್ನು 3% ಕ್ಕೆ ಳಿಸಬೇಕಾದ ಶರತ್ತು ಇತ್ತು. ಆಗ ಈ ದೇಶಗಳು ಹಲವು 'ಬಾಬ್ತು'ಗಳನ್ನು ಬಜೆಟ್ಟಿನಿಂದ ತೆಗೆದು 'ಸಾರ್ವಜನಿಕ ಖಾತೆ'ಗೆ ಹಾಕಿದವು. ಯಶವಂತ ಸಿನ್ಹಾ ಈಗ ಅದನ್ನೇ ಮಾಡಿದ್ದಾರೆ.

ಹಣಕಾಸು ಕೊರತೆ ಒಟ್ಟು ರಾಷ್ಟ್ರೀಯ ಉತ್ಪನ್ನ(GDP) ದ ಶೇಕಡಾವಾರು



"ಸ್ವದೇಶಿ" ಕೇವಲ ಭಜನೆಗೆ?



ಕೇಂದ್ರ ಹಣಕಾಸು ಮಂತ್ರಿ ಯಶವಂತ ಸಿನ್ಹಾ 1999-2000 ರ ತನ್ನ ಸರಕಾರದ ಬಜೆಟನ್ನು ಶನಿವಾರ ಮಂಡಿಸಿದರು. ಬಜೆಟನ್ನು ಸಂಜೆ ಮಂಡಿಸುವ ಬದಲು ಬೆಳಗ್ಗೆಯೇ ಮಂಡಿಸುವ ಮೂಲಕ ಬಜೆಟ್ ದಿನದ 'ವಿದೇಶಿ' ಕೊಂಡಿಯನ್ನು, ವಸಾಹತುಶಾಹಿ ಕೊಂಡಿಯನ್ನು ಮುರಿದಿರುವುದಾಗಿ ಬಿಜೆಪಿ ಮಂದಿ ಹೇಳಿಕೊಳ್ಳುತ್ತಿದ್ದಾರೆ. ಇದು ನಿಜವೇ? ಅವರ ಬಜೆಟ್‌ನಲ್ಲಿ 'ಸ್ವದೇಶಿ' ಎಷ್ಟಿದೆ? ಸಾಮ್ರಾಜ್ಯಶಾಹಿ-ವಿರೋಧ ಎಷ್ಟಿದೆ?

'ಸ್ವದೇಶಿ' ಇದೆ ಎಂದು ತೋರಿಸಲು ಪಾಪ ಅವರು ಬಹಳ ಹೆಣಗಿದರು. ಬಜೆಟ್ ಭಾಷಣ ಮುಗಿಸುತ್ತಾ ವಾಜಪೇಯಿಯವರ ಹಿಂದೀ ಕವನವನ್ನು ಉದ್ಧರಿಸಿದರು - 'ದೇಶಪ್ರೇಮದ ಭರತ ಇಳಿಯುವುದಿಲ್ಲ' ಎಂದರು. ಭಾಷಣದ ನಡುವೆಯೂ ಕೆಲವು ಹಿಂದಿ ಫಿಲಂ ಟೈಟಲ್‌ಗಳನ್ನು ಉದ್ಧರಿಸಿದರು. ಅವರು ಪ್ರಕಟಿಸಿದ ಹೊಸ ಯೋಜನೆಗಳ ಹೆಸರುಗಳೆಲ್ಲಾ ಸಂಸ್ಕೃತದಲ್ಲೇ ಇವೆ. ಹಿಂದಿನ ಪ್ರಧಾನ ಮಂತ್ರಿಗಳ ಹೆಸರಲ್ಲಿದ್ದ 'ರೋಜ್‌ಗಾರ್ ಯೋಜನಾ' ಗಳನ್ನೆಲ್ಲಾ ಒಟ್ಟು ಸೇರಿಸಿ 'ಸ್ವರ್ಣ ಜಯಂತಿ ಗ್ರಾಮ್ ಸ್ವ-ರೋಜಗಾರ್ ಯೋಜನಾ' ಎಂದು ಹೆಸರಿಸಿದರು. ನೇಕಾರರ ಒಂದು ಯೋಜನೆಗೆ ಸಂಘ ಪರಿವಾರದ ಒಬ್ಬ ಮುಖಂಡ ಪಂಡಿತ್ ದೀನ್ ದಯಾಳ್ ಉಪಾಧ್ಯಾಯರ ಹೆಸರಿಟ್ಟರು.

ಆದರೆ ಈ ಹೆಸರುಗಳ ಸರ್ಕಸ್ಸಿನ್ನಾಚೆಗೆ 'ಸ್ವದೇಶಿ' ಎನ್ನುವುದು ಏನಾದರೂ ಇದೆಯೇ? ಅವರ ಬಜೆಟ್ ಭಾಷಣ ಮಾತ್ರವಲ್ಲ, ಎರಡು ದಿನಗಳ ಹಿಂದೆ ಅವರ ಇಲಾಖೆ ಸಲ್ಲಿಸಿದ್ದ ಆರ್ಥಿಕ ಸರ್ವೇಕ್ಷಣೆ ಕೂಡಾ ದೇಶದ ಪ್ರಸಕ್ತ ಆರ್ಥಿಕ ಬಿಕ್ಕಟ್ಟಿಗೆ ಜಾಗತಿಕ ಆರ್ಥಿಕ ಪರಿಸರ ಕಾರಣ ಎಂದಿತ್ತು. ಆದರೆ ಎಲ್ಲರಿಗೂ ಗೊತ್ತು - ವಿಶ್ವದ ಕೆಲವೆಡೆ ದೇಶಗಳನ್ನು ಆವರಿಸಿದ ಆರ್ಥಿಕ ಅಲ್ಲೋಲ ಕಲ್ಲೋಲದ ಮೂಲ ಇರುವುದು 'ವಿದೇಶಿ' ವಿಶ್ವಬ್ಯಾಂಕ್/ಐಎಂಎಫ್ 'ಸುಧಾರಣಾ' ಪಥ್ಯದಲ್ಲೇ. ಈ ದಶಕದಲ್ಲಿ ಭಾರತವೂ ಇದೇ ಪಥ್ಯವನ್ನು ಅಂಗೀಕರಿಸಿತು. ಇದೇ ದೇಶವನ್ನು ತೀವ್ರ ಆರ್ಥಿಕ ಬಿಕ್ಕಟ್ಟಿನಲ್ಲಿ ಸಿಲುಕಿಸಿದೆ. ಸಿನ್ಹಾರವರ ಸರಕಾರ ಈ ಪಥ್ಯವನ್ನು ತಿರಸ್ಕರಿಸಿಲ್ಲ, ಬದಲಾಗಿ ಅತ್ಯಂತ ವಿಧೇಯತೆಯಿಂದ ಈ ವಿದೇಶಿ ಪಥ್ಯವನ್ನು ಜಾರಿಗೆ ತಂದಿದೆ. ಆದ್ದರಿಂದ ಏನು ಆಗಬೇಕಿತ್ತೋ ಅದೇ ಆಗಿದೆ.

ಉದಾರೀಕರಣ, ಖಾಸಗೀಕರಣ, ಜಾಗತೀಕರಣ(ಅಥವಾ LPG) ಈ ಪಥ್ಯದ ಸಾರ. ಇದು ಸ್ವಾವಲಂಬನೆಗೆ (ಕೆಲವರು ಇದನ್ನು 'ಸ್ವದೇಶಿ' ಎನ್ನಬಹುದು) ಮರಣಾಂತಿಕವಾದ 'ಪಥ್ಯ'. ಸಿನ್ಹಾರವರ ಎರಡನೇ ಬಜೆಟ್ ಸ್ವಾವಲಂಬನೆಯನ್ನು ಪುನರುಜ್ಜೀವನ ಗೊಳಿಸುವಲ್ಲಿ ನೆರವಾಗಿಲ್ಲ. ಕೆಲವು ವಿದೇಶಿ ನೇರ ಹೂಡಿಕೆಗಳಿಗೆ 75% ದವರೆಗೆ ಅನಿವಾಸಿ ಭಾರತೀಯರ ಹೂಡಿಕೆಗಳಿಗೆ 100% ತಂತಾನೆ ಮಂಜೂರಾತಿ ನೀಡುವ ಪ್ರಸ್ತಾಪವಂತೂ ಭಾರತೀಯ ಉತ್ಪಾದಕ ಆಸ್ತಿಗಳು ವಿದೇಶಿಯರ, ಅನಿವಾಸಿಗಳ ಕೈಗೆ ಹಸ್ತಾಂತರಗೊಳ್ಳಲು ಅವಕಾಶ ಕಲ್ಪಿಸಿದೆ. ಕೆಲವು ಯೋಜನೆಗಳ ಹೆಸರುಗಳು ಸಂಸ್ಕೃತೀಕರಣ, ಹಿಂದೀಕರಣ ಗೊಂಡರೂ ಬಜೆಟ್ ಪ್ರಸ್ತಾವಗಳ ಮುಖ್ಯ ದಿಕ್ಕು ಅದೇ - ಐಎಂಎಫ್-ವಿಶ್ವಬ್ಯಾಂಕ್ ಆದೇಶಿಸಿದ 'LPG' ದಾರಿಯೇ. ಕೇವಲ ಸಂಜೆಯ ಬದಲು ಬೆಳಗ್ಗೆ ಬಜೆಟ್ ಮಂಡಿಸಿದ ಮಾತ್ರಕ್ಕೆ 'ವಿದೇಶಿ' ಕೊಂಡಿಯನ್ನು ಸಿನ್ಹಾ ಕಳಚಲಿಲ್ಲ.

ದೇಶದ ವಿದೇಶಿ ಕರೆನ್ಸಿ ಮೀಸಲು ತೃಪ್ತಿಕರವಾಗಿದೆ ಎಂದು ಹಣಕಾಸು ಮಂತ್ರಿಗಳು ತೃಪ್ತಿ ಪಟ್ಟಿದ್ದಾರೆ. ಆದರೆ ನಮ್ಮ ವಿದೇಶಿ ಕರೆನ್ಸಿ ಮೀಸಲಿಗೆ ಸೇರಿದ ಎರಡು ಶತಕೋಟಿ ಡಾಲರುಗಳಲ್ಲಿ ಒಂದೂವರೆ ಶತಕೋಟಿ ಡಾಲರು ಬ್ಯಾಂಕುಗಳಲ್ಲಿರುವ 'ಅನಿವಾಸಿ ಭಾರತೀಯ ಠೇವಣಿಗಳು, ಇದಕ್ಕೆ 20% ದರದಲ್ಲಿ ಬಡ್ಡಿ ತೆರಲಾಗುತ್ತದೆ, ಅಸಲನ್ನು ಠೇವಣಿದಾರರು ಹೇಳಿದ ಕೂಡಲೇ ಹಿಂದಿರುಗಿಸ ಬೇಕಾಗುತ್ತದೆ ಎಂಬ ನಿಜಾಂಶವನ್ನು ಅವರು ಮರೆ ಮಾಚುತ್ತಾರೆ. ಹೀಗಿರುವಾಗ ಈ 'ತೃಪ್ತಿ' ಯಾರ ಮರ್ಜಿಯನ್ನ ವಲಂಬಿಸಿದೆ? ತಾಳ ಹಾಕುವವರಾರು, ಅದಕ್ಕೆ ಅನುಸಾರವಾಗಿ ಹೆಜ್ಜೆ ಹಾಕುವರಾರು ಎಂಬುದು ಸ್ಪಷ್ಟವಲ್ಲವೇ? ಆದ್ದರಿಂದಲೇ ತಾನೇ ನಾವು ಹೇಳುತ್ತಿರುವುದು 'ಸ್ವದೇಶಿ'ಯ ಚಟ್ಟ ಕಟ್ಟಿದ ಬಜೆಟ್ ಇದೆಂದು!

(ಕೃಪೆ: 'ಗಣಶಕ್ತಿ' ಆನ್‌ಲೈನ್)

ಮೂಲಭೂತ ಪ್ರಶ್ನೆಗಳನ್ನು ಎತ್ತಿಕೊಳ್ಳದ ಯಥಾಸ್ಥಿತಿ ಮುಂದುವರಿಸುವ ಬಜೆಟ್ ಇದು

ಎನ್ನುತ್ತಾರೆ ಪ್ರಖ್ಯಾತ ಅರ್ಥಶಾಸ್ತ್ರಜ್ಞ ಪ್ರೊ. ಬಾಗ್ಚಿ

ದೇಶದಲ್ಲಿನ ಪ್ರಸ್ತುತ ಆರ್ಥಿಕ ಸನ್ನಿವೇಶ ಸಂಕಟಮಯವಾಗಿದೆ. ಆದರೆ 1999-2000 ರ ಕೇಂದ್ರ ಬಜೆಟ್ ದೇಶದ ಆರ್ಥಿಕದ ಯಾವುದೇ ಪ್ರಮುಖ ಪ್ರಶ್ನೆಗಳನ್ನು ಎದುರಿಸಿಲ್ಲ. ಆರ್ಥಿಕದ ಎರಡು ಮೂಲಭೂತ ಕೊರತೆಗಳಾದ ಹಣಕಾಸು ಕೊರತೆ ಮತ್ತು ಪಾವತಿ ಬಾಕಿ ಕೊರತೆಯ ಪ್ರಶ್ನೆಗಳನ್ನು ಬಜೆಟ್ ಎತ್ತಿಕೊಂಡೇ ಇಲ್ಲ ಎನ್ನುತ್ತಾರೆ ಪ್ರಖ್ಯಾತ ಅರ್ಥಶಾಸ್ತ್ರಜ್ಞ ಪ್ರೊ. ಅಮಿಯಾ ಕುಮಾರ್ ಬಾಗ್ಚಿ.

"ವೈಯಕ್ತಿಕ, ಕಂಪನಿ ಆದಾಯ ತೆರಿಗೆ ಹೆಚ್ಚಿಸಿದ್ದು ಸ್ವಾಗತಾರ್ಹ ಕ್ರಮ. ಆದರೆ 20% ಆದಾಯತೆರಿಗೆ ನೀಡುವವರ ಮೇಲೆ ಸರ್ಚಾರ್ಜ್ ಹೇರುವ ಬದಲು ವಾರ್ಷಿಕ 10 ಲಕ್ಷ ರೂ.ಗಳಿಗಿಂತ ಹೆಚ್ಚು ಆದಾಯದವರ ಮೇಲೆ 40% ತೆರಿಗೆಯ ಇನ್ನೊಂದು ಸ್ಲಾಬ್ ತರಬಹುದಿತ್ತು" ಎಂದಿರುವ ಇವರು 'ಆಂತರಿಕ ಸಾಲಕ್ಕೆ ಬಡ್ಡಿ ಪಾವತಿ ಈ ವರ್ಷ 10000 ಕೋಟಿ ರೂ.ಗಳಷ್ಟು ಹೆಚ್ಚಲಿದೆ ಎಂದು ಬಜೆಟ್ ಅಂಕಿ-ಅಂಶಗಳು ತೋರಿಸುತ್ತವೆ. ಇದು ಆತಂಕಕಾರಿ ಸಂಖ್ಯೆ. ಕೊರತೆಯನ್ನು ತಪ್ಪಿಸಲು ಸರಕಾರ ಆಂತರಿಕ ಸಾಲವನ್ನು ಬಳಸಿದೆ. ಆದರೆ ಹಣಕಾಸು ಕೊರತೆ ಇಳಿಸದಿದ್ದರೆ ರಾಜ್ಯಗಳಿಗೂ ಸಾಕಷ್ಟು ಪಾಲು ದೊರೆಯುವುದಿಲ್ಲ" ಎಂದಿದ್ದಾರೆ.

ರಣವೀರ ಸೇನೆಯ ಪೋಷಕರಿಗೆ?

ಬಜೆಟ್ ಆರ್ಥಿಕದ ಮೂಲಭೂತ ಸಾಮಾಜಿಕ ಸಮಸ್ಯೆಗಳ ಬಗ್ಗೆಯೂ ಲಕ್ಷ್ಯ ವಹಿಸಿಲ್ಲ. ಹೆಚ್ಚಿನ ಪ್ರಸ್ತಾವಿತ ಯೋಜನೆಗಳು ಪಂಚಾಯತ್‌ಗಳ ಮೂಲಕ ಜಾರಿಯಾಗುವುದು ಸ್ವಾಗತಾರ್ಹ. ಆದರೆ ಪಂಚಾಯತುಗಳು ಸರಿಯಾಗಿ ನಡೆಯದ ಹಾಗೂ ಶ್ರೀಮಂತ ರೈತರ, ಜಮೀನ್ದಾರರ, ಜೋತೆದಾರರ ಪ್ರತಿನಿಧಿಗಳಿರುವಲ್ಲಿ ಇದರಿಂದ ಗ್ರಾಮೀಣ ಜನತೆಗೆ ಪ್ರಯೋಜನವಾಗುವುದಿಲ್ಲ. ಇಂತಹ ಸಂದರ್ಭಗಳಲ್ಲಿ ರಣವೀರ ಸೇನೆಯ ಪೋಷಕರಿಗೆ ಪ್ರಯೋಜನ ಸಿಗುತ್ತದೆ. ಸೌಲಭ್ಯಗಳು ಗ್ರಾಮೀಣ ಜನತೆಗೆ ತಲುಪುವಲ್ಲಿ ಭೂಸುಧಾರಣೆಗಳ ಮಹತ್ವವನ್ನು ಎಷ್ಟೋ ಸಮಯದಿಂದ ಒತ್ತಿ ಹೇಳಲಾಗುತ್ತಿದ್ದರೂ ಯಾವ ಹಣಕಾಸು ಮಂತ್ರಿಯೂ ಈ ಬಗ್ಗೆ ಹೇಳಿರಲಿಲ್ಲ. ಈಗಿನ ಮಂತ್ರಿಯೂ ಹೇಳಿಲ್ಲ" ಎಂದು ಡಾ. ಬಾಗ್ಚಿ ಖೇದ ವ್ಯಕ್ತಪಡಿಸಿದ್ದಾರೆ.

"ಈ ಬಜೆಟ್ ಹಣದುಬ್ಬರಕಾರಿ. ಆರ್ಥಿಕದ ಬೆಳವಣಿಗೆಯೊಂದಿಗೆ ಹಣದುಬ್ಬರ ಬಂದರೆ ತೊಂದರೆಯೇನಿಲ್ಲ. ಜನಗಳಿಗೆ ರಕ್ಷಣೆ ಒದಗಿಸುವುದಾದರೆ ಹಣದುಬ್ಬರದ ಬಗ್ಗೆ ನನಗೆ ಅಭ್ಯಂತರವೇನಿಲ್ಲ. ಆದರೆ ಇಲ್ಲಿ ಅಂತಹ ಸಂಕೇತಗಳೇನೂ ಇಲ್ಲ" ಎನ್ನುತ್ತಾ ಪ್ರೊ. ಬಾಗ್ಚಿ ಅವರು ಶೋಚನೀಯ ಆರ್ಥಿಕ ಸನ್ನಿವೇಶ ಹಾಗೂ ಎರಡು ಮೂಲಭೂತ ಕೊರತೆಗಳನ್ನು ಎದುರಿಸುವ ಬಗ್ಗೆ ಸರ್ಕಾರದ ನಿರ್ಲಕ್ಷ್ಯ ಈ ಬಜೆಟ್‌ನ ಪ್ರಮುಖ ಕೊರತೆಗಳು ಎಂದು ಹೇಳಿದ್ದಾರೆ.

(ಕೃಪೆ: ಗಣಶಕ್ತಿ ಆನ್‌ಲೈನ್)

ಮೂರನೇ ಪರ್ಯಾಯ ಕಟ್ಟಲು ಒರಿಸ್ಸಾ ರ್ಯಾಲಿಯ ಕರೆ

ಸಿಪಿಐ(ಎಂ)ನ ಒರಿಸ್ಸಾ ಘಟಕ ಎಡ, ಜಾತ್ಯಾತೀತ ಮತ್ತು ಪ್ರಜಾಪ್ರಭುತ್ವವಾದೀ ಶಕ್ತಿಗಳ ಆಧಾರದಲ್ಲಿ ರಾಜ್ಯದಲ್ಲಿ ಒಂದು ಮೂರನೇ ಪರ್ಯಾಯವನ್ನು ಕಟ್ಟಿ ಕೇಂದ್ರದ ಬಿಜೆಪಿ ನೇತೃತ್ವದ ಸರಕಾರ ಹಾಗೂ ರಾಜ್ಯದಲ್ಲಿ ಕಾಂಗ್ರೆಸ್ ಸರಕಾರದ ದುರಾಡಳಿತಗಳನ್ನು ಕೊನೆಗೊಳಿಸಬೇಕು ಎಂದು ಕರೆ ನೀಡಿದೆ. ಭುವನೇಶ್ವರದಲ್ಲಿ ಮಾರ್ಚ್ 1 ರಂದು ನಡೆದ ರಾಜ್ಯಮಟ್ಟದ ರ್ಯಾಲಿಯಲ್ಲಿ ಈ ಕರೆ ನೀಡಲಾಯಿತು. ಒಂದು ವರ್ಣರಂಜಿತ ಬೃಹತ್ ಮೆರವಣಿಗೆಯ ನಂತರ ಈ ರ್ಯಾಲಿ ನಡೆಯಿತು. ಹಿರಿಯ ಸಿಪಿಐ(ಎಂ) ಮುಖಂಡ ಶಿವಾಜಿ ಪಟ್ನಾಯಕ್ ಅಧ್ಯಕ್ಷತೆ ವಹಿಸಿದ್ದರು.

ರ್ಯಾಲಿಯನ್ನುದ್ದೇಶಿಸಿ ಮಾತನಾಡುತ್ತಾ ಸಿಪಿಐ(ಎಂ) ಪೊಲಿಟ್‌ಬ್ಯೂರೋ ಸದಸ್ಯರಾದ ಪ್ರಕಾಶ್ ಕಾರಟ್‌ರವರು ಕೇಂದ್ರ ಸರ್ಕಾರದ ಜನ-ವಿರೋಧಿ ನೀತಿಗಳನ್ನು ತರಾಟೆಗೆ ತೆಗೆದುಕೊಂಡರು. ವಾಜಪೇಯಿ ಸರಕಾರ ದೇಶವನ್ನು ಆಳುವ ಬದಲು, ತನ್ನ ಆಳ್ವಿಕೆಯನ್ನು ಉಳಿಸಿಕೊಳ್ಳುವುದರಲ್ಲೇ ಮಗ್ನವಾಗಿದೆ. ರಕ್ಷಣಾ ಮಂತ್ರಿಗಳು ಸಮಿಶ್ರ ಸರಕಾರದ ಉಳಿವನ್ನಷ್ಟೇ ನೋಡಿಕೊಳ್ಳುವ ಮಟ್ಟಕ್ಕಿಳಿದಿದ್ದಾರೆ - ಇದಕ್ಕಾಗಿ ಶ್ರೀಮತಿ ಜಯಲಲಿತಾರವರಿಗೆ ಭಾರೀ ರಿಯಾಯ್ತಿಗಳನ್ನು ನೀಡಿ ಭ್ರಷ್ಟಾಚಾರದೊಂದಿಗೆ ರಾಜಿ ಮಾಡಿಕೊಳ್ಳಲೂ ಅವರು ಹೇಸುತ್ತಿಲ್ಲ.

ಬಿಜೆಪಿ ದೇಶದ ಜಾತ್ಯಾತೀತ ಹಂದರಕ್ಕೆ ಒಡ್ಡಿರುವ ಅಪಾಯವನ್ನು ಅರಿಯಬೇಕೆಂದು ಮನವಿ ಮಾಡಿದ ಪ್ರಕಾಶ್ ಕಾರಟ್‌ರವರು ಸ್ಟೈನ್ಸ್ ಮತ್ತು ಅವರ ಮಕ್ಕಳ ಹತ್ಯೆಯ ಬಗ್ಗೆ ನ್ಯಾಯಾಂಗ ತನಿಖೆಯ ಉದ್ದೇಶ ತನಿಖೆಯನ್ನು ವಿಳಂಬಗೊಳಿಸುವುದು ಎಂದರು. ಪೋಲೀಸರಿಗೆ ನಿಜವಾಗಿಯೂ ಪ್ರಮುಖ ಅಪರಾಧಿಯನ್ನು ಹಿಡಿಯ ಬೇಕೆಂದಿದ್ದರೆ ನಾಗಪುರದಲ್ಲಿ ಆರ್.ಎಸ್.ಎಸ್. ಮುಖ್ಯ ಕಛೇರಿಗೆ ಧಾವಿಸಬೇಕು ಎಂದರು.

ವಾಜಪೇಯಿ ಸರಕಾರ ಹೇಗೆ ಸ್ವದೇಶಿ ಮಾತನ್ನು ಬಿಟ್ಟು ಬಹುರಾಷ್ಟ್ರೀಯ ಕಂಪನಿಗಳಿಗೆ ಭಾರೀ ರಿಯಾಯ್ತಿಗಳನ್ನು ನೀಡಿದೆ ಎಂದೂ ಬಯಲಿಗೆಳೆದರು. ಸಿಗರೇಟ್ ಉತ್ಪಾದಿಸಲೂ ವಿದೇಶಿ ಕಂಪನಿಗಳನ್ನೇಕೆ ಆಹ್ವಾನಿಸಬೇಕು? ಈ ಬಜೆಟ್ ಹೇಗೆ ಸಿರಿವಂತರ ಮೇಲೆ ಕಡಿಮೆ ಭಾರ ಹಾಕಿ ಮಧ್ಯಮ ವರ್ಗ ಮತ್ತು ಬಡ ಜನರ ಜೇಬಿಗೆ ಕೈ ಹಾಕಿದೆ ಎಂದೂ ಅವರು ವಿವರಿಸಿದರು. ತಮ್ಮ ಜೀವ ಮತ್ತು ಜೀವನ ಮಟ್ಟದ ರಕ್ಷಣೆಗೆ ಜನಗಳು ಡಿಸೆಂಬರ್ 11 ರ ಸಾರ್ವತ್ರಿಕ ಮುಷ್ಕರದ ಹುರುಪನ್ನು ಮುಂದೊಯ್ಯಬೇಕು ಎಂದು ಕರೆ ನೀಡಿದರು. ಬಿಹಾರ ಸರಕಾರದ ವಜಾವನ್ನು ಖಂಡಿಸುತ್ತಾ ಈ ಮಸೂದೆ ರಾಜ್ಯ ಸಭೆಯಲ್ಲಿ ಸೋತು ಆ ಸರಕಾರ ಮತ್ತೆ ಬರುತ್ತದೆ ಎಂದು ಭವಿಷ್ಯ ನೀಡಿದರು.

ಒರಿಸ್ಸಾದ ಬಗ್ಗೆ ಮಾತನಾಡುತ್ತಾ ಹೊಸ ಮುಖ್ಯಮಂತ್ರಿಗಳ ನೇಮಕ ಅದೇ ಕಂಪನಿಗೆ ಒಬ್ಬ ಹೊಸ ಡೈರೆಕ್ಟರ್‌ನ ನೇಮಕವಷ್ಟೇ ಎಂದು ಪ್ರಕಾಶ್ ಕಾರಟ್ ಗೇಲಿಯಾಡಿದರು. ಕಾಂಗ್ರೆಸ್ ಮತ್ತು ಬಿಜೆಪಿಯ ದುರಾಡಳಿತವನ್ನು ಕೊನೆಗೊಳಿಸಲು ಎಡ, ಜಾತ್ಯಾತೀತ, ಪ್ರಜಾಪ್ರಭುತ್ವವಾದಿ ಶಕ್ತಿಗಳ ಮೂರನೇ ಪರ್ಯಾಯವನ್ನು ಕಟ್ಟಬೇಕೆಂದು ಅವರು ಮನವಿ ಮಾಡಿದರು.

ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಜನಾರ್ಧನ ಪತಿಯವರು ಮಾತನಾಡುತ್ತಾ ಬಿಜೆಪಿ-ಬಿಜೆಡಿ ಕೂಟ ಹೇಗೆ ಒರಿಸ್ಸಾದ ಹಿತಾಸಕ್ತಿಗಳಿಗೆ ವಿರುದ್ಧವಾಗಿ ವರ್ತಿಸುತ್ತಿದೆ ಎಂಬುದಕ್ಕೆ ರೈಲ್ವೆ ಬಜೆಟ್ಟಿನ ಉದಾಹರಣೆ ನೀಡಿದರು. ಉದಾರೀಕರಣದ ಯುಗದಲ್ಲಿ ಹೇಗೆ ಒರಿಸ್ಸಾದ ಉದ್ದಿಮೆಗಳ ನಾಶವಾಗುತ್ತಿದೆ ಎಂದೂ ವಿವರಿಸಿದರು.

ಶಿವಾಜಿ ಪಟ್ನಾಯಕ್ ರೂರ್ಕೆಲಾದ ಉಕ್ಕು ಸ್ಥಾವರ ಹಾಗೂ ನಾಲ್ಕೋದ ಖಾಸಗೀಕರಣದ ಪ್ರಯತ್ನಗಳನ್ನು ಪ್ರತಿರೋಧಿಸಬೇಕು, ಹೊಸ ಮುಖ್ಯಮಂತ್ರಿಗಳು ಮಹಿಳೆಯರ ಘನತೆಯನ್ನು ರಕ್ಷಿಸಿ ನ್ಯಾಯ ದೊರಕಿಸಿಕೊಳ್ಳಬೇಕು ಎಂದರು.

(ಐಎನ್‌ಎಸ್)

ಜಹನಾಬಾದಿನಲ್ಲಿ ಮತ್ತೆ ಹತ್ಯೆಗಳು

ಮಾರ್ಚ್ 2 ರಂದು ಜಹನಾಬಾದ್ ಇನ್ನೂ ನಾಲ್ಕು ಹತ್ಯೆಗಳು ನಡೆದಿವೆ. ಇದು ರಾಷ್ಟ್ರಪತಿ ಆಳ್ವಿಕೆ ಹೇರಿದ ನಂತರ ನಡೆದಿರುವ ಎರಡನೇ ಇಂತಹ ಘಟನೆ. ಈ ಬಾರಿ ಹತ್ಯೆಗೊಳಗಾದವರು ಮೇಲ್ಜಾತಿ ಭೂಮಿಹಾರರು, ರಣವೀರ ಸೇನೆಯ ಕಾರ್ಯಕರ್ತರೆಂದು ಹೇಳಲಾಗಿದೆ. ಉಗ್ರಗಾಮಿ ಪಿ.ಡಬ್ಲ್ಯು.ಜಿ.ಯವರು ಈ ನಾಲ್ವರನ್ನು ಮನೆಗಳಿಂದ ಎಳೆದುಕೊಂಡು ಹೋಗಿ ಹತ್ಯೆ ಮಾಡಿರುವುದಾಗಿ ವರದಿಯಾಗಿದೆ. ಈ ಹಿಂದೆ ನಡೆದಿರುವ ದಲಿತರ ಕಗ್ಗೊಲೆಗೆ ಇದು ಪ್ರತಿಕ್ರಿಯೆ ಎಂದು ಹೇಳಲಾಗಿದೆ.

ಈ ಹತ್ಯಾಕಾಂಡವನ್ನು ಎಲ್ಲಾ ಪಕ್ಷಗಳು ಖಂಡಿಸಿವೆ. ರಾಷ್ಟ್ರಪತಿ ಆಳ್ವಿಕೆಯ ಹೇರಿಕೆ ಬಿಹಾರದ ಈ ಸಮಸ್ಯೆಗೆ ಮದ್ದಲ್ಲ ಎಂದು ಸಿಪಿಐ(ಎಂ)ನ ನಿಲುವು ಇದರಿಂದ ಸಾಬೀತಾಗಿದೆ. ಆದರೆ ಬಿಜೆಪಿ ಮತ್ತು ಸಮತಾ ಪಕ್ಷ ಇದು ರಾಷ್ಟ್ರಪತಿ ಆಳ್ವಿಕೆಯ ಹೆಸರುಗೆಡಿಸುವ ಪಿತೂರಿ ಎಂದಿವೆ. ಹದಿನೈದು ದಿನಗಳಲ್ಲಿ ಎರಡು ಬಾರಿ ದಲಿತರ ಹತ್ಯಾಕಾಂಡವನ್ನು ಈ ಪಕ್ಷಗಳನ್ನು ಬೆಂಬಲಿಸುವ ರಣವೀರ ಸೇನೆ ನಡೆಸಿದಾಗ ಅದು ಪಿತೂರಿಯೆಂಬ ಆರ್.ಜೆ.ಡಿ.-ಸಮಾಜವಾದಿ ಪಕ್ಷದ ಆಪಾದನೆಯನ್ನು ತಳ್ಳಿಹಾಕಿದ ಪಕ್ಷಗಳಿವು ಎಂಬುದನ್ನು ಇಲ್ಲಿ ನೆನಪಿಸಿಕೊಳ್ಳಬಹುದು.

ಈ ನಡುವೆ ರಾಜ್ಯಸಭೆಯಲ್ಲಿ ರಾಷ್ಟ್ರಪತಿ ಆಳ್ವಿಕೆಯ ನಿರ್ಣಯಕ್ಕೆ ಸೋಲು ಖಚಿತವೆಂದು ಅರಿತಿರುವ ಬಿಜೆಪಿ ಅದನ್ನು ತಪ್ಪಿಸಲು ಹೆಣಗುತ್ತಿದೆ. ಕಾಂಗ್ರೆಸ್(ಐ) ಗೆ ಕಳಕಳಿಯ ಮನವಿಯನ್ನು ಮಾಡಿದೆ.

ಶಿರಸಿಯಲ್ಲಿ ವಿಮಾ ಖಾಸಗೀಕರಣ ವಿರೋಧಿಸಿ ರ್ಯಾಲಿ

ಪೇಟೆಂಟ್ ತಿದ್ದುಪಡಿ ಮಸೂದೆ ಮತ್ತು ವಿಮಾನಿಯಂತ್ರಣ ಪ್ರಾಧಿಕಾರ ಮಸೂದೆಯನ್ನು ಹಿಂತೆಗೆದುಕೊಳ್ಳಲು ಆಗ್ರಹಿಸಿ ಶಿರಸಿಯಲ್ಲಿ ಇಂದು ವಿದ್ಯಾರ್ಥಿ-ಯುವಜನ-ರೈತ ಕಾರ್ಮಿಕರು, ಮಹಿಳೆಯರು ಸೇರಿ ಬೃಹತ್ ರ್ಯಾಲಿ ನಡೆಸಿದರು. ಜೀವವಿಮಾ ನಿಗಮದ ಶಿರಸಿ ಶಾಖಾ ಕಚೇರಿಯಿಂದ ಪ್ರಾರಂಭವಾದ ಮೆರವಣಿಗೆ ಶಿರಸಿಯ ಮುಖ್ಯ ಬೀದಿಗಳನ್ನು ಸುತ್ತುವರೆದು ಅಂಚೆ ಸರ್ಕಲಗೆ ಬಂದು ಬಹಿರಂಗ ಸಭೆಯಾಗಿ ಮಾರ್ಪಟ್ಟಿತು.

ಸಾಮೂಹಿಕ ಸಂಘಟನೆಗಳ ರಾಷ್ಟ್ರೀಯ ವೇದಿಕೆ ಕರೆಯ ಮೇರೆಗೆ ಈ ಪ್ರಚಾರ ಪ್ರಕ್ಷೋಭೆ ರ್ಯಾಲಿ ನಡೆಯಿತು. ಇಂದು ದೇಶಾದ್ಯಂತ ಅಖಿಲ ಭಾರತ ಪ್ರತಿಭಟನಾ ದಿನ ಆಚರಿಸಲಾಯಿತು.

ಕೇಂದ್ರದ ಬಿಜೆಪಿ ಸರ್ಕಾರ ಪಡಿತರ ಅಕ್ಕಿ ಗೋಧಿ ಸಕ್ಕರೆ ಹಾಗೂ ಅಡಿಗೆ ಅನಿಲದ ಬೆಲೆಗಳನ್ನು ವಿಪರೀತವಾಗಿ ಏರಿಸಿದೆ.

ಜೀವನಾವಶ್ಯಕ ವಸ್ತುಗಳ ವಿಪರೀತ ಬೆಲೆ ಏರಿಕೆ ಸರ್ಕಾರವು ದೊಡ್ಡವ್ಯಾಪಾರಿ ವರ್ಗಕ್ಕೆ ಸರ್ವರೀತಿಯ ಲಾಭ ದೊರಕುವಂತೆ ನೀತಿಗಳನ್ನು ಅನುಸರಿಸುತ್ತಿದೆ ಎಂದು ಸ್ಪಷ್ಟಗೊಳಿಸಿದೆ. ಐ.ಎಂ.ಎಫ್. ವಿಶ್ವಬ್ಯಾಂಕು ಮತ್ತು ವಿಶ್ವವ್ಯಾಪಾರ ಸಂಘಟನೆಗಳ ಒತ್ತಡಗಳಿಗೆ ಶರಣಾಗಿ ವಿಮಾ ಪ್ರಾಧಿಕಾರ ಮಸೂದೆ ಹಾಗೂ ಪೇಟೆಂಟ್ ತಿದ್ದುಪಡಿ ಮಸೂದೆಗಳನ್ನು ಜಾರಿಗೊಳಿಸುವ ಮೂಲಕ ದೇಶದ ಸಾರ್ವಭೌಮತೆಯನ್ನೇ ಬಲಿಕೊಡುವ ಕಾರ್ಯವೆಸಗುತ್ತಿದೆ. ಕಾರ್ಮಿಕ ವರ್ಗವು ರೈತ ವಿದ್ಯಾರ್ಥಿ ಯುವಜನರ ಸಖ್ಯತೆಯೊಂದಿಗೆ ಸರ್ಕಾರದ ವಿನಾಶಕಾರಿ ನೀತಿಯ ವಿರುದ್ಧ ಹೋರಾಟ ನಡೆಸಬೇಕೆಂದು ಬಹಿರಂಗ ಸಭೆಯನ್ನು ಉದ್ದೇಶಿಸಿ ಮಾತನಾಡಿದ ಎನ್.ಪಿ.ಎಂ.ಓ. ಸಂಚಾಲಕ ಸಿ.ಆರ್. ಶಾನಭಾಗ ನುಡಿದರು.

ವಿಮಾ ನೌಕರರ ಸಂಘದ ಎನ್.ವಿ.ಭಟ್ ವಿದ್ಯಾಭಟ್, ಜಾದವ ಗಡ್ಕರ, ವಾಮನ ಎಸ್.ಎಫ್.ಐ.ನ ಯುವರಾಜ ಕಂಬಾಳಿಮಠ್, ಈರೇಶ, ಬಾಲಕೃಷ್ಣ ಡಿ.ವೈ.ಎಫ್.ಐ.ನ ಬಜಂತ್ರಿ, ಕೃಷ್ಣ ಮುಜಮ್ಮಿಲ್ ಜನವಾದಿ ಮಹಿಳಾ ಸಂಘಟನೆಯ ಶೈಲಾಭಟ್ ಪ್ರತಿಭಾ, ಪ್ರಾಂತ ರೈತ ಸಂಘದ ಬಂಗಾರೇಶ್ವರ ಗೌಡ ಮೆರವಣಿಗೆಯ ನೇತೃತ್ವ ವಹಿಸಿದ್ದರು.

ಜಿಲ್ಲೆಯ ಕುಮಟಾ ಹೊನ್ನಾವರ, ಭಟ್ಕಳ, ದಾಂಡೇಲಿ, ಕಾರವಾರಗಳಲ್ಲಿಯೂ ರ್ಯಾಲಿ ನಡೆದ ವರದಿಗಳಿವೆ.

ಮುಳವಾಡ ಏತ ನೀರಾವರಿ ಯೋಜನೆ ಪೂರ್ಣಗೊಳಿಸಿ ರೈತ ಸಂಘದ ಒತ್ತಾಯ

ಬಿಜಾಪುರ: ಪೆಬ್ರವರಿ 15 ರಂದು ಬಿಜಾಪುರ ಪ್ರಾಂತ ರೈತ ಸಂಘದ 7ನೇ ತಾಲೂಕು ಸಮ್ಮೇಳನ ಎಪಿಎಮ್‌ಸಿ ಯಾರ್ಡ್‌ನಲ್ಲಿ ಯಶಸ್ವಿಯಾಗಿ ನಡೆಯಿತು. ಸಮ್ಮೇಳನವು ಸಾವಿರಾರು ಎಕರೆ ಜಮೀನಿಗೆ ನೀರುಣಿಸುವ ಮುಳವಾಳ ಏತ ನೀರಾವರಿ ಯೋಜನೆಯನ್ನು ಶೀಘ್ರವಾಗಿ ಪೂರ್ಣಗೊಳಿಸುವಂತೆ ಒಮ್ಮತದಿಂದ ನಿರ್ಣಯ ಅಂಗೀಕರಿಸಿದೆ.

ಸಮ್ಮೇಳನದ ಉದ್ಘಾಟನೆಯನ್ನು ಜಿಲ್ಲಾ ರೈತ ಸಂಘದ ಅಧ್ಯಕ್ಷ ಭಿಮಸಿ ಕಲಾದಗಿ ನೇರವೇರಿಸಿ ರೈತ ಸಮಸ್ಯೆಗಳನ್ನು ಹಾಗೂ ಜಿಲ್ಲಾ ನೀರಾವರಿಯೋಜನೆಗಳನ್ನು ಪೂರ್ಣಗೊಳಿಸುವಂತೆ ಆಗ್ರಹಿಸಿದರು. ಮುಖ್ಯ ಅತಿಥಿಗಳಾಗಿ ಜಿಲ್ಲಾ ಕಾರ್ಯದರ್ಶಿ ಅಣ್ಣಾರಾಯ ಈಳಗೇರ, ಪೌರ ಕಾರ್ಮಿಕರ ಸಂಘದ ವಿ.ಎಮ್. ಸೊನ್ನದ ಜೆ.ಎಂ.ಎಸ್.ನ ಸುರೇಖಾ ರಜ ಪೂತ, ಡಿ.ವೈ.ಎಫ್.ಐ.ನ ಲಿಂಗರಾಜ ಬೀದರ ಕುಂದಿ ಪಾಲ್ಗೊಂಡು ಮಾತನಾಡಿದರು.

ಬೆಳೆ ವಿಮಾ ಯೋಜನೆ ಹಣ ಕೂಡಲೇ ಬಿಡುಗಡೆ ಮಾಡಬೇಕು. ಆಲಮಟ್ಟಿ ಆಣೆಕಟ್ಟು ಕೆಲಸವನ್ನು 2000 ಇಸ್ವಿಯೊಳಗೆ ಪೂರ್ಣಗೊಳಿಸಬೇಕು. ಎಲ್ಲಾ ಬಡವರಿಗೆ ಹಸಿರು ಕಾರ್ಡ್ ನೀಡ ಬೇಕು. ಎಂಬ ಇತ್ಯಾದಿ ನಿರ್ಣಯಗಳನ್ನು ಸಮ್ಮೇಳನವು ಅಂಗೀಕರಿಸಿತು. ಸಮ್ಮೇಳನದ ನಂತರ ನಗರ ಮುಖ್ಯ ಬೀದಿಗಳಲ್ಲಿ ಬೃಹತ್ ಮೆರವಣಿಗೆ ನಡೆಸಿ ತಹಸಿಲ್ದಾರರಿಗೆ ಮನವಿ ಸಲ್ಲಿಸಲಾಯಿತು.

ನೂತನ ತಾಲೂಕು ಸಮಿತಿ:

ಅಧ್ಯಕ್ಷರು- ರಾಜಶೇಖರ ಪಾವೀಲ. ಉಪಾಧ್ಯಕ್ಷರು- ಚಂದ್ರ ಶೇಖರ ಜನರೆಡ್ಡಿ, ಎಂ.ಬಿ. ತಡಲಗಿ ಸಾಬು ಮೂಲಿಮನಿ, ರಾಚಪ್ಪ ಹಡಪದ. ಪ್ರ. ಕಾರ್ಯದರ್ಶಿ ಡಿ.ಎಲ್. ರಾಠೋಡ, ಸಹ ಕಾರ್ಯದರ್ಶಿಗಳು ಚನ್ನ ಬಸಪ್ಪ, ದಿಂಡವಾರ ಸೋಮ್ಲು ರಾಠೋಡ, ಖಜಾಂಚಿ ಸೋಮಣ್ಣಾ ವಾಲೀಕಾರ

ಗುಡಿ ಬಂಡೆ ಪಂಚಾಯ್ತಿ ಅಧ್ಯಕ್ಷಸ್ಥಾನ ಸಿಪಿಐ(ಎಂ)ಗೆ

ಫೆಬ್ರವರಿ 24 ರಂದು ನಡೆದ ಗುಡಿ ಬಂಡೆ ಟೌನ್ ಪಂಚಾಯ್ತಿ ಚುನಾವಣೆಯಲ್ಲಿ ಸಿಪಿಐ(ಎಂ)ನ ಅಭ್ಯರ್ಥಿಯಾದ ಕಾಮ್ರೆಡ್ ಇಫ್ರಿತ್ ಅಬ್ಬಾ ಅಧ್ಯಕ್ಷಿಣಿಯಾಗಿ 8-2 ಮತಗಳಿಂದ ಆಯ್ಕೆಗೊಂಡರು ಉಪಾಧ್ಯಕ್ಷರಾಗಿ ವರಲಕ್ಷ್ಮಮ್ಮ ರವರು ಅವಿರೋಧವಾಗಿ ಆಯ್ಕೆಗೊಂಡರು.

ಇದೇ ಪ್ರಥಮ ಬಾರಿಗೆ ಗುಡಿಬಂಡೆ ಟಾನ್ ಪಂಚಾಯ್ತಿಯಲ್ಲಿ ಸಿಪಿಐ(ಎಂ) ಅಧ್ಯಕ್ಷ ಗಾದಿಯನ್ನು ಹಿಡಿದಂತಾಗಿದೆ. 11 ಸದಸ್ಯರ ಪೈಕಿ 4 ಜನತಾದಳ, 4 ಕಾಂಗ್ರೇಸ್, ಇಬ್ಬರು ಸಿಪಿಐ(ಎಂ) ಮತ್ತು ಒಂದು ಸ್ವತಂತ್ರ ಸದಸ್ಯರಿದ್ದು ಜನತಾದಳ ಮತ್ತು ಸ್ವತಂತ್ರ ಸದಸ್ಯರು ಹಾಗೂ ಶಾಸಕರಾದ ಜಿ.ವಿ.ಶ್ರೀರಾಮರೆಡ್ಡಿಯರ ಮತ ಸೇರಿ 8 ಮತಗಳು ಸಿಪಿಐ(ಎಂ) ಅಭ್ಯರ್ಥಿಗೆ ಬಂದವು. ಇಬ್ಬರು ಕಾಂಗ್ರೆಸ್ ಸದಸ್ಯರು ಗೈರು ಹಾಜರಿಯಿಂದ ಕಾಂಗ್ರೈ 2 ಮತ ಪಡೆಯಲು ಸಾಧ್ಯವಾಯಿತು. ಚುನಾವಣೆ ನಂತರ ಪ್ರಮುಖ ಬೀದಿಗಳಲ್ಲಿ ಹೊಸ ಅಧ್ಯಕ್ಷರು ಶಾಸಕ ಜಿ.ವಿ. ಶ್ರೀರಾಮರೆಡ್ಡಿ ಪಕ್ಷದ ಕಾರ್ಯದರ್ಶಿ ಬಾಬು ರೈತ ಮುಖಂಡ ಗಂಗಿರೆಡ್ಡಿ ಸೇರಿದಂತೆ ನೂರಾರು ಕಾರ್ಯಕರ್ತರು ಮೆರವಣಿಗೆ ನಡೆಸಿದರು.

ಪತ್ರಿಕಾಲಯದ ಮೇಲೆ ದಾಳಿ: ಸಿಪಿಐ(ಎಂ) ಖಂಡನೆ

ಶಿವಮೊಗ್ಗದ ಜನಪ್ರಿಯ ಪತ್ರಿಕೆಯಾದ ಕ್ರಾಂತಿ ದೀಪ ಕಾರ್ಯಲಯಕ್ಕೆ ಫೆಬ್ರವರಿ 23 ರ ಹಾಡು ಹಗಲಲ್ಲೆ ದಾಳಿ ಮಾಡಿದ ಬಿಜೆಪಿ ಕಾರ್ಯಕರ್ತರು ಸಂಪಾದಕರಾದ ಮಂಜುನಾಥ ವರದಿ ಗಾರರಾದ ಶೃಂಗೇಶ, ಶಿವ ಮೂರ್ತಿ. ವಿಚಾರವಾದಿ ಹಾಗೂ ಪ್ರಗತಿ ಪ್ರಿಂಟರ್ಸ್ ಮಾಲಿಕರಾದ ನಾರಾಯಣರಾವ್‌ರ ಮೇಲೆ ಹಲ್ಲೆಮಾಡಿರುವುದು ಪ್ಯಾಸಿಸ್ಟ್ ಕೃತ್ಯವೆಂದು ಸಿಪಿಐ(ಎಂ) ಜಿಲ್ಲಾ ಸಮಿತಿ ಖಂಡಿಸಿದೆ. ಇದು ಪೂರ್ವಯೋಜಿತ ಹಲ್ಲೆ ಎಂದಿರುವ ಸಿಪಿಐ(ಎಂ) ಸರ್ಕಾರ ಪತ್ರಿಕಾಲಯ ಅನುಭವಿಸಿರುವ ನಷ್ಟ ತುಂಬಿಕೊಡಬೇಕು ಹಾಗೂ ತಪ್ಪಿತಸ್ಥರನ್ನು ಬಂಧಿಸಿ ಶಿಕ್ಷೆ ವಿದಿಸಬೇಕು. ಎಂದು ಒತ್ತಾಯಿಸಿ ಸರ್ವಪಕ್ಷಗಳು ಹಾಗೂ ಸಂಘಸಂಸ್ಥೆಗಳು ನೀಡಿರುವ ಶಿವಮೊಗ್ಗ ಬಂದ್‌ಗೆ ಸಿಪಿಐ(ಎಂ) ತನ್ನ ಬೆಂಬಲ ವ್ಯಕ್ತ ಪಡಿಸಿದೆ.

ಅಧ್ಯಾಪಕರ ನೇಮಕಕ್ಕೆ ಒತ್ತಾಯಿಸಿ ಐಟಿಐ ವಿದ್ಯಾರ್ಥಿಗಳ ಮತ ಪ್ರದರ್ಶನ

ಅಧ್ಯಾಪಕರ ಕೊರತೆ ನೀಗಿಸಲು ಗ್ರಂಥಾಲಯ ಕ್ಯಾಂಟಿನ್ ಮುಂತಾದ ಸಮಸ್ಯೆಗಳನ್ನು ಓದಗಿಸಲು ಒತ್ತಾಯಿಸಿ ದಕ್ಷಿಣ ಕನ್ನಡ -ಉಡುಪಿ ಜಿಲ್ಲಾ ಎಸ್.ಎಫ್.ಐ. ಮತ್ತು ಐ.ಟಿ.ಐ. ವಿದ್ಯಾರ್ಥಿಗಳು ಜಂಟಿಯಾಗಿ ಫೆಬ್ರವರಿ 20 ರಂದು ಮಂಗಳೂರಿನ ಜಿಲ್ಲಾಧಿಕಾರಿ ಕಛೇರಿ ಮುಂದೆ ಮತ ಪ್ರದರ್ಶನ ನಡೆಸಿದರು.

ಎಸ್.ಎಫ್.ಐ. ಕಛೇರಿಯಿಂದ ಪ್ರಾರಂಭವಾದ ಮೆರವಣಿಗೆಯಲ್ಲಿ ನೂರಾರು ವಿದ್ಯಾರ್ಥಿಗಳು ಭಾಗವಹಿಸಿದ್ದರು. ನಂತರ ಮಾತನಾಡಿದ ಎಸ್.ಎಫ್.ಐ.ನ ಸುನೀಲ್ ಕುಮಾರ್ ಬಜಾಲ್ ರಾಜ್ಯಾದ್ಯಂತ ಐಟಿಐ ವಿದ್ಯಾರ್ಥಿಗಳು ಅಧ್ಯಾಪಕರ ಕೊರತೆಯಿಂದ ತೀರಾ ಕಂಗಾಲಾಗಿದ್ದಾರೆ. ಇನ್ನು 2-3 ತಿಂಗಳಲ್ಲಿ ಅಂತಿಮ ಪರಿಕ್ಷೆ ಇದ್ದು ವಿದ್ಯಾರ್ಥಿಗಳಿಗೆ ತೀರಾ ತೊಂದರೆ ಉಂಟಾಗಿದೆ ಕೂಡಲೇ ಸರ್ಕಾರ ಇತ್ತ ಗಮನ ಹರಿಸ ಬೇಕೆಂದರು. ಐಟಿಐ ವಿದ್ಯಾರ್ಥಿ ಸಂಘದ ಕಾರ್ಯದರ್ಶಿ ಗೌತಮ್ ಮಾರ್ಚ್ ಮೊದಲ ವಾರದಲ್ಲಿ ಐಟಿಐ ವಿದ್ಯಾರ್ಥಿಗಳ ಸಮಸ್ಯೆ ಬಗೆ ಗಮನ್ನ ಹರಿಸದಿದ್ದರೆ ಜಿಲ್ಲಾದ್ಯಂತ ವಿದ್ಯಾರ್ಥಿಗಳ ಹೋರಾಟ ನಡೆಸುವುದು ಅನಿವಾರ್ಯ ಎಂದರು. ಹರಿಪ್ರಸಾದ್ ರೈ ಹಾಗೂ ಡಿ.ವೈ.ಎಫ್.ಐ.ನ ಯಾದವ ಶೆಟ್ಟಿ ಮಾತನಾಡಿದರು.

ಮೆರವಣಿಗೆಯ ನೇತೃತ್ವವನ್ನು ಜಯರಾಮ್ ನಾಯಕ್, ಹೇಮಲತಾ, ವಿನಯ ನೇತ್ರ, ಪ್ರಕಾಶ್, ಅಶ್ರಫ್ ಜೀವನ್‌ದಾಸ್ ಮೊದಲಾದವರು ವಹಿಸಿದ್ದರು

ಬೆಲೆ ಏರಿಕೆ ವಿರುದ್ಧ ಮೆರವಣಿಗೆ

ಶಾಹಾಪೂರ: ಕೇಂದ್ರ ಸರ್ಕಾರ ಆಯ-ವ್ಯಯ ಮಂಡನೆಗೆ ಮುಂಚಿತವಾಗಿ ಪಡಿತರ ವಸ್ತುಗಳ ಬೆಲೆ ಏರಿಸಿರುವುದನ್ನು ವಿರೋಧಿಸಿ ಸಿಪಿಐ(ಎಂ) ತಾಲೂಕು ಸಮಿತಿ ನೇತೃತ್ವದಲ್ಲಿ ರೈತ ಯುವ ಜನರು ಮಹಿಳೆಯರು ಹಾಗೂ ವಿದ್ಯಾರ್ಥಿಗಳು ಸೇರಿದಂತೆ ನೂರಾರು ಜನರು ಫೆಬ್ರವರಿ 9 ರಂದು ಸಿಪಿಐ(ಎಂ) ಕಛೇರಿಯಿಂದ ತಹಸೀಲ್ದಾರ ಕಛೇರಿಗೆ ಮೆರವಣಿಗೆ ನಡೆಸಿ ಮನವಿ ಸಲ್ಲಿಸಿದರು.

ಮೆರವಣಿಗೆಯ ಮುಂದೆ ದವಲ್ ಸಾಬ್ ನೆಧಾಫ್, ಆನೆಗುಂದಿ, ಮುಣ್ಣ ಕರಿಗುಡ್ಡ, ಯಲ್ಲಪ ಬಜಂತ್ರಿ ಮುಂತಾದವರು ಇದ್ದರು.

ಅಂಗನವಾಡಿ ನೌಕರರ ಪ್ರತಿಭಟನೆ

ಪುಟ 3 ರಿಂದ

ಕೋಲಾರ ಲಾಠಿಛಾರ್ಜ್ : ಐದುನೂರಕ್ಕೂ ಹೆಚ್ಚು ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿರಿಯರು ಜಿಲ್ಲಾ ಪಂಚಾಯತ್ ಕಛೇರಿ ವರಗೆ ಮೆರವಣಿಗೆ ನಡೆಸಿದರು. ತಮ್ಮ ಬೇಡಿಕೆಗಳುಳ್ಳ ಮನವಿ ಸ್ವೀಕರಿಸಲು ಅಧಿಕಾರಿಗಳು ಬಾರದಿದ್ದಾಗ ಒಳ ಹೋಗಲು ಪ್ರಯತ್ನಿಸಿದ ಕಾರ್ಯಕರ್ತೆಯರ ಮೇಲೆ ಪೋಲೀಸರು ಲಾಠಿ ಛಾರ್ಜ್ ಮಾಡಿದರು. ಇದರಿಂದ ಇಬ್ಬರು ಗಾಯಗೊಂಡು ಆಸ್ಪತ್ರೆಗೆ ಸೇರಿಸಲಾಯಿತು.

ಸಂಘದ ಮುಖಂಡರುಗಳಾದ ಭಾಗ್ಯ ಲಕ್ಷ್ಮಿ, ನಾರಾಯಣಮ್ಮ, ಸುಶೀಲ ಈಶ್ವರಮ್ಮ, ನಾಗಪ್ಪ ಸಿದ್ಧಗಂಗಪ್ಪ ಮೊದಲಾದವರು ಭಾಗವಹಿಸಿ ಮಾತನಾಡಿದರು.

ಬೀದರ್: ಜಿಲ್ಲಾ ಪಂಚಾಯತ್ ಕಛೇರಿ ಮುಂದೆ ಪ್ರತಿಭಟನೆ ನಡೆಸಿದ ನೌಕರರು ತಮ್ಮ ಬೇಡಿಕೆಗಳತ್ತ ಗಮನ ಹರಿಸಿ ಕೂಡಲೇ ಪರಿಹಾರ ಘೋಷಿಸುವಂತೆ ಒತ್ತಾಯಿಸಿದರು. ಇದಕ್ಕೂ ಮೊದಲು ನಗರದ ಮುಖ್ಯ ಬೀದಿಯಲ್ಲಿ 500 ನೌಕರರು ಮೆರವಣಿಗೆ ನಡೆಸಿದರು. ಮೆರವಣಿಗೆಯಲ್ಲಿ ಸಂತೋಷಮ್ಮ, ಬಿಕುಲದೇವಿ ಮುಂತಾದವರು ನಾಯಕತ್ವ ವಹಿಸಿದ್ದರು.

ತುಮಕೂರು: ಜಿಲ್ಲಾ ಪಂಚಾಯತ್ ಕಛೇರಿ ಮುಂದೆ 500 ನೌಕರರು 1 ಘಂಟೆಗೂ ಹೆಚ್ಚು ಕಾಲ ಧರಣಿ ನಡೆಸಿದರು. ನಂತರ ಮುಖಂಡರು ಮಾತನಾಡಿ ಬೇಡಿಕೆ ಈಡೇರಿಸುವಂತೆ ಮನವಿ ಸಲ್ಲಿಸಿ ಬಂಧನಕ್ಕೊಳಗಾದರು. ಅದಕ್ಕೂ ಮೊದಲು ಸಂಘದ ಮುಖಂಡರಾದ ಕೆಂಪಮ್ಮ ಪಾರ್ವತಮ್ಮ ಪ್ರೇಮಾ ಅಲ್ಲಾಬಕಾಸ್ ಮುಜೀಬ್ ಮುಂತಾದವರ ನೇತೃತ್ವದಲ್ಲಿ ನಗರದಲ್ಲಿ ಮೆರವಣಿಗೆ ನಡೆಸಲಾಯಿತು.

ಕೊಪ್ಪಳ: ಹೊಸ ಜಿಲ್ಲೆಯಾಗಿ ರಚನೆಗೊಂಡು ಕಾರ್ಯ ನಿರ್ವಹಿಸುತ್ತಿರುವ ಕೊಪ್ಪಳ ಜಿಲ್ಲಾ ಪಂಚಾಯತ್ ಕಾರ್ಯಾಲಯದ ಮುಂದೆ 300 ಕ್ಕೂ ಹೆಚ್ಚು ನೌಕರರು ಧರಣಿ ನಡೆಸಿದರು. ಮಂಟನ ಗೌಡ, ದ್ವಾರಕ, ಯಮುನಮ್ಮ ಮುಂತಾದವರು ಮಾತನಾಡಿ ಮನವಿ ಸಲ್ಲಿಸಿ ನಂತರ ಬಂಧನಕ್ಕೊಳಗಾದರು.

ಬೆಂಗಳೂರು: ಮೈಸೂರು ಬ್ಯಾಂಕ್ ವೃತ್ತದಿಂದ ಮೆರವಣಿಗೆ ನಡೆಸಿದ ನೂರಾರು ಕಾರ್ಯಕರ್ತೆಯರು ಜಿಲ್ಲಾಧಿ ಕಚೇರಿ ಮುಂದೆ ಧರಣಿ ನಡೆಸಿದರು. ರಾಜ್ಯಾಧ್ಯಕ್ಷರಾದ ಎನ್. ಪ್ರಾಭಾವತಿ, ನಾಗಮಣಿ ಮೊದಲಾದವರು ಬೇಡಿಕೆಗಳ ಬಗ್ಗೆ ವಿವರಿಸಿ ಮನವಿ ಸಲ್ಲಿಸಿದರು.

ಬಳ್ಳಾರಿ: ನಾನೂರು ಐವತ್ತಕ್ಕೂ ಹೆಚ್ಚು ನೌಕರರು ಮೆರವಣಿಗೆ ಮುಖಾಂತರ ಜಿಲ್ಲಾ ಪಂಚಾಯತ್ ಕಛೇರಿ ಮುಂದೆ ಧರಣಿ ನಡೆಸಿದರು. ನಾಗರತ್ನ, ಮಂಜುಳ ಎನ್.ಟಿ. ಲಲಿತ. ಎಂ. ಸ್ವಾಮಿ ಮೊದಲಾದವರು ಮಾತನಾಡಿ ಮನವಿ ಸಲ್ಲಿಸಿ ಬಂಧನಕ್ಕೊಳಗಾದರು.

ಬಿಜಾಪುರ: ಬಾರಾ ಕಮಾನದಿಂದ ಹೊರಟ ಭಾರಿ ಮೆರವಣಿಗೆಯು ಜಿಲ್ಲಾಧಿಕಾರಿ ಮಹಿಳಾ ಮತ್ತು ಮಕ್ಕಳ ಕಲ್ಯಾಣಾಧಿಕಾರಿ ಜಿಲ್ಲಾ ಪಂಚಾಯತ್ ಅಧ್ಯಕ್ಷ ಮತ್ತು ಉಪಾಧ್ಯಕ್ಷರಿಗೆ ಮನವಿ ಸಲ್ಲಿಸಿ ತಮ್ಮ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿದರು.

ಧರಣಿಕಾರರನ್ನುದ್ದೇಶಿಸಿ ಅಣ್ಣಾರಾಯ ಈಳೀಗೇರ ಭೀಮಸಿಕಲಾದಗಿ ಮೊದಲಾದವರು ಮಾತನಾಡಿದರು. ಒಂದು ಸಾವಿರಕ್ಕೂ ಹೆಚ್ಚು ನೌಕರರಿದ್ದ ಮೆರವಣಿಗೆಯಲ್ಲಿ ಪುಷ್ಪಲತಾ ಕಳ್ಳಿ ಮಠ ದುರ್ಗಿಭಾಯಿ ಮುಂತಾದವರು ನೇತೃತ್ವ ವಹಿಸಿದ್ದರು.

ಕೃಷಿ ಸಬ್ಸಿಡಿ ಪ್ರತಿಭಟಿಸಿ ಬ್ರಸ್ಸೆಲ್ಸ್ ಗೆ 30 ಸಾವಿರ ಯುರೋಪಿಯನ್ ರೈತರ ಜಾಥಾ

30 ಸಾವಿರ ರೈತರು ಯುರೋಪಿನ ರಾಜಧಾನಿ ಎನ್ನಿಸಿಕೊಂಡಿರುವ ಬ್ರಸ್ಸೆಲ್ಸ್‌ನ್ನು ಒಂದು ದಿನದ ಕಾಲ ಸ್ತಬ್ದಗೊಳಿಸಿದರು. ಬೆಲ್ಜಿಯಂನ ರಾಜಧಾನಿ ಬ್ರಸ್ಸೆಲ್ಸ್ ಈಗ ಯುರೋಪಿ ಯನ್ ರಾಜಧಾನಿ. ಯುರೋಪಿಯನ್ ಕೂಟದ ಹೆಸರಲ್ಲಿ ಯುರೋಪಿನ ಎಲ್ಲಾ ದೇಶಗಳ ಬೂರ್ಜ್ವಾ ವರ್ಗ ದುಡಿಯುವ ಜನರ ವಿರುದ್ಧ ನಡೆಸುತ್ತಿರುವ ಪಿತೂರಿಗಳ ಕೇಂದ್ರ. ಈ ವಾರ ಇಂತಹುದೇ ಒಂದು ರೈತವಿರೋಧಿ ನೀತಿಯನ್ನು ಪ್ರತಿಭಟಿಸಲು ಇವರೆಲ್ಲಾ ಬ್ರಸ್ಸೆಲ್ಸ್‌ಗೆ ನುಗ್ಗಿ ಬಂದಿದ್ದರು. ಯುರೋಪಿನ ಎಲ್ಲಾ ದೇಶಗಳಿಂದ ಬಂದಿದ್ದರು. ಹತ್ತಿರದ ಫ್ರಾನ್ಸ್, ಇಟಲಿ, ಸ್ಪೈನ್‌ಗಳಿಂದ ದೊಡ್ಡ ಸಂಖ್ಯೆಯಲ್ಲಿ ಬಂದಿದ್ದರು.ಸಾಮಾನ್ಯ ಕೃಷಿ ನೀತಿಯ ಹೆಸರಲ್ಲಿ ರೈತರಿಗೆ ಸಬ್ಸಿಡಿಯನ್ನು ಹಂತಹಂತವಾಗಿ ಕಡಿಮೆ ಮಾಡುವ ಹುನ್ನಾರ ಬಯಲು ಮಾಡಲು ಅವರಲ್ಲಿ ಬಂದಿದ್ದರು. ಈಬಗ್ಗೆ ವಿವಿಧ ದೇಶಗಳ ಪ್ರತಿನಿಧಿಗಳು ನಡೆಸುವ ಚರ್ಚೆಯಲ್ಲಿ ರೈತರ ಹಿತಾಸಕ್ತಿ ಬಲಿಕೊಡಬೇಡಿ ಎಂದು ಎಚ್ಚರಿಸಲು ಬಂದಿದ್ದರು.ಪ್ರಸ್ತುತ ಯುರೋಪಿನ ಒಕ್ಕೂಟದ ಕೃಷಿ ಕಮೀಷನರ್ ಕೃಷಿ ವೆಚ್ಚವನ್ನು 30 ಶತಕೋಟಿ ಡಾಲರಿಗೆ ಸೀಮಿತಗೊಳಿಸುವ ಸಲಹೆ ಬಗ್ಗೆ ಚರ್ಚಿಸುತ್ತಿದ್ದಾರೆ. ಇದು ಪರೋಕ್ಷವಾಗಿ ಸಬ್ಸಿಡಿ ಕಡಿತ ಮಾಡುವ ಸಲಹೆ. 30ಸಾವಿರ ರೈತರ ಜಾಥ ಚಾರಿತ್ರಿಕ ಅಭೂತಪೂರ್ವ ರೈತರ ಪ್ರತಿಭಟನೆಯಾಗಿತ್ತು.



ಕೊಸೊವೊ ನಾಟೋದ ವಿಯೆಟ್ನಾಂ ಆದೀತು- ರಶ್ಯನ್ ಎಚ್ಚರಿಕೆ

ಕೊಸೊವೊ ಮೇಲೆ ದಾಳಿ ನಡೆಸಲು ನಾಟೋ ತಯಾರಿ ನಡೆಸುತ್ತಿರುವ ಬಗ್ಗೆ ರಶ್ಯನ್ ರಕ್ಷಣಾ ಮಂತ್ರಿ ಖಂಡಿಸಿ, ಹಾಗೇನೂ ಈ ದುಸ್ಸಾಹಸಕ್ಕೆ ನಾಟೋ ಪಡೆಗಳು ಇಳಿದರೆ ಅದು ಅವರ ವಿಯೇಟ್ನಾಂ ಆದೀತು ಎಂದು ಎಚ್ಚರಿಸಿ ದ್ದಾರೆ. ನಾಟೋ ಕೊಸೊವೊ ಬಗ್ಗೆ ಮಾತು ಕತೆ ಮುಂದುವರೆಸಬೇಕು ಹಾಗೇನಾದರೂ ನಾಟೋ ಏಕಪಕ್ಷೀಯವಾಗಿ ಮಿಲಿಟರಿ ದಾಳಿ ನಡೆಸಿದರೆ, ಯುಗೋಸ್ಲಾವಿಯಕ್ಕೆ ಮಿಲಿಟರಿ ತಾಂತ್ರಿಕ ನೆರವು ನೀಡುವುದು ಎಂದು ಎಚ್ಚರಿಸಿದ್ದಾರೆ. ಅಲ್ಲದೆ ನಾಟೋಧ ಜತೆ ಸಹಕಾರ ಒಪ್ಪಂದವನ್ನು ಮಾನ್ಯ ಮಾಡುವುದಿಲ್ಲ ಎಂದು ಬೆದರಿಸಿದೆ.

ನೈಜೀರಿಯಾದಲ್ಲಿ ಮಿಲಿಟರಿ ಸರ್ವಾಧಿಕಾರಿ ಈಗ ಪ್ರಜಾಸತ್ತಾತ್ಮಕ ಅಧ್ಯಕ್ಷ

20 ವರ್ಷಗಳಿಂದ ಮಿಲಿಟರಿ ಸರ್ವಾಧಿಕಾರಿಯಾಗಿ ಆಳುತ್ತಾ ಬಂದಿರುವ ನೇಜೀರಿಯದ ಜನರಲ್ ಒಬಸಂಜೊ ಇತ್ತೀಚಿಗೆ ನಡೆದ ಅಧ್ಯಕ್ಷೀಯ ಚುನಾವಣೆಯಲ್ಲಿ ಭಾರಿ ಬಹುಮತದಿಂದ ಗೆದ್ದು ಬಂದಿದ್ದಾರೆ. ಜನರಲ್ ಒಬಸಂಜೊ ಶೇಕಡಾ 63 ಮತಗಳಿಸಿದರೆ ಅವರ ಪ್ರತಿಸ್ಪರ್ಧಿ ಮಾಜಿ ಅರ್ಥ ಮಂತ್ರಿ ಒಲು ಫಲಾಯ್ ಶೇಕಡ 37 ಮತಗಳಿಸಿದ್ದಾರೆ ಎಂದು ಚುನಾವಣ ಕಮಿಷನ್ ಪ್ರಕಟಿಸಿದೆ. ಸೋತ ನಾಯಕ ಫಲಾಯ್ ಮಿಲಿಟರಿ ಆಳ್ವಿಕೆಯಲ್ಲಿ ನಡೆದ ಚುನಾವಣೆಗಳು ನ್ಯಾಯಯುತ, ಸಕ್ರಮವಾಗಿರಲಿಲ್ಲ ಎಂದು ಆಪಾದಿಸಿದ್ದಾರೆ. ಆದರೆ ಅವರು ಈ ಫಲಿತಾಂಶದ ವಿರುದ್ಧ ಕಾನೂನು ಕ್ರಮ ಕೈಗೊಳ್ಳುತ್ತಾರೆಯೇ ಅಥವಾ ರಾಜಕೀಯ ಆಂದೋಲನ ಮಾಡುತ್ತಾರೆಯೇ ಎಂದು ಕಾದು ನೋಡಬೇಕಾಗಿದೆ.ಸ್ವತಂತ್ರ ವೀಕ್ಷಕರು ಹಲವಾರು ಚುನಾವಣಾ ಅಕ್ರಮಗಳು ನಡೆದಿವೆ ಎಂದು ಹೇಳಿದ್ದರೂ, ವ್ಯಾಪಕ ರೀತಿಯಲ್ಲಿ ಇದು ನಡೆದಿತ್ತೆ ಎಂಬ ಬಗ್ಗೆ ತಿಳಿಸುವಲ್ಲಿ ವಿಫಲವಾಗಿದ್ದಾರೆ.

ಇರಾಕ್-ದಿಗ್ಬಂಧನಕ್ಕೆ 18 ಲಕ್ಷ ಬಲಿ

ವಿಶ್ವಸಂಸ್ಥೆ 8 ವರ್ಷಗಳ ಇರಾಕ್ ಮೇಲೆ ವಿಧಿಸಿರುವ ದಿಗ್ಬಂಧನಕ್ಕೆ 18 ಲಕ್ಷ ಜನ ಬಲಿಯಾಗಿದ್ದಾರೆ. ನವಜಾತಶಿಶುಗಳ ಮರಣದ ಸಂಖ್ಯೆ ನಾಲ್ಕು ಪಟ್ಟು ಹೆಚ್ಚಿದೆ. ಮಕ್ಕಳ ಮರಣದ ಸಂಖ್ಯೆ ಸರಾಸರಿ ತಿಂಗಳಿಗೆ 5 ಪಟ್ಟು ಹೆಚ್ಚಿದೆ.



ಅಮೇರಿಕವನ್ನು ದಂಗು ಬಡಿಸಿದ ಜಪಾನೀಯ ಹತ್ಯೆ

ಆತ ಬಿಲ್ ಕಿಂಗ್,24 ವರ್ಷದ ಯುವಕ, ಆತ ಮಾಜಿ ಕೈದಿ ಬಿಳಿಯರ ಅಧಿಪತ್ಯ ಸಾರುವ ಜನಾಂಗವಾದಿ ಫ್ಯಾಸಿಸ್ಟ್ ಗುಂಪೊಂದರಲ್ಲಿ ಸೇರಿಕೊಂಡಿದ್ದ. ಆತನಿಗೆ ತನ್ನ ಫ್ಯಾಸಿಸ್ಟ್ ಜನಾಂಗವಾದಿ ಗುಂಪಿಗೆ ತನ್ನ ಪಟ್ಟಣದಲ್ಲಿ ಪ್ರಚಾರ ಮಾಡಬೇಕು ಅನ್ನಿಸಿತು. ಜನರ ಗಮನ ಸೆಳೆಯಬೇಕು ಎನ್ನಿಸಿತು.ಆತ ಆರಿಸಿಕೊಂಡಿದ್ದು ರಕ್ತ ಸಿಕ್ತ ಹಾದಿ. ದಾರಿಯಲ್ಲಿ ಹೋಗುತ್ತಿರುವ ಮಧ್ಯ ವಯಸ್ಕ ಕರಿಯನೊಬ್ಬನನ್ನು ಆರಿಸಿದ. ಆತನನ್ನು ಇಬ್ಬರು ಸಹಚರರ ಜೊತೆ ಸೇರಿ ಪಿಕ್-ಅಪ್ ಟ್ರಕ್ ನ ಹಿಂಭಾಗಕ್ಕೆ ಕಟ್ಟಿ ಮೂರು ಮೈಲಿಗಳ ವರೆಗೆ ಜನಭರಿತ ರಸ್ತೆಗಳಲ್ಲಿ ಎಳೆದುಕೊಂಡು ಹೋದ ಆತ ಸಾಯುವವರೆಗೆ. ಈ ಎಳೆತದಲ್ಲಿ ಜೆಮ್ಸ್ ಬರ್ಡ್‌ಎಂದು ಗುರುತಿಸಲಾದ ಕರಿಯನ ಕೈ ಕಾಲು,ದೇಹ,ತಲೆ ಬೇರೆಬೇರೆಯಾಗಿತು. ಈ ಹಿಂಸಾ ಕೃತ್ಯ ಇಡೀ ದೇಶವನ್ನು ದಂಗು ಬಡಿಸಿದೆ. ಈ ಹಿಂಸಾಕೃತ್ಯಕ್ಕೆ ಆತನನ್ನು ಮರಣದಂಡನೆಗೆ ಗುರಿಪಡಿಸಲಾಗಿದೆ. ಆದರೆ ಈ ಜನಾಂಗವಾದಿ ಫ್ಯಾಸಿಸ್ಟ್ ಗುಂಪುಗಳು ತಮ್ಮ ಹಿಂಸಾಕೃತ್ಯಗಳನ್ನು ಆರಾಮವಾಗಿ ಮುಂದುವರೆಸುತ್ತಿವೆ. ಇಡೀ ಜಗತ್ತಿಗೆ 'ಮಾನವಹಕ್ಕು'ಗಳ ಬಗ್ಗೆ ನೈತಿಕ ಪಾಠ ಹೇಳುವ ಅಮೇರಿಕದಲ್ಲಿ 'ಮಾನವಹಕ್ಕು' ಅವಸ್ಥೆ ಇಷ್ಟೇನೆ?

ರಶ್ಯಾ-ಚೀನಾ ಇಂಧನ ಮಿಲಿಟರಿ ಉಪಕರಣಗಳ ಬಗ್ಗೆ ಒಪ್ಪಂದ

ಚೀನಾ ಪ್ರಧಾನ ಮಂತ್ರಿ ಝೂ ರೊಂಗ್‌ಜಿಯವರ ಮಾಸ್ಕೋ ಭೇಟಿ ಸಂದರ್ಭದಲ್ಲಿ ಸುಮಾರು 11 ಒಪ್ಪಂದಗಳಿಗೆ ಸಹಿ ಹಾಕಿ ಚೀನಾ-ರಶ್ಯಾ ವಾಣಿಜ್ಯ ಸಂಬಂಧವನ್ನು ಬಲಪಡಿಸಿದೆ. ಇದರಲ್ಲಿ ಪ್ರಮುಖವಾದದ್ದು ಇಂಧನ ಹಾಗೂ ಮಿಲಿಟರಿ ಉಪಕರಣಗಳ ಬಗ್ಗೆ ಮಾಡಿದ ಒಪ್ಪಂದ. ರಶ್ಯದ ಸೈಬೀರಿಯ ಪ್ರಾಂತ್ಯದ ಕೊವಿಕ್ತಾದಿಂದ ಚೀನಾ ಉತ್ತರ-ಪಶ್ಚಿಮಾ ಭಾಗಗಳಿಂದ 2300 ಕಿ.ಮೀ.ಪೈಪ್ ಲೈನ್ ಮೂಲಕ ಪ್ರಾಕೃತಿಕ ಗ್ಯಾಸ್ ಸರಬರಾಜು ಬಗ್ಗೆ ಅಧ್ಯಯನ ಮಾಡುವುದು ಈ ಒತ್ತಾಯಗಳಲ್ಲಿ ಒಂದು. ಚೀನಾದ ಉತ್ತರ ಪಶ್ಚಿಮ ಭಾಗಗಳಿಗೆ ಪೆಟ್ರೋಲಿಯಂ, ವಿದ್ಯುತ್ ಸರಬರಾಜು ಮಾಡುವ ಬಗ್ಗೆಗೂ ಒಪ್ಪಂದ ಮಾಡಿಕೊಳ್ಳಲಾಗಿದೆ. 50-30 ರಶ್ಯನ್ ವಿಮಾನಗಳ ಖರೀದಿ ಬಗ್ಗ ಮಾತುಕತ ಮುಂದುವರಸುವ ಬಗೆಗೂ ಒತ್ತಾಯ ವಾಗಿದೆ. ಈ ಒತ್ತಾಯಗಳ ಮೂಲಕ ಚೀನಾ -ರಶ್ಯಾ ನಡುವಣ ವಾಣಿಜ್ಯ ಸಂಬಂಧ ಘನಿಷ್ಟವಾಗಿದೆ. ಚೀನಿ ಪ್ರಧಾನಿ ರಶ್ಯನ್ ಅಧ್ಯಕ್ಷ, ಹಾಗೂ ಪ್ರಧಾನಿಯವರ ಜತೆ ಮಾತುಕತೆ ನಡೆಸಿದ ಮೇಲೆ ಈ ಒಪ್ಪಂದಗಳಿಗೆ ಸಹಿ ಹಾಕಲಾಯಿತು.

ಬ್ರಿಟೀಷ್ ಪೋಲೀಸು ಜನಾಂಗವಾದಿ - ವರದಿ

ಬ್ರಿಟಿಷ್ ಸರ್ಕಾರ ನೇಮಿಸಿದ ತನಿಖಾ ಸಮಿತಿಯೊಂದು ಬ್ರಿಟೀಷ್ ಪೋಲೀಸು 'ಜನಾಂಗವಾದಿ' ಎಂದು ಹೇಳಿದೆ. ಈ ವರದಿ ಬ್ರಿಟನ್‌ನಲ್ಲಿ ಭಾರಿ ವಿವಾದ ಎಬ್ಬಿಸಿ, ಸರ್ಕಾರದ ಮುಜುಗರಕ್ಕೆ ಕಾರಣವಾಗಿದೆ.

1993ರಲ್ಲಿ ಬಸ್‌ಸ್ಟಾಪ್‌ವೊಂದರಲ್ಲಿ 5 ಜನ ಬಿಳಿಹುಡುಗರು ಕರಿಯ ಹುಡುಗನನ್ನು ಕೊಲೆ ಮಾಡಿದಕ್ಕೆ ಸಂಬಂಧಪಟ್ಟ ಪೋಲೀಸು ನಿರ್ಲಕ್ಷ್ಯ, ಜನಾಂಗೀಯ ವ್ಯವಸ್ಥೆ ಬಗ್ಗೆ ಪ್ರತಿಭಟನೆ ಬಂದಾಗ ಆ ಬಗ್ಗೆ ಸರ್ಕಾರ ತನಿಖಾ ಸಮಿತಿ ನೇಮಿಸಿತ್ತು. ಆ ತನಿಖಾ ಸಮಿತಿ ಸಮಸ್ಯೆಯ ಸಮಗ್ರ ಅಧ್ಯಯನಮಾಡಿ ಪೋಲಿಸು 'ಜನಾಂಗವಾದಿ' ಎಂಬ ನಿರ್ಣಯಕ್ಕೆ ಬಂದಿದೆ.

ಇತ್ತೀಚಿಗೆ ಪೋಲೀಸರ ಜನಾಂಗವಾದಿ ತಾರತಮ್ಯ ಧೋರಣೆ ಇತ್ತೀಚಿಗೆ ಇನ್ನೊಂದು ಪ್ರಕರಣದಲ್ಲಿ ಬೆಳಕಿಗೆ ಬಂದಿತ್ತು. ಆ ಪ್ರಕರಣದಲ್ಲಿ ಹಿದಿನ ಯಾವುದೇ ಅಪರಾಧದ ಚರಿತ್ರೆ ಇಲ್ಲದ ಒಬ್ಬ ಕರಿಯ ಕಾರ್ಮಿಕನನ್ನು ಪೋಲೀಸರು ಎರಡು ವರ್ಷಗಳಲ್ಲಿ 34 ಬಾರಿ ಬಂಧಿಸಿ ಪ್ರಶ್ನಿಸಿದ್ದರು. ಪ್ರತಿಬಾರಿ ನಿರಪರಾಧಿ ಎಂದು ಬಿಡುಗಡೆ ಮಾಡಿದ್ದರು. ಈ ಉಪಟಳ ಸಹಿಸಲಾಗದೆ ಆತ ಪೋಲೀಸರು ಜನಾಂಗೀಯ ಕ್ರೂ ಧೋರಣೆ ಬಯಲು ಮಾಡಲು ಕೋರ್ಟಿನ ಕಟ್ಟೆ ಹತ್ತಿದ್ದ.

ಬಂಡವಾಳಶಾಹಿ ಮೊಲ್ಡೋವಾದಲ್ಲಿ ಮಾದಕ ದ್ರವ್ಯ ಸೇವನೆ ಇಪ್ಪತ್ತು ಪಟ್ಟು ಹೆಚ್ಚು

ಸೋವಿಯೆತ್ ಒಕ್ಕೂಟ ಒಡೆದ ಮೇಲೆ ಸ್ವಾತಂತ್ರವಾದ ಮೊಲ್ಡೋವಾ ಗಣತಂತ್ರದಲ್ಲಿ ಮಾದಕದ್ರವ್ಯ ಸೇವನೆ 20 ಪಟ್ಟು ಹೆಚ್ಚಿದೆ. ಕಳೆದ 5 ವರ್ಷಗಳಲ್ಲಿ ಮಾದಕ ದ್ರವ್ಯಗಳಿಗೆ ಸಂಬಂಧಿಸಿದ ಅಪರಾಧ ಮೂರು ಪಟ್ಟು ಹೆಚ್ಚಿದೆ. ಇದು ಬಂಡವಾಳಶಾಹಿ ಮೊಲ್ಡೋವಾದ ಸಾಧನೆ.

ಬಂಡವಾಳಶಾಹಿ ಚೆಕ್‌ನಲ್ಲಿ ಇಮ್ಮಡಿಯಾದ ಅಪರಾಧ

ಚೆಕ್ ದೇಶ ಸಮಾಜವಾದ ಬಿಟ್ಟುಕೊಟ್ಟು ಬಂಡವಾಳಶಾಹಿ ವ್ಯವಸ್ಥೆ ಅಪ್ಪಿಕೊಂಡ ಈ ವರ್ಷಗಳಲ್ಲಿ ಅಲ್ಲಿನ ಅಪರಾಧಗಳ ಸಂಖ್ಯೆ ಇಮ್ಮಡಿಯಾಗಿದೆ. ಸಮಸ್ಯೆ ತೀರಾ ಉಲ್ಬಣವಾಗಿರುವ ಕಳೆದ 6 ವರ್ಷಗಳಲ್ಲಿ ನಾಲ್ಕು ಕಾಲು ಲಕ್ಷ ಅಪರಾಧಗಳು ನಡೆದು ಕಳೆದ ವರ್ಷ ಅತ್ಯಂತ ಹೆಚ್ಚಿನ ಅಪರಾಧಿಗಳ ವರ್ಷವಾಗಿಸಿದೆ. ಅಪರಾಧ (ಮುಖ್ಯವಾಗಿ ಆರ್ಥಿಕ ಅಪರಾಧಗಳಿಂದ) ಆಗಿರುವ ಹಾನಿ 112 ಕೋಟಿ ಡಾಲರಿನದ್ದು ಆಗಿದೆ. ಇದು ಬಂಡವಾಳಶಾಹಿ ಚೆಕ್‌ನ ಭ್ರಿ ಸಾಧನೆಗಳಲ್ಲಿ ಒಂದು.

..................ಗ್ರಾಮೀಣ ಮಹಿಳೆಯರ ಯಶಸ್ವಿ ಸಮಾವೇಶ

ಪುಟ 3 ರಿಂದ

ಹೆಂಗಸರು ವ್ಯಾಪಾರಸ್ಥರು. ಇದರಿಂದ ರೋಸಿದ್ದ ಮಹಿಳೆಯೊಬ್ಬರು ಎಂತದೇ ಹೋರಾಟಕ್ಕೂ ಸಿದ್ಧವೆಂದರು.

ಇವೆಲ್ಲಕ್ಕೂ ಕಳಸವಿಟ್ಟಂತಿರುವ ರೇಷನ್ ಕಾರ್ಡ್ ಸಮಸ್ಯೆ ಶ್ರೀಮಂತರಿಗೆ ಹಸಿರು ಕಾರ್ಡು ಬಡವರಿಗೆ ಕೆಂಪುಕಾರ್ಡು ಬಹುತೇಕ ಬಡ ಕುಟುಂಬಗಳಿಗೆ ರೇಷನ್ ರಾರ್ಡ್ ಇಲ್ಲ. ಕಾರ್ಡಿದ್ದವರಿಗೆ ರೇಷನ್ನೇ ಇಲ್ಲ. ಈ ಸಮಸ್ಯೆಯ ವಿರುದ್ಧ ಸ್ಥಳೀಯವಾಗಿ ವೈಯಕ್ತಿಕ ನೆಲೆಗಳಿಲ್ಲದೇ ಸೆಣಸಾಟ ನಡೆಸಿದಾಗ ಮಹಿಳೆಯರಿಗೆ ಸಂಘಟಿತ ಸಮಾವೇಶ ಸ್ಫೂರ್ತಿಯ ಸೆಲೆಯೇ ಸರಿ. ಇದನ್ನು ಹಾಗೆಯೇ ಬಿಡಬಾರದು ಎಲ್ಲರೂ ಒಟ್ಟಾಗಿ ಎದುರಿಸೋಣ ಎನ್ನುವ ಕಹಳೆ.

ಮಹಿಳೆಯರನ್ನು ಬಡಿದು ಬಡಿದು ನೆಲಕ್ಕೊರಗಿಸುತ್ತಿರುವ ಬಯಾರಿಕೆ ಮತ್ತೊಂದು ಕಡೆ. ಇದರ ಬಗ್ಗೆ ಚರ್ಚೆ ಮಾಡಲು ಒಂದು ದಿನದ ಸಮಾವೇಶ ಏನೇನೂ ಸಾಲದು. ಇಂತಹ ದುಬಾರಿ ಬದುಕಿನ ನಡುವೆ ಕೃಷಿ ಕೂಲಿಕಾರರ ಗೋಳಂತು ಹೇಳತೀರದು.

6 ತಿಂಗಳು ಕೂಲಿಯಿದ್ದರೆ ಮತ್ತೆ 6 ತಿಂಗಳ ಉಪವಾಸ. ವರ್ಷವಿಡೀ ಕೂಲಿ ಸಿಗದೆ ಊರಿಂದೂರಿಗೆ ಕೇರಿಯಿಂದ ಕೇರಿಗೆ ಅಲೆದಾಡುವ ಪರಿಸ್ಥಿತಿ ಯಾವ ಕೆಲಸಕ್ಕಾದರು ಸರಿಯೇ ಎಂದು ಅಗ್ಗದ ದುಡಿಮೆಗೆ ಶರಣಾಗುವುದು, ಮಹಿಳೆಯ ರಂತು ಹಿಂಡಿ ಹಿಪ್ಪೆಯಾಗಿರುವುದು ವಾಸ್ತವ. ತಮ್ಮ ಬದುಕಿನ ದಾರುಣ ಪರಿಸ್ಥಿತಿಯನ್ನು ಮನ ಮುಟ್ಟುವಂತೆ ಬಿಚ್ಚಿಟ್ಟವರು ಇಂತಹ ಎಷ್ಟೊ ವಿಷಯಗಳ ಕಡೆ ಗಮನ ಸೆಳೆದರು.

ವರದಕ್ಷಿಣೆ ಅತ್ಯಾಚಾರ ಹಿಂಸೆ ದೌರ್ಜನ್ಯಗಳಿಂದ ಜರ್ಜರಿತರಾದ ಮಹಿಳೆಯರು ಸಾಮಾಜಿಕವಾಗಿಯು ಆರ್ಥಿಕವಾಗಿಯೂ ಸಧೃಡರಾಗುವ ನಿಟ್ಟಿನಲ್ಲೂ ಪ್ರಜ್ಞಾಪೂರ್ವಕ ಪ್ರಯತ್ನಗಳನ್ನು ನಡೆಸಬೇಕಾದ್ದು ಅನಿವಾರ್ಯ.

ಮಹಿಳೆಯರ ಸರ್ವಾಂಗೀಣ ಅಭಿವೃದ್ಧಿಗಾಗಿ ದೇಶಾದ್ಯಂತ ಕೆಲಸ ಮಾಡುತ್ತಿರುವ ಜನವಾದಿ ಮಹಿಳಾ ಸಂಘಟನೆಯು ಬೆಂಗಳೂರು ಜಿಲ್ಲೆಯಲ್ಲಿಯೂ ಪ್ರಥಮ ಬಾರಿ ಗ್ರಾಮೀಣ ಮಹಿಳೆಯರ ನಡುವೆ ಪ್ರವೇಶ ಮಾಡಿದೆ. ಕಷ್ಟ ಕಾರ್ಪಣ್ಯಗಳನ್ನು ಆಲಿಸಿದೆ.

ಸಮಾವೇಶದಲ್ಲಿ ಪಾಲ್ಗೊಂಡಿದ್ದ ಅಪಾರ ಸಂಖ್ಯೆಯ ಮಹಿಳಾ ಹಾಜರಾತಿಯೇ ನಮ್ಮ ಸಂಘಟನೆಯ ಮೇಲಿಟ್ಟಿರುವ ವಿಶ್ವಾಸಕ್ಕೆ ಸಾಕ್ಷಿ. ಜನತೆಯ ವಿಶ್ವಾಸವನ್ನು ಕಾಪಾಡುವ ನಿಟ್ಟಿನಲ್ಲಿ ಅವರ ಬೇಡಿಕೆಗಳಿಗಾಗಿ ಸಮಸ್ಯೆಗಳಿಗಾಗಿ ಅವರೊಟ್ಟಿಗೆ ಹೋರಾಟ ನಡೆಸುವುದೊಂದೆ ನಮ್ಮ ಮುಂದಿರುವ ಪ್ರಮುಖ ಕೆಲಸ ಈ ನಿಟ್ಟಿನಲ್ಲೂ ಸಮಾವೇಶ ಹಲವಾರು ನಿರ್ಣಯಗಳನ್ನು ಕೈಗೊಂಡಿತು.

ಪ್ರಮುಖ ನಿರ್ಣಯಗಳೆಂದರೆ

1. ಪ್ರತಿ ಹಳ್ಳಿಗೂ ಅಂಗನವಾಡಿ ಕೇಂದ್ರಕ್ಕೆ ಒತ್ತಾಯಿಸಿ
2. ಕೆಂಗೇರಿ ಉಪನಗರ ಗುಡಿಸಲು ನಿವಾಸಿಗಳಿಗೆ ಹಕ್ಕು ಪತ್ರಕೊಡಿ
3. ಹೆಜ್ಜಾಲ ಗೋಲಿಬಾರ್ ಪ್ರಕರಣದಲ್ಲಿ ಮಡಿದ ಗಾಯಗೊಂಡ ಕುಟುಂಬಗಳಿಗೆ ಪರಿಹಾರಕ್ಕೆ ಆಗ್ರಹಿಸಿ ಮೈಸೂರು ಎಕ್ಸ್‌ಪ್ರೆಸ್ ಹೈವೇಗೆ ಜನಸಾಮಾನ್ಯರ ಪ್ರವೇಶವಿಲ್ಲದಂತೆ ತಡೆಗೋಡೆ ನಿರ್ಮಿಸುವ ಯೋಜನೆಯನ್ನು ವಿರೋಧಿಸಿ ನಿರ್ಣಯಗಳನ್ನು ಅಂಗೀಕರಿಸಲಾಯಿತು.

ಸಮಾವೇಶದ ಉದ್ಘಾಟನೆಯನ್ನು ಸುಮಂಗಲಿ ಸೇವಾಶ್ರಮದ ಎಸ್.ಜಿ. ಸುಶೀಲಮ್ಮ ನೆರವೇರಿಸಿದರು. ಮುಖ್ಯ ಅತಿಥಿಗಳಾಗಿ ಕರ್ನಾಟಕ ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷರಾದ ಶಾಂತಾ ಪಿ. ಹಲಗಿ ಜನವಾದಿ ಮಹಿಳಾ ಸಂಘಟನೆಯ ರಾಜ್ಯ ಅಧ್ಯಕ್ಷರಾದ ಕೆ.ಎಸ್. ವಿಮಲ ರಾಜ್ಯ ಉಪಾಧ್ಯಕ್ಷರಾದ ಎಸ್. ಸತ್ಯಾ. ಎಸ್. ವರಲಕ್ಷ್ಮಿ ಪಾಲ್ಗೊಂಡಿದ್ದರು.

ಸಮಾವೇಶಕ್ಕೆ ಶುಭಕೋರಿ ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿ ಪಿ. ಜಗನ್ನಾಥ ಮಾತನಾಡಿದರು. ಸಂಘಟನೆಯ ಬೆಂಗಳೂರು ಜಿಲ್ಲಾ ಉಪಾಧ್ಯಕ್ಷರಾದ ಯಶೋದ ಅಧ್ಯಕ್ಷತೆ ವಹಿಸಿದ್ದ ಸಮಾವೇಶದ ಸ್ವಾಗತವನ್ನು ಎಸ್. ಶಾರದಾ ನೆರವೇರಿಸಿದರೆ, ಲೀಲಾವತಿ ಕಾರ್ಯಕ್ರಮ ನಿರೂಪಣೆ ಮಾಡಿ ಸುನಂದ ವಂದನೆಗಳನ್ನು ಸಲ್ಲಿಸಿದರು.

ಸಮಾವೇಶದಲ್ಲಿ ಚರ್ಚೆಗೆ ಪೂರಕವಾಗಿ ಜಿಲ್ಲೆಯ ಮಹಿಳೆಯರ ಸ್ಥಿತಿ ಗತಿ ಕುರಿತಾದ ವರದಿಯೊಂದನ್ನು ಕೆ.ಎಸ್. ಶಾರದಾ ಮಂಡನೆ ಮಾಡಿದರು. ವರದಿಯ ಮೇಲೆ ಹಲವಾರು ಪ್ರತಿನಿಧಿಗಳು ಮಾತನಾಡಿದರು.

ಸ್ಫೂರ್ತಿದಾಯಕ ಗೆಲುವು ನಮ್ಮದೆ ಹಾಡಿನೊಂದಿಗೆ ಸಮಾವೇಶ ಮುಕ್ತಾಯಗೊಂಡಿತು.

ವರದಿ: **ಎನ್.ಪ್ರಭಾ**

ಏಪ್ರಿಲ್ 20ರ ವರೆಗೆ ನೀರು ಬಿಡಿ ಬೆಳೆಕಾಪಾಡಿ-ರೈತ ಸಂಘದ ಆಗ್ರಹ

ಕೃಷ್ಣಾ ಮೇಲ್ದಂಡೆ ಯೋಜನೆಯ ನೀರಾವರಿ ಸಲಹಾ ಸಮಿತಿಯು ಇತ್ತಿಚೀಗೆ ಸಭೆ ಸೇರಿ ರೈತರ ಬೇಸಿಗೆ ಬೆಳೆಗೆ ಫೆಬ್ರವರಿ 28 ರ ವರಗೆ ನೀರು ಬಿಡಲು ತೀರ್ಮಾನಿಸಿರುವುದನ್ನು ಕರ್ನಾಟಕ ಪ್ರಾಂತ ರೈತ ಸಂಘದ ಸಹಾಪೂರ ತಾಲೂಕು ಸಮಿತಿ ಖಂಡಿಸಿದೆ.

ಮುಂಗಾರು ಬೆಳೆ ಅತಿವೃಷ್ಟಿಯಿಂದ ಪೂರ್ತಿ ನಷ್ಟವಾಗಿ ರೈತ ದಿವಾಳಿ ಗೊಂಡು ಆತ್ಮ ಹತ್ಯೆ ಮಾಡಿಕೊಳ್ಳುವಂತಹ ಹತಾಶ ಸ್ಥಿತಿಗೆ ತಲುಪಿದ್ದರು. ಆದರೆ ಬೇಸಿಗೆ ಬೆಳೆಯಾದರೂ ಕೈ ಸೇರಬಹುದೆಂಬ ನಂಬಿಕೆಯಿಂದ ಸಾಲ ಮಾಡಿ ಸೇಂಗಾ ಬೀಜ ಬಿತ್ತಿರುವಾಗ ಸಲಹಾಸಮಿತಿ ಫೆಬ್ರವರಿ 28 ಕ್ಕೆ ನೀರು ನಿಲ್ಲಿಸುವ ತೀರ್ಮಾನ ಕೈಗೊಂಡಿರುವುದು ಅವೈಜ್ಞಾನಿಕ ಕ್ರಮ ವೆಂದು ರೈತ ಸಂಘ ಟೀಕಿಸಿದೆ. ಜನವರಿಯಲ್ಲಿ ಬಿತ್ತಿರುವ ಬೆಳೆ ರಕ್ಷಿಸಬೇಕಾದರೆ ಎಪ್ರಿಲ್ 20 ರ ವರೆಗೆ ಖಡ್ಡಾಯವಾಗಿ ನೀರು ಬೀಡುವಂತೆ ರೈತ ಸಂಘ ಆಗ್ರಹಿಸಿದೆ. ಇಲ್ಲದಿದ್ದರೆ ಕರನಿರಾಕರಣೆ, ಶಾಸಕರು ಮಂತ್ರಿಗಳಿಗೆ ಘೇರಾವ್, ಮನೆ ಮುತ್ತಿಗೆ ಯಂತಹ ಕಾರ್ಯಕ್ರಮ ಹಮ್ಮಿಕೊಳ್ಳಲಾಗುವುದೆಂದು ರೈತ ಸಂಘ ಆಗ್ರಹಿಸಿದೆ.




ದೇಶವನ್ನು ಕೋಮುವಾದಿಗಳಿಂದ ಉಳಿಸುವುದು ಮಹಿಳಾ ಆಂದೋಲನದ ಈ ವರ್ಷದ ಅಜೆಂಡಾ

ಕೆ.ಎಸ್.ವಿಮಲ

ಮಹಿಳಾ ಚಳುವಳಿಗೆ ಸ್ಫೂರ್ತಿ ನೀಡುವ ನಡೆಸಿದ ಹೋರಾಟಗಳ ಅವಲೋಕನ ಮಾಡುವ ಮುಂದಿನ ಹೋರಾಟಕ್ಕೆ ನಾಂದಿ ಹಾಡುವ ಮಾರ್ಚ್-8- ಅಂತರ ರಾಷ್ಟ್ರೀಯ ಮಹಿಳಾ ದಿನ ಮತ್ತೆ ಬಂದಿದೆ ಕಳೆದ ವರ್ಷದ ಈ ದಿನ ದೇಶದ ಭಾವೀ ಸರ್ಕಾರವನ್ನು ಆಯ್ಕೆ ಮಾಡುವ ಚುನಾವಣಾ ಕಣದ ಮಧ್ಯದಲ್ಲಿ ಬಂದು ಸರಿದು ಹೋಗಿತ್ತು.

ಅಂತರ ರಾಷ್ಟ್ರೀಯ ಮಹಿಳಾ ದಿನವನ್ನು ನಾವು ನ್ಯೂಯಾರ್ಕಿನ ಸಿದ್ಧ ಪಡಿಸಿದ ಉಡುಪಿನ ಕಾರ್ಖಾನೆಯ ಕಾರ್ಮಿಕರ ಹೋರಾಟದ ವಿಜಯದ ದಿನವಾಗಿ ಮತ್ತು ಆ ದಿನಕ್ಕೆ ಅಂತರಾಷ್ಟ್ರೀಯ ಖ್ಯಾತಿಯನ್ನು ತಂದುಕೊಟ್ಟ ಕ್ಲಾರಾ ಜೆಟ್ ಕಿನ್ ರವರಿಂದ ಪಡೆದ ಸ್ಫೂರ್ತಿಯ ದಿನವನ್ನಾಗಿ ಆಚರಿಸುತ್ತ ಬಂದಿದ್ದೇವೆ.

'98 ಮಾರ್ಚ್ 8 ರ ಸಂದರ್ಭದಲ್ಲಿ ಮುಂಬರುವ ಭಾವೀ ಸರ್ಕಾರ ಮತ್ತದು ಅನುಸರಿಸಬಹುದಾದ ನೀತಿಗಳ ಬಗ್ಗೆ ದೇಶದ ಜನ ವಿಭಾಗದ ಜೊತೆ ಮಹಿಳಾ ಚಳುವಳಿ ಬಹಳ ಆಸಕ್ತಿಯಿಂದ ಎದುರು ನೋಡುತ್ತಿತ್ತು. ಹಿಂದಿನ ಸರ್ಕಾರಗಳು ಹೇಳಿ ಕೊಳ್ಳುವಂತಹ ಸಾಧನೆಯನ್ನು ತೋರಿಸದ ಹಿನ್ನೆಲೆಯಲ್ಲಿ ಭ್ರಮ ನಿರಸನ ಗೊಂಡ ಜನಸಮುದಾಯ ಬಯಸಿದ ಬದಲಾವಣೆ ಮತ್ತು ವೈಯಕ್ತಿಕ ಪ್ರತಿಷ್ಠೆಯ ಮುಂದೆ ದೇಶ, ಜನ, ರಾಜಕೀಯ ಗಳೆಲ್ಲವೂ ನಗಣ್ಯವಾಗಿ, ಅನುಕೂಲ ಸಿಂಧು ರಾಜಕೀಯ ಮಾಡಲು ಮುಂದಾದ ಕೆಲವು ಪ್ರಾದೇಶಿಕ ಪಕ್ಷಗಳಿಂದಾಗಿ ಸರ್ಕಾರ ರಚಿಸುವಷ್ಟು ಮತಗಳಿಸದಿದ್ದರೂ ಬಿಜೆಪಿ ಕೇಂದ್ರದಲ್ಲಿ ಅಧಿಕಾರದ ಗದ್ದುಗೆ ಹಿಡಿಯಿತು. ಮೂಲಭೂತವಾದವನ್ನು ಬೆಂಬಲಿಸುವ ಯಾವುದೇ ಪಕ್ಷ ಅಧಿಕಾರಕ್ಕೆ ಬಂದರೆ ಹಿಡಿಯ ಬಹುದಾದ ದಾರಿಗಿಂತ ಭಿನ್ನವಾದ ದಾರಿಯನ್ನು ಬಿಜೆಪಿ ಹಿಡಿಯುವುದೆಂಬ ಭ್ರಮೆ ದೇಶದ ಪ್ರಜಾಪ್ರಭುತ್ವವಾದೀ ಮಹಿಳಾ ಚಳುವಳಿ ಗಿರಲಿಲ್ಲ. ಮತ್ತು ತನ್ನ ಪಕ್ಷದ ಸಿದ್ಧಾಂತಗಳಿಗನುಗುಣವಾಗಿಯೇ ಆದರ ಪ್ರಣಾಳಿಕೆ ಕೂಡ ಇತ್ತು. ಬಿ.ಜೆ.ಪಿ.ಯ ಪ್ರಣಾಳಿಕೆಯ ಪ್ರಕಾರ ಭಾರತೀಯರ ಸನಾತನತೆ ಭಾರತೀಯ ಸಂವಿಧಾನವನ್ನು ರೂಪಿಸಿದೆಯೇ ಹೊರತು ದೇಶದ ಸಂವಿಧಾನ ದೇಶವಾಸಿಗಳ ಬದುಕಿನ ರೀತಿಗೆ ಮಾರ್ಗದರ್ಶಿಕೆಯಲ್ಲ ಮತ್ತು 50 ವರ್ಷಗಳ ಅನುಭವದ ಆಧಾರದಲ್ಲಿ ಸಂವಿಧಾನವನ್ನು ಪುನರ್ ವಿಮರ್ಶಿಸುವ ಆಲೋಚನೆಯನ್ನು ಮುಂದಿಟ್ಟಿತ್ತು.



ಈಗ ಅಧಿ ಕಾರದ ಅವಧಿಯ ಒಂದು ವರ್ಷ ಪೂರ್ತಿ ಯಾಗುವ ಹಂತದಲ್ಲಿ ಒಮ್ಮೆ ನಾವು ತಿರುಗಿ ನೋಡಿದರೆ ನಮಗೆ ಕಾಣು ವುದು ದೇಶದ ಜನಸಮುದಾಯದ ಸಮಸ್ಯೆಗಳಿಗೆ ಸ್ಪಂದಿಸದ ಸರ್ಕಾರ ಪೋಖ್ರಾನ್‌ನಲ್ಲಿ ಅಣ್ವಸ್ತ್ರ ಪರೀಕ್ಷೆ ನಡೆಸಿತು. ಪೋಖ್ರಾನ್‌ನ ಸುತ್ತ ಮುತ್ತಲಿನ ಹಳ್ಳಿಗಳಲ್ಲಿ ಮಹಿಳೆಯರು ಇಂದಿಗೂ ನೀರಿಗಾಗಿ ಮೈಲುಗಟ್ಟಲೇ ನಡೆಯುತ್ತಾರೆ. ಆಸ್ಪತ್ರೆ ಶಾಲೆಗಳು ಆ ಜನರ ಕನಸಿನಲ್ಲಿಯೂ ಬಹುಶ: ಕಾಣಸಿಗಲಾರವು. ಅಲ್ಪನಿಗೆ ಐಶ್ವರ್ಯ ಸಿಕ್ಕರೆ ಅರ್ಧರಾತ್ರಿಯಲ್ಲಿ ಕೊಡೆ ಹಿಡಿದ ನಂತೆ ಎಂಬ ಗಾದೆ ಮಾತಿಗೆ ತಕ್ಕುದಾಗಿಯೇ ಬಿಜೆಪಿ ಈ ವರೆಗೂ ನಡೆದು ಕೊಂಡಿದೆ.

ಸುಭದ್ರ ಸರ್ಕಾರ ಸಮರ್ಥ ಪ್ರಧಾನಿಯ ಘೋಷಣೆ ಯೊಂದಿಗೆ ಗದ್ದುಗೆ ಏರಿದ ಪಕ್ಷ ತನ್ನ ವರ್ಗ ಗುಣಕ್ಕನುಗುಣವಾಗಿ ವಣಿಕ/ವರ್ತಕರ ವಿಶ್ವಾಸ ಉಳಿಸಿಕೊಳ್ಳಲು ತನ್ನೆಲ್ಲ ಮಿತಿಗಳನ್ನು ಮೀರಿ ಕ್ರಮವಹಿಸಿತು. ಪರಿಣಾಮ ಬಡವರ ಪಾಲಿಗೆ ಗಂಜಿಯ ಜೊತೆ ನಂಜಿಕೊಳ್ಳಲಿದ್ದ ಈರುಳ್ಳಿ ಬೆಲೆ ಕೇಳಿದರೇ ಕಣ್ಣಲ್ಲಿ ನೀರು ಬರುವಷ್ಟು ಬೆಲೆಗಳು ಏರಿದವು. ಎಲ್ಲ ಜೀವನಾಶ್ಯವಕ ವಸ್ತುಗಳ ಬೆಲೆಯೂ ಏರಿದ ಹಿನ್ನೆಲೆಯಲ್ಲಿ ಅರ್ಧ ಹೊಟ್ಟೆ ಉಣ್ಣುತ್ತಿದ್ದ ಗೃಹಿಣಿಯರು ಉಪವಾಸ ಬೀಳುವ ಪರಿಸ್ಥಿತಿ. ಜನರಿಗೆ ಹೇಳಲು ಸ್ವದೇಶೀ ಮಂತ್ರವಾದರೂ ವಿದೇಶಿಯರಿಗೆ ರತ್ನಗಂಬಳಿ ಸ್ವಾಗತ ನೀಡುವಲ್ಲಿ ಹಿಂದಿನ ಸರ್ಕಾರಗಳನ್ನು ಮೀರಿಸಿದೆ. ಪರಿಣಾಮ ಹೆಚ್ಚಿನ ದೇಶೀಯ ಉದ್ದಿಮೆಗಳು ಬೀದಿ ಪಾಲು. ಅರೆ ಉದ್ಯೋಗ ನಿರುದ್ಯೋಗ ಪರಿಣಾಮ ಎಲ್ಲರಿಗೂ ಗೊತ್ತಿರುವಂತೆ ಮಹಿಳೆ ಮೊದಲ ಬಲಿ.

ಸರ್ಕಾರ ನಡೆಸುವ ಬಿ.ಜೆ.ಪಿ.ಗೆ ಅಜೆಂಡಾ ನಿಶ್ಚಯಿಸಿ ಕೊಡುವುದು ಸಂಘ ಪರಿವಾರ. ಸಂಘ ಪರಿವಾರದ ಹಿಂದುತ್ವವೆಂದರೆ ಮಹಿಳೆ ಮನೆಯೊಳಗೇ ಇರಬೇಕು. ಮನು ಧರ್ಮಶಾಸ್ತ್ರ ದೇಶದ ಸಂವಿಧಾನಕ್ಕಿಂತಲೂ ದೊಡ್ಡದು. ಸಂಘ ಪರಿವಾರದ ಪ್ರಮುಖ ಸಂಚಾಲಕಿ ಉಷಾ ತಾಯಿ ಚಾಚಿ ಯವರ ಪ್ರಕಾರ (ರಾಜಸ್ತಾನದ ಜೆ.ಸಿ.ಬೋಸ್ ಹಾಸ್ಟೆಲ್ ಸಾಮೂಹಿಕ ಅತ್ಯಾಚಾರ ಘಟನೆಗೆ ಸಂಬಂಧಿಸಿದಂತೆ) ವಿಶ್ವ ವಿದ್ಯಾಲಯಗಳಲ್ಲಿ ಹುಡುಗಿಯರು ಹಾಕಿಕೊಳ್ಳುವ ಉಡುಪುಗಳು ಉದ್ರೇಕಕಾರಿಯಾಗಿರುತ್ತವೆ. ಹೆಣ್ಣು ಮಕ್ಕಳಿಗೆ ತಾಯಂದಿರು ಸರಿಯಾದ ಶಿಕ್ಷಣ ನೀಡುವುದರಲ್ಲಿ ವಿಫಲರಾಗುತ್ತಿದ್ದಾರೆ. ಅಂತೆಯೇ ದೆಹಲಿಯಲ್ಲಿ ಆಸ್ಪತ್ರೆಗಳಲ್ಲಿ ಸಂಶೋಧನೆಯಲ್ಲಿ ತೊಡಗಿರುವ ಯುವತಿಯರ ಮೇಲೆ ಹಿರಿಯ ಉಪಾಧ್ಯಾಯರು ಲೈಂಗಿಕ ಕಿರುಕುಳ ಕೊಡುವರೆಂಬ ದೂರಿಗೆ ಅವರಿಗೆ ಬಿಜೆಪಿ ಸರ್ಕಾರದ ಆರೋಗ್ಯ ಮಂತ್ರಿಯವರಿಂದ ಸಿಕ್ಕ ಉತ್ತರ ಇಂಥಾಹುದನ್ನು ಹೊರಗೆ ಹೇಳುವುದರಿಂದ ನಿಮ್ಮ ಮರ್ಯಾದೆ ಹರಾಜಾಗುತ್ತದೆ ಎಂಬುದಾಗಿತ್ತು. ಇವೆಲ್ಲವೂ ಬಿಜೆಪಿ ಮತ್ತದರ ಮಹಿಳಾ ವಿರೋಧಿ ಧೋರಣೆಗೆ ಕೆಲವು ಉದಾಹರಣೆಗಳಷ್ಟೆ.

ಹಾಲಿವುಡ್ ಬಾಲಿವುಡ್‌ಗಳಿಂದ ಯಾವ ಅಡ್ಡಿ ಆತಂಕಗಳೂ ಇಲ್ಲದೇ ಹರಿದು ಬರುವ ಇಡೀ ಸಮಾಜದ ಮೇಲೆ ಅತ್ಯಂತ ಕೆಟ್ಟ ಪರಿಣಾಮ ಬೀರುವ ಇಂಗ್ಲೀಷ್/ ಹಿಂದಿ ಚಿತ್ರಗಳ ಬಗ್ಗೆ ಸೊಲ್ಲೆತ್ತದ ಬಿಜೆಪಿಯ ಮತ್ತೊಂದು ಮುಖ ಶಿವಸೇನೆ ದೀಪಾ ಮೆಹ್ತಾರ ಫೈರ್ ಚಿತ್ರ ಪ್ರದರ್ಶನ ವಾಗದಂತೆ ತಡೆದಾಗ ಆ ಬಗ್ಗೆ ಸ್ಪಷ್ಟ ನಿರ್ದೇಶನ ಕೊಡುವಲ್ಲಿ ಸೋತ ಸರ್ಕಾರ ವಿರೋಧವನ್ನೇ ಪ್ರತಿ ಪಾದಿಸಿತೆನ್ನಬಹುದು. ಪುರುಷ ನಿರ್ಮಿತ ಪರಿಧಿಯಿಂದಾಚೆ ಮಹಿಳೆ ಹಾಕುವ ಒಂದು ಇಣುಕು ನೋಟ ಕೂಡ ಎಂತಹ ಧಾಳಿಗೆ ಒಳಗಾಗಬಹುದು ಎನ್ನುವುದಕ್ಕೆ 'ಫೈರ್ ಚಿತ್ರವೇ ಸಾಕ್ಷಿ. ಅಂತೆಯೇ ಎಬ್ಬಿಸುತ್ತಿರುವ ಮತಾಂತರ ವಿವಾದ, ಮತ್ತಲ್ಲಿ ಕ್ರೈಸ್ತ ಸನ್ಯಾಸಿನಿಯರ ಮೇಲೆ ಅತ್ಯಾಚಾರ, ಕುಷ್ಟ ರೋಗಿಗಳಿಗೆ ಸೇವೆ ಮಾಡುತ್ತಿದ್ದ ವ್ಯಕ್ತಿಯ ಕೊಲೆ, ಇವು ರಾಷ್ಟ್ರದೆ ಎಲ್ಲೆಡೆ ನಡೆಯುತ್ತಿದೆ. ಬೆಂಗಳೂರು ಸುತ್ತ ಮುತ್ತ ಕೂಡ ಕ್ರೈಸ್ತ ಸನ್ಯಾಸಿನಿಯರಿಗೆ ಕಿರುಕುಳ ನೀಡಲಾಗು ತ್ತಿದೆ. ಇದಿಷ್ಟೆ ಸಾಲದೆಂಬಂತೆ ಫೆಬ್ರವರಿ ಮೊದಲ ವಾರದಲ್ಲಿ ಅಹ್ಮದಾಬಾದಿನಲ್ಲಿ ನಡೆದ ವಿ. ಎಚ್.ಪಿ.ಯ ಧರ್ಮ ಸಂಸತ್ ಹಿಂದೂ ಧರ್ಮದ ಸನಾತನ ಪರಂಪರೆಯ ಉಳಿವಿಗಾಗಿ ಸತಿ ಸದ್ಧತಿಯನ್ನು ಮತ್ತೆ ಜಾರಿಗೆ ತರಲು ಆದೇಶ ನೀಡಿದೆ.

ಮಹಿಳಾ ಮೀಸಲಾತಿ ಮಸೂದೆಯ ಪರವೆಂಬಂತೆ ವರ್ತಿಸುವ ಬಿಜೆಪಿ ಒಂದು ವರ್ಷದಲ್ಲಿ ನಡೆದ ಎರಡು ಅಧಿವೇಶನ ಗಳಲ್ಲಿಯೂ ಈ ಮಸೂದೆ ಅಂಗೀಕಾರ ತರುವಲ್ಲಿ ವಿಫಲವಾಗಿದೆ. ಅಡ್ಮಿರಲ್ ಭಾಗವತ್ ರಂತಹವರನ್ನು ಸೇವೆಯಿಂದ ಅಮಾನತ್ತು ಗೊಳಿಸಲು ತನ್ನ ಪರಮೋಚ್ಚ ಅಧಿಕಾರವನ್ನು ಉಪಯೋಗಿಸುವ ಸರ್ಕಾರ (ನಿಜವಾದ ಕಾರಣ ಅವರ ಪತ್ನಿ ಶ್ರೀಕೃಷ್ಣ ಆಯೋಗಕ್ಕೆ ಸಹಕರಿಸಿದ್ದಾರೆಂಬುದು ಎಲ್ಲರಿಗೂ ತಿಳಿದಿದ್ದೂ ಸುಮ್ಮನಿರುವ ಸತ್ಯ) ಮಹಿಳಾ ಮೀಸಲಾತಿಗೇಕೆ ಸರ್ವ ಸಮ್ಮತ ಅಭಿಪ್ರಾಯಕ್ಕೆ ಕಾಯುತ್ತಿದೆ.?

ಬಿಜೆಪಿ ಎಷ್ಟು ಮಹಿಳಾ ವಿರೋಧಿ ಯೆಂದರೆ ಅತ್ಯಂತ ಪಾಳೆಯಗಾರೀ ಮನೋಭಾವ ಇರುವ ಒಬ್ಬ ಪುರುಷ ತನ್ನ ಮನೆಯ ಮಹಿಳೆಯರೆಲ್ಲರೂ ತನ್ನ ಅಣತಿಯಂತೆ ಇರುವಂತೆ ಮಾಡಲು ತನ್ನಲ್ಲಿ ದರ್ಪ-ಧಾಷ್ಟ್ಯಗಳನ್ನು ಉಪಯೋಗಿಸುವಂತೆ ಸುಷ್ಮಾ ಸ್ವರಾಜ್‌ರವರನ್ನು ಅವರು ಬದಿಗೆ ಸರಿಸಲು ಹೂಡಿದ ತಂತ್ರ ಒಂದೇ ಏಟಿಗೆ ಎರಡು ಬಲಿ. ಸುಷ್ಮಾಸ್ವಲ್ಪ ಬಾಯಿಬಡುಕಿ ಅವಳ ಬಾಯಿ ಬಡಿಯುವುದು ಹೇಗೆ ಎಂಬ ತಂತ್ರಕ್ಕೆ ನಾಜೂಕಾಗಿ ಬಲಿಯಾಗಿ ಇತ್ತ ಕೇಂದ್ರ ಮಂತ್ರಿ ಸ್ಥಾನವೂ ಇಲ್ಲ, ಪಕ್ಷದ ವಕ್ತಾರ ಪಟ್ಟವೂ ಇಲ್ಲ. ಅತ್ತ ದೆಹಲಿ ಗದ್ದುಗೆಯೂ ಇಲ್ಲ. ಹೀಗಾಗಲು ಕಾರಣ ಬಿಜೆಪಿ ಪ್ರತಿಪಾದಿಸುವ, ಅದರ ಅಜೆಂಡಾ ನಿರ್ಮಿಸಿ ಕೊಡುವ ಸಂಘ ಪರಿವಾರ-ಮಹಿಳೆ ಯೊಬ್ಬಳು ಅದ್ವಾನಿಯಂತಹ ಪುರುಷರಿಗೆ ಸರಿಸಮಾನವಾಗಿ ಬರುವುದನ್ನು ಸುತಾರಾಂ ಒಪ್ಪಿಕೊಳ್ಳಲಾರದು ಎನ್ನುವುದು ಒಂದು ಕಡೆಯಾದರೆ ಸಂಘ ಪರಿವಾರದ ತ್ರಿಮೂರ್ತಿಗಳಲ್ಲಿ ಒಬ್ಬನಾದ 'ಮಹಾ' ಜನರಿಗೆ ಅವಕಾಶ ಕಲ್ಪಿಸಲು ಬೇರೆ ಯಾರನ್ನು ಮೂಲೆಗೆ ತಳ್ಳಲು ಸಾಧ್ಯ?

ಹೀಗೆ ಮೂಲಭೂತವಾದದ ಪ್ರತಿಪಾದಕರು ಹಚ್ಚಿದ ಮೂಗಿನತುದಿಯ ತುಪ್ಪವನ್ನು ಮಹಿಳೆಯರು ಅರ್ಥಮಾಡಿ ಕೊಳ್ಳದಿದ್ದರೆ ಪಕ್ಕದ ಅಫ್ಘಾನಿಸ್ತಾನದ ಮಹಿಳೆಯರ ಪಾಡು ಜಾರಿಗೆ ಬರುವುದರಲ್ಲಿ ಯಾವ ಸಂದೇಹವೂ ಇಲ್ಲ. ಈ ವರ್ಷದ ಮಹಿಳಾ ದಿನದ ಅಜೆಂಡಾ ದೇಶವನ್ನು ಮೂಲಭೂತವಾದಿ ಗಳಿಂದ ತಪ್ಪಿಸುವ ಕುರಿತೇ ಆಗಬೇಕು. ಕ್ಲಾರಾ ಜೆಟ್‌ಕಿನ್ ರಂತಹ ಮಹಾನ್ ಸ್ವಾತಂತ್ರ್ಯ ಪ್ರೇಮಿ ಗಳಿಗೆ ನಾವು ಸಲ್ಲಿಸಬಹುದಾದ ನಮನಗಳು ಹೀಗೆ ಮಾತ್ರ.

ಪ್ರೀತಿ ಇಲ್ಲದ ಮೇಲೆ ಹೂವು ಅರಳೀತು ಹೇಗೆ?

ಅದೊಂದು ವಿಶೇಷ ಮದುವೆ. ಪನ್ನೀರು ಚುಮುಕಿಸಲಿಲ್ಲ. ಮಂತ್ರಾಕ್ಷತೆ ಇರಲಿಲ್ಲ, ಫಲ ತಾಂಬೂಲ ಪುಷ್ಪಗಳು ಕಾಣಸಲಿಲ್ಲ. ಬದಲಿಗೆ ವಿವಾಹ ಕುರಿತು ವಿಚಾರ ಸಂಕಿರಣವಿತ್ತು. ಸಾಹಿತಿಗಳು, ಪತ್ರಕರ್ತರು, ಹೋರಾಟಗಾರರು ಮದುವೆಯ ಬಗ್ಗೆ ತಮ್ಮ ಅನಿಸಿಕೆಗಳನ್ನು ಹಂಚಿಕೊಂಡರು. ಎಷ್ಟೊ ಜೋಡಿಗಳಿಗೆ ಇದು ತಮ್ಮ ಹಳೆಯ ನೆನಪುಗಳನ್ನು ಹಂಚಿಕೊಳ್ಳುವ ವೇದಿಕೆಯಾಯಿತು.

ಪ್ರೀತಿ ಇಲ್ಲದ ಮೇಲೆ ಹೂವು ಅರಳೀತು ಹೇಗೆ? ಮನಕ್ಕೆ ಮನ ಕೂಡೀತು ಹೇಗೆ? ಎಂಬ ಕವಿವಾಣಿಯನ್ನು ರಾಯ ಚೂರು ಜಿಲ್ಲೆಯ ವಿದ್ಯಾರ್ಥಿ, ಕೂಲಿಕಾರರ ಮುಖಂಡ ಚಂದ್ರಪ್ಪ ಹೊಸ್ಕೇರಾ ಹಾಗೂ ಟಿ.ಆರ್. ವೇದಾವತಿ ಅವರು ಕಲ್ಬುರ್ಗಿಯಲ್ಲಿ ನಿಜಮಾಡಿ ತೋರಿದರು.

ಖ್ಯಾತ ಸಾಹಿತಿ ಗೀತಾ ನಾಗಭೂಷಣ ಅವರು ಜಬರದಸ್ತಿ ಪ್ರೀತಿ ಎಂಬ ಹೊಸ ಪದವನ್ನು ಸೃಷ್ಟಿಸಿದರು. ಒಂದು ಗಂಡಿಗೊಂದು ಹೆಣ್ಣು ಹೇಗೊ ಏನೋ ಕೂಡಿಕೊಂಡು ಕಾಣದಂತ ಕನಸು ಕಂಡು ಬದುಕುವುದು ನಿಜವಾದ ಪ್ರೀತಿ. ಆದರೆ ಇದುವರೆಗೂ ಕಾಣದ ಹೆಣ್ಣು ಗಂಡನ್ನು ಎದುರುಬದುರು ನಿಲ್ಲಿಸಿ ಮದುವೆ ಮಾಡಿ ಇನ್ನು ಮೇಲೆ ಪ್ರೀತಿ ಮಾಡಿ ಎಂದು ಹುಕುಂ ನೀಡುವುದು ಜಬರದಸ್ತಿ ಪ್ರೀತಿ ಎಂದರು. ಇಂತಹ ಜಬರದಸ್ತಿ ಪ್ರೀತಿಗಳು ನಿಂತಲ್ಲಿ ಮಾತ್ರ ನಿಜವಾದ ಬದುಕು ಅರಳುತ್ತದೆ ಎಂದರು.

ಸತಿ ಪದ್ಧತಿಯನ್ನು ಸಮರ್ಥಿಸುವವರು ಹುಟ್ಟುಹಾಕಿರುವ ಕರಾಳ ಪ್ರಪಂಚದ ನಡುವೆಯೂ ಇಂತಹ ಮದುವೆಗಳು ನಡೆಯುತ್ತಿರುವುದು ಬದುಕಿನ ಬಗ್ಗೆ ಹೊಸ ಭರವಸೆಯನ್ನು ಮೂಡಿಸುತ್ತದೆ. ಪ್ರೀತಿಯ ಮಧ್ಯೆ ಹುಟ್ಟಿದ ಸಂತತಿ ಶಾಂತಿ ಹರಡುವ ಸಂತತಿಯಾಗಿರುತ್ತದೆ. ಪ್ರೀತಿ ಉಂಡು ಹುಟ್ಟಿದವರು ಪ್ರೀತಿಯ ಸಂದೇಶವನ್ನೇ ಹರಡುತ್ತಾರೆ. ಇಲ್ಲದವರು ವಿನಾಶದ ಬೀಜ ಬಿತ್ತುತ್ತಾರೆ ಎಂದರು.

ಆ ನಂತರದಲ್ಲಿ ವಿಚಾರಗಳ ಮಥನ ಪಕ್ಕಕ್ಕೆ ಸರಿದು ಮದುವೆ ಎಂಬ 'ಹಬ್ಬ'ದ ಬಗ್ಗೆ ಮಾತುಗಳು ತೇಲಿಬಂದವು. ಎತ್ತಣ ಮಾಮರ ಎತ್ತಣ ಕೋಗಿಲೆಯಂತೆ, ಗಿರಿಯ ಮೇಲಿನ ನೆಲ್ಲಿಕಾಯಿ ಸಮುದ್ರದ ಒಳಗಿನ ಉಪ್ಪನ್ನು ಒಂದುಗೂಡಿಸುವಂತೆ ದಿಕ್ಕುಗಳನ್ನು ಅಳಿಸಿಹಾಕಿ ಗಡಿಗಳನ್ನು ಅಳಿಸಿಹಾಕುವುದು ಪ್ರೀತಿ ಎಂದು ಬಳ್ಳಾರಿಯ ಸಂಗಾತಿಯನ್ನು ಮದುವೆಯಾಗಿರುವ ಬೀದರ್‌ನ ನೀಲಾ ಅವರು ಬಣ್ಣಿಸಿದರು.

ಭಾರತ ವಿದ್ಯಾರ್ಥಿ ಫೆಡರೇಷನ್ ನಾಯಕ ಕೆ.ಎನ್. ಉಮೇಶ್ ಅವರು ಮನೋಕೂಟ ಕೂಡಿದರೆ ಗಣ ಗುಣ ಬೇಕಾಗಿಲ್ಲ ಎಂದು ಪಂಚಾಂಗಗಳೂ ಬಣ್ಣಿಸುತ್ತವೆ, ಪಂಚಾಂಗಗಳೂ ಸಹಾ ಆಧುನೀಕರಣಗೊಂಡಿವೆ, ಇದರ ಆಧುನೀಕರಣಕ್ಕೆ ಒತ್ತಡ ಹೇರಿರುವುದು ಜನ ಚಳುವಳಿ ಎಂದರು.


ಎಸ್.ಎಫ್.ಐ.ನ ಪ್ರಕಾಶ್, ಡಿ.ವೈ.ಎಫ್.ಐ.ನ ಗುರುಶಾಂತ್, ಗಂಗವ್ವಾ ಬಿರಾದಾರ್, ಜಿ.ಎನ್. ಮೋಹನ್, ಸತ್ಯಾ ಎಸ್. ಅವರೂ ಶುಭ ಹಾರೈಸಿ ತಮ್ಮ ನೆನಪಿನ ಬುತ್ತಿ ಬಿಚ್ಚಿದರು.

'ಐಕ್ಯರಂಗ'ದ ಸಂಪಾದಕ ಜಿ.ಎನ್. ನಾಗರಾಜ್ ಅವರು ಮದುವೆಯ ಆಶಯವನ್ನು ವಿವರಿಸಿದರು.

ಚಂದ್ರಪ್ಪ ಹೊಸ್ಕೆರಾ ಟಿ.ಆರ್. ವೇದಾವತಿ ದಂಪತಿಗಳಿಗೆ ಐಕ್ಯರಂಗ ದ ಶುಭಾಶಯಗಳು.

ವಾರದ ವ್ಯಂಗ್ಯಚಿತ್ರ

'ಎಕನಾಮಿಕ್ಸ್ ಟೈಮ್ಸ್' ನಲ್ಲಿ ಆರ್.ಕೆ.ಲಕ್ಷ್ಮಣ್



Reg. No. 17015/64 KRNM/BGS-405 MAG (2) PRB DECR 319-79/79 AIKYARANGA WEEKLY
ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಎಸ್.ಸೂರ್ಯನಾರಾಯಣ ರಾವ್
ಸಂಪಾದಕರು:ಜಿ.ಎನ್ ನಾಗರಾಜ್, ಸಂಪಾದಕೀಯ ಕಛೇರಿ: ನಂ.12, 18ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು-27 ಫೋನ್ ನಂ. 2236462,
ಮುದ್ರಣ: ಹನಿ ಪ್ರಿಂಟರ್ಸ್, ಕ್ವೀನ್ ರಸ್ತೆ, ಬೆಂಗಳೂರು-1
Printed & Published by Communist Party of India(Marxist), Karnataka State Committee. Editor: G.N. NAGARAJ